
ವಾರ್ಷಿಕ ಚಂದಾ ರೂ.25/-

ಮಾಸಿಕ

# ಜನಪದ

ಸಂಪುಟ–05 • ಸಂಚಿಕೆ–11 • ಆಗಸ್ಟ್ 2022



ಸರ್ವರ ವಿಕಾಸಕ್ಕೆ

# ಸಮೃದ್ಧ ಕರ್ನಾಟಕ

ಇದು ನಮ್ಮ ಸಂಕಲ್ಪ...

Downloaded From:www.kpscvaani.com



ಭಾರತ ಸರ್ಕಾರದ ಕೈಗಾರಿಕೆ ಮತ್ತು ವ್ಯಾಪಾರ ಉತ್ತೇಜನ ಇಲಾಖೆಯು ಬಿಡುಗಡೆ ಮಾಡಿರುವ ಸ್ಟಾರ್ಟಪ್ ರ್‍ಯಾಂಕಿಂಗ್‌ನಲ್ಲಿ ರಾಜ್ಯವು 'ಎ' ರ್‍ಯಾಂಕಿಂಗ್ ಪಡೆದಿರುವ ಪ್ರಮಾಣಪತ್ರವನ್ನು ಐಟಿಬಿಟಿ ಸಚಿವರಾದ ಡಾ.ಅಶ್ವತ್ಥನಾರಾಯಣ ಅವರು ಮುಖ್ಯಮಂತ್ರಿ ಅವರಿಗೆ ಹಸ್ತಾಂತರಿಸಿದ ಸಂದರ್ಭ. ಐಟಿಬಿಟಿ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಡಾ.ಇ.ವಿ.ರಮಣರೆಡ್ಡಿ ಹಾಗೂ ಇಲಾಖೆಯ ನಿರ್ದೇಶಕರಾದ ಮೀನಾ ನಾಗರಾಜ್ ಅವರು ಉಪಸ್ಥಿತರಿದ್ದರು.



ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಉಡುಪಿ ಜಿಲ್ಲೆಯ ಮರವಂತೆ ಕಡಲ ಕಿನಾರೆಗೆ ಭೇಟಿ ನೀಡಿ ಕಡಲು ಕೊರೆತದ ಸ್ಥಳ ಪರಿಶೀಲನೆ ನಡೆಸಿ, ಸ್ಥಳೀಯ ನಿವಾಸಿಗಳೊಂದಿಗೆ ಅಹವಾಲು ಆಲಿಸುತ್ತಿರುವುದು. ಈ ಸಂದರ್ಭದಲ್ಲಿ ಸಚಿವರಾದ ಕೋಟ ಶ್ರೀನಿವಾಸ ಪೂಜಾರಿ, ಸ್ಥಳೀಯ ಶಾಸಕರುಗಳು ಉಪಸ್ಥಿತರಿದ್ದರು.

Downloaded From:www.kpscvaani.com

ವಾರ್ಷಿಕ ಚಂದಾ ರೂ.25/-

# ವಾರ್ತಾ ಜನಪದ

ಸಂಪುಟ-05 • ಸಂಚಿಕೆ-11 • ಆಗಸ್ಟ್ 2022



**06** ಒಂದು ವರ್ಷದಲ್ಲಿ ಸಮಗ್ರ ಕರ್ನಾಟಕದ ಅಭಿವೃದ್ಧಿಗೆ ಹೊಸ ದಿಕ್ಕುದೆಸೆ
• ಕಂ. ಕ. ಮೂರ್ತಿ



**13** ಕೃಷಿಕರ ಆದಾಯ ಹೆಚ್ಚಿಸುವ ದಿಶೆಯಲ್ಲಿ ಮುನ್ನಡೆಯುತ್ತಿರುವ ಸರ್ಕಾರ
• ಬಿ. ಜಿ. ಪೂರ್ಣಿಮ

**20** ಸರ್ವ ಜನರ ಕ್ಷೇಮಾಭಿವೃದ್ಧಿಯಡೆಗೆ ಸರ್ಕಾರದ ನಡೆ
• ಎ.ನಂಜುಂಡಪ್ಪ

**25** ರಾಜ್ಯದ ಸಮಗ್ರ ಪ್ರಗತಿಗೆ ಸರ್ಕಾರದ ಮುನ್ನುಡಿ
• ಯಗಟಿ ಮೋಹನ್



**30** ಭಾರತದ ರಾಷ್ಟ್ರಪತಿ ದ್ರೌಪದಿ ಮುರ್ಮು
• ಡಿ. ಪಿ. ಮುರಳೀಧರ್

**34** ಸುಂದರ, ಸ್ವಚ್ಛ, ಸಮೃದ್ಧ ಬೆಂಗಳೂರು ನಗರ ನಿರ್ಮಾಣಕ್ಕೆ ಪಣ
• ಬಿ.ಎಸ್.ಪಲ್ಲವಿ

**38** ಸಂಸ್ಕೃತಿ ಪರಂಪರೆ ಮತ್ತು ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆಗೆ ಸರ್ಕಾರದ ಕ್ರಮ
• ಎಂ. ಚೇತನ್

**42** ಸುಗಮ ಜೀವನಕ್ಕೆ ಸೋಪಾನವಾದ ಸರ್ಕಾರದ ಆಡಳಿತ ಸುಧಾರಣಾ ಕ್ರಮಗಳು
• ಗೊರೂರು ಪಂಕಜ

**49** ಬ್ರಿಟಿಷ್ ಅಧಿಕಾರಿಗಳ ದೌರ್ಜನ್ಯ ವಿರುದ್ಧ ಬಂಡಾಯ ಎದ್ದ ರೈತರು
• ಎನ್.ಜಗನ್ನಾಥ ಪ್ರಕಾಶ್



**46** ಸ್ವಾತಂತ್ರ್ಯೋತ್ಸವವೀಗ ಅಮೃತಂಗಮಯ
• ವೆಂಕಟೇಶ್ ಕೆ. ಜನಾದ್ರಿ

**50** ಪದಬಂಧ-33

ಪ್ರಧಾನ ಸಂಪಾದಕರು
ಡಾ|| ಪಿ. ಎಸ್. ಹರ್ಷ, ಐಪಿಎಸ್
ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಸಂಪಾದಕೀಯ ಸಲಹೆ
ಡಿ.ಪಿ. ಮುರಳೀಧರ್
ಜಂಟಿ ನಿರ್ದೇಶಕರು

ಸಹನಾ ಎಂ.
ಉಪ ನಿರ್ದೇಶಕರು

ಉಪ ಸಂಪಾದಕರು
ಬಿ. ಜಿ. ಪೂರ್ಣಿಮ

ಪ್ರಕಾಶಕರು
ಆಯುಕ್ತರು
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು - 560 001
Ph : 080-22028103 / 22028023
email : varthajanapada@yahoo.co.in
https://dipr.karnataka.gov.in

ಮುದ್ರಕರು
ಲಾವಣ್ಯ ಮುದ್ರಣ
# 19, ವಿದ್ಯಾಪೀಠ ವೃತ್ತ, ಬನಶಂಕರಿ 1ನೇ ಹಂತ, ಬೆಂಗಳೂರು-50

ಲೇಖಕರ ಅಭಿಪ್ರಾಯಗಳು ಸರ್ಕಾರದ ಅಭಿಪ್ರಾಯಗಳಲ್ಲ

Downloaded From:www.kpscvaani.com

# ನಿಮ್ಮ ಅನಿಸಿಕೆ

ಜುಲೈ 2022ರ ವಾರ್ತಾ ಜನಪದ ಸಂಚಿಕೆಯು ಹಲವಾರು ಜ್ಞಾನಾಧಾರಿತವಾದ ಬರಹಗಳನ್ನು ಹೊರತಂದಿದೆ. ಅದರಲ್ಲಿ ಕಾಳೇನಹಳ್ಳಿ ಅಗ್ರಹಾರದ ಕೆರೆ, ಮಳೆನಾಡ ಕಾನನದಲ್ಲಿ ಮನಮೋಹಕ ಜಲಪಾತಗಳು, ಅದರೊಂದಿಗೆ ಘನ ಸರಕಾರದ ಹಲವಾರು ಯೋಜನೆಗಳ ಕುರಿತಾದ ಬರಹಗಳು ಉತ್ತಮವೆನಿಸಿದವು. ಡಾ.ಪಿ.ಎಸ್.ಹರ್ಷ, ಪ್ರಧಾನ ಸಂಪಾದಕರು, ವಾರ್ತಾ ಜನಪದ ಪತ್ರಿಕೆ, ಇವರ ಸಂಪಾದಕೀಯ ಮಾತುಗಳು ಮನಸೂರೆಗೊಂಡವು. ಪ್ರತಿ ಲೇಖನಕ್ಕೆ ಬಳಸಿದ ಛಾಯಾಚಿತ್ರಗಳಂತೂ ಕಣ್ಣು ತುಂಬಿದವು.

**–ಡಾ. ಶಿವರಾಜ ಯತಗಲ್, ಲಿಂಗಸೂಗೂರು**

* * *

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ರಾಜ್ಯಕ್ಕೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಅವರು ಭಾಗವಹಿಸಿದ್ದ ಕಾರ್ಯಕ್ರಮಗಳ ಕುರಿತು ಜುಲೈನ ವಾರ್ತಾ ಜನಪದದಲ್ಲಿ ಸಂಪೂರ್ಣ ಮಾಹಿತಿಯನ್ನು ಒದಗಿಸಲಾಗಿದೆ. ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಈ ಬಾರಿ ನಮ್ಮ ರಾಜ್ಯದ ವಿಶ್ವ ಪ್ರಖ್ಯಾತ ಮೈಸೂರು ಅರಮನೆ ಆವರಣದಲ್ಲಿ ಜರುಗಿದ್ದು, ನಮ್ಮೆಲ್ಲರಿಗೆ ಒದಗಿ ಬಂದ ಯೋಗ ಎಂದರೆ ತಪ್ಪಾಗಲಾರದು. ಯೋಗ ಕುರಿತು ಹಲವು ಛಾಯಾಚಿತ್ರ ಸಮೇತ ಪ್ರಕಟಿಸಲಾಗಿರುವ ಲೇಖನ ಓದಿ ನಮ್ಮ ಮೈಸೂರಿನ ಬಗ್ಗೆ ಹೆಮ್ಮೆ ಎನಿಸಿತು.


**–ಮರೀಗೌಡ, ಮೈಸೂರು**

ರಾಯಚೂರು ಜಿಲ್ಲೆಯ 75 ಕೆರೆಗಳನ್ನು ಭಾರತ ಸ್ವಾತಂತ್ರ್ಯದ 75 ವರ್ಷಗಳ ಆಚರಣೆಯ ಪ್ರಯುಕ್ತ ಅಭಿವೃದ್ಧಿ ಮಾಡುತ್ತಿರವುದರ ಬಗ್ಗೆ ತಮ್ಮ ಪತ್ರಿಕೆಯಲ್ಲಿ ಪ್ರಕಟವಾಗಿರುವ ಲೇಖನ ಓದಿ ತುಂಬಾ ಸಂತೋಷವಾಯಿತು. ಬರದ ನಾಡಾದ ರಾಯಚೂರಿನಲ್ಲಿ ಈ ಯೋಜನೆಯಿಂದ ಅಂತರ್ಜಲ ಮಟ್ಟ ಹೆಚ್ಚಾಗಲಿದೆ. ಅಂತರ್ಜಲ ಮಟ್ಟ ಹೆಚ್ಚಾದರೆ ಈ ಭಾಗದ ಜನರ ನೀರಿನ ಬವಣೆ ನೀಗಲಿದೆ. ಆದಷ್ಟು ಬೇಗ ಈ ಯೋಜನೆಯ ಕಾರ್ಯ ಪೂರ್ಣಗೊಳ್ಳಲಿ ಎಂದು ಆಶಿಸುತ್ತೇನೆ.

**–ನಿರ್ಮಲಾ ಸಂಗಮೇಶ್, ಸಿಂಧನೂರು**

* * *

ಪ್ರಧಾನಮಂತ್ರಿ ಅವರು 33 ಸಾವಿರ ಕೋಟಿ ರೂ ವೆಚ್ಚದಲ್ಲಿ ಚಾಲನೆ ನೀಡಿರುವ ಅಭಿವೃದ್ಧಿ ಯೋಜನೆಗಳು ಅನುಷ್ಠಾನಕ್ಕೆ ಬಂದಲ್ಲಿ ನಮ್ಮ ರಾಜ್ಯದ ಚಿತ್ರಣವೇ ಬದಲಾಗಲಿದೆ. ಅಭಿವೃದ್ಧಿ ವಿಚಾರದಲ್ಲಿ ತೆಗೆದುಕೊಳ್ಳಲಾಗುವ ಕೆಲವು ತೀರ್ಮಾನಗಳು ಮತ್ತು ಸುಧಾರಣೆಗಳು ತಾತ್ಕಾಲಿಕವಾಗಿ ಅಹಿತಕರವಾಗಿರಬಹುದು. ಆದರೆ ಕಾಲಾನಂತರದಲ್ಲಿ ದೇಶವು ಅದರ ಲಾಭವನ್ನು ಪಡೆಯುತ್ತದೆ ಎಂದು ಮೋದಿ ಅವರು ಯುವ ಜನರಿಗೆ ಹೇಳಿರುವ ಕಿವಿ ಮಾತು ಸತ್ಯವಾದುದು. ಅವರು ಬೆಂಗಳೂರು ಮತ್ತು ಮೈಸೂರಿನಲ್ಲಿ ಭಾಗವಹಿಸಿದ್ದ ಎಲ್ಲಾ ಕಾರ್ಯಕ್ರಮಗಳ ವರದಿಯನ್ನು ತಮ್ಮ ಪತ್ರಿಕೆಯಲ್ಲಿ ಒದಗಿಸಿರುವುದರಿಂದ ಪತ್ರಿಕೆಯನ್ನು ಸಂರಕ್ಷಿಸಿ ಇಟ್ಟುಕೊಳ್ಳಬಹುದಾಗಿದೆ.




ಇದೇ ಸಂಚಿಕೆಯಲ್ಲಿ ಪ್ರಕಟವಾಗಿರುವ 'ಅಭಿವೃದ್ಧಿಯಿಂದ ಕಂಗೊಳಿಸುತ್ತಿರುವ ಕಾಳೇನಹಳ್ಳಿ ಅಗ್ರಹಾರದ ಕೆರೆ' ಲೇಖನ ಮತ್ತು ಮಾತುಮಂಥನದಲ್ಲಿ ನೀರು ಉಳಿತಾಯದ ಬಗ್ಗೆ ಮಳೆ ನೀರು ತಜ್ಞರು ಮತ್ತು ವಿಜ್ಞಾನಿಗಳಾದ ಎ.ಆರ್. ಶಿವಕುಮಾರ್ ಅವರ ಸಂದರ್ಶನ ಮನಸೆಳೆದವು. ಇಂತಹ ಉಪಯುಕ್ತ ಲೇಖನಗಳನ್ನು ಒದಗಿಸಿದ ಸಂಪಾದಕೀಯ ಮಂಡಳಿಗೆ ಅಭಿನಂದನೆಗಳು.

**–ರಾಜೇಶ್ವರಿ, ಬೆಂಗಳೂರು**

* * *

ನಿರ್ಲಕ್ಷ್ಯಕ್ಕೆ ಒಳಗಾಗಿ, ತ್ಯಾಜ್ಯಗಳಿಂದ ಮಲಿನಗೊಂಡಿದ್ದ ಕಾಳೇನಹಳ್ಳಿ ಅಗ್ರಹಾರದ ಕೆರೆಯನ್ನು ನಮ್ಮ ಚುನಾಯಿತ ಪ್ರತಿನಿಧಿಗಳು, ಬಡಾವಣೆಯ ನಾಗರಿಕರು ಮತ್ತು ಬಿಬಿಎಂಪಿ ಅಧಿಕಾರಿಗಳು ಒಟ್ಟಾಗಿ ಸೇರಿ ಅಭಿವೃದ್ಧಿಗೊಳಿಸಿರುವುದನ್ನು ತಿಳಿದು ತುಂಬಾ ಸಂತೋಷವಾಯಿತು.

ಕೆರೆಗಳು ಮಾಯವಾಗುತ್ತಿರುವ ದಿನಗಳಲ್ಲಿ ಸ್ಥಳೀಯ ನಾಗರಿಕರ ಬದ್ಧತೆಯಿಂದ ಈ ಕೆರೆಯು ಅಭಿವೃದ್ಧಿಗೊಳ್ಳುವಂತಾಗಿದೆ. ಇದಕ್ಕೆ ಕೇಂದ್ರ ಸಚಿವರಾದ ನಿರ್ಮಲಾ ಸೀತಾರಾಮನ್ ಅವರ ಸಹಕಾರವು ಸಿಕ್ಕ ಹಿನ್ನೆಲೆಯಲ್ಲಿ ಇದನ್ನು ಸ್ಥಳೀಯ ನಾಗರಿಕರು ಸಾಧಿಸಲು ಸಾಧ್ಯವಾಗಿದೆ. ಇವರಂತೆ ಎಲ್ಲಾ ಜನಪ್ರತಿನಿಧಿಗಳು ತಮ್ಮ ಕ್ಷೇತ್ರ ಅಭಿವೃದ್ಧಿಯ ಅನುದಾನದಲ್ಲಿ ಇಂತಹ ಕಾರ್ಯವನ್ನು ಹಮ್ಮಿಕೊಂಡರೆ ಬೆಂಗಳೂರು ನಗರ ಜಲಸಂಪತ್ಭರಿತ ನಗರವೆನಿಕೊಳ್ಳಲಿದೆ. ಇಂತಹ ಕೆಲಸಗಳು ಇನ್ನು ಹೆಚ್ಚು ಹೆಚ್ಚಾಗಿ ಜರುಗಲಿ ಎಂದು ಆಶಿಸುವೆ. ಆಗಲಾದರು ಇರುವ ಅಲ್ಪ ಕೆರೆಗಳಾದರೂ ಉಳಿದುಕೊಂಡಾವು.

**–ಧನಂಜಯ ಕೆ.ಆರ್, ಕೃಷ್ಣರಾಜನಗರ**

ಸರ್ಕಾರವು ಗ್ರಾಮೀಣ ಭಾಗದ ಜನರಿಗಾಗಿ ಹಲವು ಉಪಯುಕ್ತ ಯೋಜನೆಗಳನ್ನು ಹಮ್ಮಿಕೊಳ್ಳುತ್ತಿದೆ. ಈಗ ಗ್ರಾಮೀಣ ಭಾಗದ ಯುವ ಜನರು ಸ್ವಯಂ ಉದ್ಯೋಗ ಹೊಂದುವಂತೆ ಮಾಡಲು ಮನೆ ಬಾಗಿಲಿಗೆ ಕೌಶಲ್ಯ ಶಿಕ್ಷಣ ನೀಡುವ ಸಂಚಾರಿ ಬಸ್ ವ್ಯವಸ್ಥೆ ಮಾಡಿರುವುದನ್ನು ತಿಳಿದು ಸಂತಸವಾಯಿತು. ಗ್ರಾಮೀಣ ಭಾಗದ ಯುವಕ ಯುವತಿಯರು ಅಷ್ಟು ಸುಲಭವಾಗಿ ನಗರಕ್ಕೆ ಹೋಗಿ ಕೌಶಲ್ಯ ಶಿಕ್ಷಣ ಪಡೆಯಲು ಸಾಧ್ಯವಾಗುತ್ತಿರಲಿಲ್ಲ. ಹಾಗಾಗಿ ಮನೆ ಬಾಗಿಲಿಗೆ ಇಂತಹ ಅವಕಾಶ ಕಲ್ಪಿಸಿಕೊಟ್ಟ ಸರ್ಕಾರಕ್ಕೆ ಧನ್ಯವಾದಗಳು.

**–ಶ್ರೀನಿವಾಸ್ ಎಸ್. ಆರ್, ಸಕಲೇಶಪುರ**

'ವಾರ್ತಾ ಜನಪದ' ಮಾಸಿಕ ಈಗ www.kanaja.inನಲ್ಲಿ ಲಭ್ಯ

ವಾರ್ತಾ ಜನಪದ ಮಾಸಿಕಕ್ಕೆ ಚಂದಾದಾರರಾಗಲು ಬಯಸುವವರು ರೂ 25/– ಅನ್ನು ಪಾವತಿಸಲು ಕಡ್ಡಾಯವಾಗಿ ಸೇವಾಸಿಂಧುವಿನ https://sevasindhu.karnataka.gov.in ಮೂಲಕ ಆನ್ ಲೈನ್ ಅರ್ಜಿಯನ್ನು ಸಲ್ಲಿಸಬೇಕು.

ವಾರ್ತಾ ಜನಪದ ಪತ್ರಿಕೆಯ ಸಾಫ್ಟ್ ಕಾಪಿಯನ್ನು ಇ-ಮೇಲ್ ಮೂಲಕ ಉಚಿತವಾಗಿ ಚಂದಾದಾರರಾಗಲು ಇಚ್ಛಿಸುವವರು ತಮ್ಮ ಇ-ಮೇಲ್ ವಿಳಾಸವನ್ನು 9480841210 ಗೆ ಕಳುಹಿಸಿ ನೋಂದಾಯಿಸಿ ಕೊಳ್ಳಬಹುದು.

Downloaded From:www.kpscvaani.com



# ಸಂಪಾದಕೀಯ...

ಪ್ರಿಯ ಓದುಗ ಮಿತ್ರರೇ,

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಆಶಯದಂತೆ **'ಸಬ್ ಕಾ ಸಾತ್, ಸಬ್ ಕಾ ವಿಕಾಸ್'** ಎಂಬ ಆದರ್ಶದಲ್ಲೇ, ಎಲ್ಲಾ ವರ್ಗದ ಜನರ ಒಳಿತಿಗಾಗಿ ದೇಶದಲ್ಲೇ ಮೊಟ್ಟ ಮೊದಲಿಗೆ ಹಲವು ಜನಪ್ರಿಯ ಯೋಜನೆ ಮತ್ತು ಕಾರ್ಯಕ್ರಮಗಳನ್ನು ಕಳೆದ ಒಂದು ವರ್ಷದಲ್ಲಿ ಮುಖ್ಯಮಂತ್ರಿ ಬಸವರಾಜ ಎಸ್ ಬೊಮ್ಮಾಯಿ ಅವರ ನೇತೃತ್ವದ ಸರ್ಕಾರವು ಹಮ್ಮಿಕೊಳ್ಳುತ್ತಿದೆ. ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿಗಳಾಗಿ ಜುಲೈ 28ಕ್ಕೆ ಒಂದು ವರ್ಷ ತುಂಬಿದೆ. ಅವರ ಜನಪ್ರಿಯ ಆಡಳಿತವು ಸರ್ಕಾರಕ್ಕೆ ಇಷ್ಟು ಬೇಗ ಒಂದು ವರ್ಷವಾಯಿತೇ ಅನಿಸುವಂತೆ ಮಾಡಿದೆ.

ರೈತರು, ಮಹಿಳೆಯರು, ಮಕ್ಕಳು, ಸೇರಿದಂತೆ ಎಲ್ಲಾ ವರ್ಗದ ಜನರ ಏಳಿಗೆಯನ್ನು ದೃಷ್ಟಿಯಲ್ಲಿಟ್ಟುಕೊಳ್ಳುವ ಜೊತೆಗೆ ಅಸಮಾನತೆ ನಿವಾರಣೆಗೆ ಪೂರಕವಾಗುವಂತೆ ಮುಖ್ಯಮಂತ್ರಿಗಳು ಈ ಸಾಲಿನ ಆಯವ್ಯಯದಲ್ಲಿ ಯೋಜನೆಗಳಿಗೆ ಅನುದಾನವನ್ನು ಒದಗಿಸಿದ್ದಾರೆ. ಸರ್ವರನ್ನು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಅಭಿವೃದ್ಧಿ ಹೊಂದುವಂತೆ ಮಾಡುವುದು ಅವರ ಆಶಯ.

ರಾಜ್ಯದ ತಲಾವಾರು ಆದಾಯವನ್ನು ಹೆಚ್ಚಿಸುವ ಉದ್ದೇಶದಿಂದ ಎಲ್ಲಾ ವರ್ಗದ ಜನರಿಗೆ ಉದ್ಯೋಗವನ್ನು ಒದಗಿಸಲು ಮುಖ್ಯಮಂತ್ರಿಗಳು ಶಿಕ್ಷಣ, ಉದ್ಯೋಗ ಮತ್ತು ಸಬಲೀಕರಣದ ತಳಹದಿಯ ಮೇಲೆ ಕಾರ್ಯಕ್ರಮಗಳನ್ನು ರೂಪಿಸುತ್ತಿದ್ದಾರೆ. ಈ ನಿಟ್ಟಿನಲ್ಲಿ ಅವರು ದಾವೋಸ್‌ನ ವಿಶ್ವ ಆರ್ಥಿಕ ಶೃಂಗಸಭೆಯಿಂದ ರಾಜ್ಯಕ್ಕೆ 52 ಸಾವಿರ ಕೋಟಿ ರೂ ಬಂಡವಾಳ ಹೂಡಿಕೆಯನ್ನು ತಂದಿದ್ದಾರೆ. ದೇಶದಲ್ಲೇ ಸ್ಟಾರ್ಟಪ್ ರ್‍ಯಾಂಕಿಂಗ್‌ನಲ್ಲಿ ಕರ್ನಾಟಕ ರಾಜ್ಯವು 'ಎ' ವರ್ಗದಲ್ಲಿ ಅತ್ಯುತ್ತಮ ಸಾಧನೆ ಮಾಡಿದ ರಾಜ್ಯವೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಇದು ರಾಜ್ಯದಲ್ಲಿ ಉದ್ದಿಮೆಗಳು ಹೆಚ್ಚಾಗುವ ಸಾಧ್ಯತೆಯನ್ನು ಹೆಚ್ಚಾಗಿಸಿದೆ.

ಸರ್ಕಾರವು ಜನರ ಆರೋಗ್ಯ ಕಾಪಾಡುವಲ್ಲಿ ಕೂಡ ಹಲವು ಉತ್ತಮ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ಆಯವ್ಯಯದಲ್ಲಿ ಘೋಷಣೆ ಮಾಡಿದಂತೆ ರಾಜ್ಯದ 438 ಪ್ರಮುಖ ನಗರಗಳಲ್ಲಿ **'ನಮ್ಮ ಕ್ಲಿನಿಕ್'** ಸ್ಥಾಪನೆ ಮಾಡಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ಅಮೃತ ಮಹೋತ್ಸವ ಆಚರಣೆ ಹಿನ್ನೆಲೆಯಲ್ಲಿ 75 ದಿನಗಳವರೆಗೆ 18 ವರ್ಷ ಮೇಲ್ಪಟ್ಟ ನಾಗರಿಕರಿಗೆ ಉಚಿತವಾಗಿ ಬೂಸ್ಟರ್ ಡೋಸ್ ನೀಡಲಾಗುತ್ತಿದೆ.

ಕೋವಿಡ್ ನಂತರ ರಾಜ್ಯ ಸರ್ಕಾರವು ಆರ್ಥಿಕವಾಗಿ ಚೇತರಿಸಿಕೊಳ್ಳುತ್ತಿದೆ. ಪ್ರಮುಖ ತೆರಿಗೆ ಸಂಗ್ರಹ ಇಲಾಖೆಗಳು ಗುರಿ ಮೀರಿ ಆದಾಯ ಸಂಗ್ರಹಿಸಿರುವುದರಿಂದ ಪ್ರಸಕ್ತ ಆರ್ಥಿಕ ವರ್ಷದ ಮೊದಲ ತ್ರೈಮಾಸಿಕದಲ್ಲಿ ತೆರಿಗೆ ಮೂಲಗಳಿಂದ ನಿರೀಕ್ಷಿತ ಗುರಿಗಿಂತ ಉತ್ತಮ ಆದಾಯವನ್ನು ಸಂಗ್ರಹಿಸಲಾಗಿದೆ. 8ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯನ್ನು ಪ್ರಧಾನಮಂತ್ರಿ ಅವರ ನೇತೃತ್ವದಲ್ಲಿ ನಮ್ಮ ರಾಜ್ಯದಲ್ಲಿ ಯಶಸ್ವಿಯಾಗಿ ಆಚರಿಸಿರುವುದು ಕೂಡ ರಾಜ್ಯ ಸರ್ಕಾರದ ಒಂದು ಸಾಧನೆ. ಪ್ರಧಾನಿ ಅವರು ರಾಜ್ಯದ ಅಭಿವೃದ್ಧಿಗೆ ಪೂರಕವಾಗುವಂತಹ 33 ಸಾವಿರ ಕೋಟಿ ರೂ ವೆಚ್ಚದ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಶಂಕುಸ್ಥಾಪನೆ ಮತ್ತು ಉದ್ಘಾಟನೆಯನ್ನು ನೆರವೇರಿಸಿದ್ದಾರೆ.

ಜನರ ಸುತ್ತ ಅಭಿವೃದ್ಧಿಯಾಗಬೇಕು ಎಂಬ ಧ್ಯೇಯದೊಂದಿಗೆ ಸರ್ಕಾರವು ಜನರ ಮನೆ ಬಾಗಿಲಿಗೆ ಸೇವೆ ಒದಗಿಸುವಂತಹ ಮತ್ತು ಎಲ್ಲಾ ವರ್ಗದ ಜನರ ಆದಾಯ ಹೆಚ್ಚಿಸುವಂತಹ ಯೋಜನೆಗಳನ್ನು ಹಮ್ಮಿಕೊಳ್ಳುತ್ತಾ, ಸದಾ ಜನಪರ ಮತ್ತು ಸಮಾಜದ ಕಟ್ಟಕಡೆಯ ಜನರ ಸಂಕಷ್ಟಗಳಿಗೆ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಮುನ್ನಡೆದಿದೆ. ಹಾಗಾಗಿ ಬಸವರಾಜ ಬೊಮ್ಮಾಯಿ ಅವರ ನೇತೃತ್ವ ಸರ್ಕಾರದ ಆಡಳಿತದ ಮೇಲೆ ಬೆಳಕು ಚೆಲ್ಲುವಂತಹ ಲೇಖನಗಳನ್ನು ಈ ಸಂಚಿಕೆಯಲ್ಲಿ ಪ್ರಕಟಿಸಲಾಗಿದೆ.

ಇದೇ ಮೊದಲ ಬಾರಿಗೆ ಬುಡಕಟ್ಟು ಸಮಾಜದ ಮಹಿಳೆಯೊಬ್ಬರು ದೇಶದ 15ನೇ ರಾಷ್ಟ್ರಪತಿ ಸ್ಥಾನವನ್ನು ಅಲಂಕರಿಸಿರುವುದು ಐತಿಹಾಸಿಕ. ನಾಗರಿಕರ ಭರವಸೆಯ ಈ ಅತ್ಯುನ್ನತ ಹುದ್ದೆಯನ್ನು ಸಮರ್ಥವಾಗಿ ನಿಭಾಯಿಸುವ ಸಾಮರ್ಥ್ಯವನ್ನು ದ್ರೌಪದಿ ಮುರ್ಮು ಅವರು ಹೊಂದಿದ್ದಾರೆ.

ಆಜಾದಿ ಕಾ ಅಮೃತ್ ಮಹೋತ್ಸವ ಆಚರಣೆ ಹಿನ್ನೆಲೆಯಲ್ಲಿ ಕಳೆದ ಒಂದು ವರ್ಷದಿಂದಲೂ ಸರ್ಕಾರವು ವಿವಿಧ ಅಮೃತ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ಇದೇ ತಿಂಗಳ 13 ರಿಂದ 15 ರವರೆಗೆ ಮೂರು ದಿನ ಮನೆಗಳೂ ಸೇರಿದಂತೆ ರಾಜ್ಯದಾದ್ಯಂತ ಒಂದು ಕೋಟಿ ರಾಷ್ಟ್ರಧ್ವಜವನ್ನು ಹಾರಿಸುವ **"ಹರ್ ಘರ್ ತಿರಂಗಾ"** ಕಾರ್ಯಕ್ರಮಕ್ಕೆ ಸಿದ್ಧತೆ ನಡೆದಿದೆ. ಬನ್ನಿ, ಎಲ್ಲರೂ ಈ ಸಂಭ್ರಮದ ಆಚರಣೆಯಲ್ಲಿ ಪಾಲ್ಗೊಳ್ಳುವ ಮೂಲಕ ದೇಶಾಭಿಮಾನ ಮೆರೆಯೋಣ.

ಓದುಗರೆಲ್ಲರಿಗೂ 75 ನೇ ಸ್ವಾತಂತ್ರ್ಯ ಅಮೃತ ಮಹೋತ್ಸವದ ಶುಭಾಶಯಗಳು.

**ಡಾ|| ಪಿ. ಎಸ್. ಹರ್ಷ, ಐಪಿಎಸ್**
**ಪ್ರಧಾನ ಸಂಪಾದಕರು**

**ಪ್ರಧಾನ ಸಂಪಾದಕರು,** ವಾರ್ತಾ ಜನಪದ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ,
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001. email : feedbackjanapada@gmail.com



Downloaded From:www.kpscvaani.com



# ಒಂದು ವರ್ಷದಲ್ಲಿ ಸಮಗ್ರ ಕರ್ನಾಟಕದ ಅಭಿವೃದ್ಧಿಗೆ

# ಹೊಸ ದಿಕ್ಕುದೆಸೆ...

ಕಂ.ಕ.ಮೂರ್ತಿ



Downloaded From:www.kpscvaani.com

**ಸರಳತೆ, ಸೌಜನ್ಯ ಮತ್ತು ಸಂವೇದನಾಶೀಲ ನಡವಳಿಕೆಯಿಂದ ನಾಡಿನ ಜನರ ಹೃದಯದಲ್ಲಿ 'ಕಾಮನ್ ಮ್ಯಾನ್ ಸಿಎಂ' ಎಂಬ ಛಾಪು ಮೂಡಿಸಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಆಡಳಿತ ಜುಲೈ 28ಕ್ಕೆ ಒಂದು ವರ್ಷ ಪೂರೈಸಿದೆ. ಕೋವಿಡ್ ನಂತರ ಆಡಳಿತಕ್ಕೆ ಮತ್ತಷ್ಟು ಚುರುಕು ನೀಡಿರುವ ಮುಖ್ಯಮಂತ್ರಿಗಳು ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಮುಂದಾಗಿದ್ದಾರೆ. ನಾಡಿನ ಎಲ್ಲ ವರ್ಗದ ಯೋಗಕ್ಷೇಮವನ್ನೇ ಮುಖ್ಯ ಗುರಿಯಾಗಿಟ್ಟುಕೊಂಡ ಸರ್ಕಾರ 'ಸಬ್ ಕಾ ಸಾತ್ ಸಬ್ ಕಾ ವಿಕಾಸ್' ಎಂಬ ಆದರ್ಶದ ಆಡಳಿತ ಮಂತ್ರಕ್ಕೆ ಅನುಗುಣವಾಗಿ ಮುನ್ನಡೆಯುತ್ತಿದೆ. ಅವರ ನೇತೃತ್ವ ಸರ್ಕಾರದ ಒಂದು ವರ್ಷದ ಸಾಧನೆಯ ಕಿರುನೋಟ ಇಲ್ಲಿದೆ.**



ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರಾಜಕೀಯ ನಾಯಕತ್ವಕ್ಕೆ ಅದರದೇ ಮೌಲ್ಯವಿದೆ. ಜನಪರತೆ ಮತ್ತು ದೂರದೃಷ್ಟಿ ಅದರ ಧರ್ಮ. ಆಡಳಿತ ಚುಕ್ಕಾಣಿ ಹಿಡಿದವರಲ್ಲಿ ಮಾತೃ ಹೃದಯವನ್ನು ಜನತೆ ಅಪೇಕ್ಷಿಸುತ್ತದೆ. ಹಮ್ಮುಬಿಮ್ಮು ಇಲ್ಲದ ಸರಳ ನಡವಳಿಕೆ, ಸೌಜನ್ಯ ತುಂಬಿದ ವ್ಯಕ್ತಿತ್ವ, ನೊಂದವರಿಗೆ ಮರುಗುವ ಮನಸ್ಸು, ಸದಾ ಜನಪರ ಆಲೋಚನೆ, ಸಮಾಜದ ಕಟ್ಟಕಡೆಯ ಜನರ ಕಣ್ಣೊರೆಸುವ ಹಂಬಲ, ಇವು ಯಾವುದೇ ರಾಜಕೀಯ ನಾಯಕತ್ವಕ್ಕೆ ಮೆರುಗು ತರುವ ಗುಣಗಳು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಮ್ಮ ವಿಶಿಷ್ಟ ವ್ಯಕ್ತಿತ್ವ ಮತ್ತು ವಿಭಿನ್ನ ಆಡಳಿತ ಶೈಲಿಯಿಂದ ನಾಡಿನ ಪ್ರಗತಿಗೆ ಹೊಸ ಭಾಷ್ಯ ಬರೆದಿದ್ದಾರೆ.

ಸುದೀರ್ಘ ಸಾರ್ವಜನಿಕ ಬದುಕಿನ ಅನುಭವದಿಂದ ಹರಳುಗಟ್ಟಿದ ವ್ಯಕ್ತಿತ್ವ ಅವರದು. ನಾಡಿನ ಮುಖ್ಯಮಂತ್ರಿಯಾಗಿದ್ದ ಅವರ ತಂದೆ ಎಸ್.ಆರ್.ಬೊಮ್ಮಾಯಿ ಅವರ ಮೇರು ವ್ಯಕ್ತಿತ್ವದ ನೆರಳಿನಲ್ಲಿ ಬೆಳೆದವರು. ಅವರು ಆಡಳಿತದಲ್ಲಿ ತೋರಿದ ದಕ್ಷತೆ ಮತ್ತು ಜನಪರತೆಯ ಗುಣಗಳ ಪ್ರಭಾವಕ್ಕೆ ಒಳಗಾದವರು. ಯಾವುದೇ ವಿಷಯವನ್ನು ಆಳವಾಗಿ ಅಧ್ಯಯನ ಮಾಡುವುದು ಮುಖ್ಯಮಂತ್ರಿಗಳ ಗುಣ. ನಾಡಿನ ಹಿತರಕ್ಷಣೆ ವಿಷಯದಲ್ಲಿ ರಾಜಿ ಇಲ್ಲದ ಮನೋಭಾವ. ಸದನದಲ್ಲಿ ಅವರೊಬ್ಬ ಅತ್ಯುತ್ತಮ ಸಂಸದೀಯಪಟು. ತಮ್ಮ ವಿಚಾರವನ್ನು ಯಾವುದೇ ಅವಸರವಿಲ್ಲದೇ, ಅಬ್ಬರವಿಲ್ಲದೇ ತಾರ್ಕಿಕ ಅಂಶಗಳ ಮೂಲಕ ಇಡೀ ಸದನಕ್ಕೆ ಮನವರಿಕೆ ಮಾಡುವ ತಾಕತ್ತು ಅವರದು. ಆಡಳಿತ ಪಕ್ಷದಲ್ಲಿರಲಿ, ವಿರೋಧ ಪಕ್ಷದಲ್ಲಿರಲಿ ಸಂದೀಯ ಘನತೆಗೆ ಅನುಗುಣವಾಗಿ ಅವರು ತೋರಿದ, ತೋರುತ್ತಿರುವ ನಡಾವಳಿ ಮಾಗಿದ ಅವರ ವ್ಯಕ್ತಿತ್ವಕ್ಕೆ ಸಾಕ್ಷಿ.

ಅಧ್ಯಯನ, ಅನುಭವ ಮತ್ತು ಜನಪರ ಹೋರಾಟಗಳಿಂದ ಪಕ್ವವಾಗಿರುವ ಅವರ ಕೈಗೆ ಕಳೆದ ಒಂದು ವರ್ಷದಿಂದ ಸಿಕ್ಕಿದ ನಾಡಿನ ಆಡಳಿತ ಹೊಸ ಮೈಲಿಗಲ್ಲುಗಳನ್ನು ಸ್ಥಾಪಿಸಿದೆ. ನಾಡಿನ ಜನರ ಬದುಕಿನಲ್ಲಿ ಹೊಸ ಆಶಾಕಿರಣ ಮೂಡಿಸಿದೆ. ಅಭಿವೃದ್ಧಿಯ ವೇಗಕ್ಕೆ ಹೊಸ ದಿಕ್ಕುದೆಸೆ ಬಂದಿದೆ. ರಾಜ್ಯದ 23 ನೇ ಮುಖ್ಯಮಂತ್ರಿಯಾಗಿ ಕಳೆದ ಜುಲೈ 28ರಂದು ಅಧಿಕಾರ ಸ್ವೀಕರಿಸಿದ ಅವರು ಕಳೆದ ಒಂದು ವರ್ಷದ ಅವಧಿಯಲ್ಲಿ ಆಡಳಿತಕ್ಕೆ ಹೊಸತನ ತಂದಿದ್ದಾರೆ. ಹೊಸ ಆಲೋಚನೆ, ಯೋಜನೆಗಳಿಂದ ಮೆರುಗು ತುಂಬಿದ್ದಾರೆ. ಆಗಾಗ ಉನ್ನತ ಅಧಿಕಾರಿಗಳ ಸಭೆ ನಡೆಸಿ ಸರ್ಕಾರವನ್ನು ಜನ ಸಾಮಾನ್ಯರ ಬಳಿಗೆ ತೆಗೆದುಕೊಂಡು ಹೋಗಲು ಅಗತ್ಯ ಸಲಹೆ, ಸೂಚನೆ ನೀಡಿದ್ದಾರೆ. ಅವಶ್ಯ ಬಿದ್ದಾಗ ಚಾಟಿ ಬೀಸಿ ಆಡಳಿತಕ್ಕೆ ಚುರುಕು ಮುಟ್ಟಿಸಿದ್ದಾರೆ. ಎಲ್ಲ ವರ್ಗಗಳ ಕಲ್ಯಾಣದ ಹೊಂಗನಸನ್ನೇ ಅಂತ:ಸತ್ವವಾಗಿ ಹೊಂದಿದ ಬಜೆಟ್ ನೀಡಿ



Downloaded From:www.kpscvaani.com




**ನಾಡಿನ ಹಿತದ ಪ್ರಶ್ನೆ ಬಂದಾಗ ರಾಜಕೀಯ ವಿರೋಧಿಗಳನ್ನು ಸಹ ಒಲಿಸಿ, ಒಳಗೊಳ್ಳುವ ಧೀಮಂತಿಕೆ. ರಾಜಕೀಯ ಭಿನ್ನಮತ, ಸೈದ್ಧಾಂತಿಕ ಜಗಳವನ್ನು ಕ್ಷಣ ಹೊತ್ತು ಬದಿಗಿಟ್ಟು ರಾಜ್ಯದ ಹಿತಕ್ಕಾಗಿ ಒಗ್ಗಟ್ಟು ರೂಪಿಸುವಲ್ಲಿ ಅವರು ಎತ್ತಿದ ಕೈ. ಕಳೆದ ಒಂದು ವರ್ಷದ ಅವಧಿಯಲ್ಲಿ ಇದು ಎದ್ದು ಕಾಣುವ ಅಂಶ.**

ಸರ್ವಾಂಗೀಣ ಅಭಿವೃದ್ಧಿಗೆ ದಿಕ್ಕುದೆಸೆ ಬರೆದಿದ್ದಾರೆ.

ಕರ್ನಾಟಕ ಅಭಿವೃದ್ಧಿಯ ಹೊಸ ನಕ್ಷೆಯಲ್ಲಿ ಇಟ್ಟಿರುವ ಹೆಜ್ಜೆಗಳಿಗೆ ನಾಡಿನ ಜನಸಾಮಾನ್ಯರು ಮಾತ್ರವಲ್ಲ, ದೇಶದ ಪ್ರಧಾನಿ ನರೇಂದ್ರಮೋದಿ ಅವರೆ ತಲೆದೂಗಿದ್ದಾರೆ. ಅವರೊಬ್ಬ ದೂರದೃಷ್ಟಿ ಉಳ್ಳ ಸಮರ್ಥ ಆಡಳಿತಗಾರ ಮಾತ್ರವಲ್ಲ, ಜನಸಾಮಾನ್ಯರ ಕಡುಕಷ್ಟಗಳಿಗೆ ಸಂವೇದನಾಶೀಲರಾಗುತ್ತಾರೆ. ಅವರ ಸಮಸ್ಯೆಗಳಿಗೆ ಪರಿಹಾರ ಹುಡುಕುತ್ತಾರೆ. ಜನರ ಜತೆ ಅವರು ಸರಳವಾಗಿ, ಸಹಜವಾಗಿ ಬೆರೆಯುತ್ತಾರೆ. ಅವರದೇ ಪರಿಭಾಷೆಯಲ್ಲಿ ಹೃದಯ ಮುಟ್ಟುವಂತೆ ಮಾತನಾಡುತ್ತಾರೆ. ನೊಂದ ಜೀವಗಳಿಗೆ ಸಾಂತ್ವನ ಹೇಳುತ್ತಾರೆ. ಬದುಕಿಗೆ ಭರವಸೆ ತುಂಬುತ್ತಾರೆ. ನೋವು, ನಲಿವು, ದು:ಖ ದುಮ್ಮಾನ ಹೊತ್ತ ಜನ ಸಾಗರದಲ್ಲಿ ತಾವೂ ಒಬ್ಬ ಸಾಮಾನ್ಯರಂತೆ ಕರಗಿ ಹೋಗುತ್ತಾರೆ. ಕಾಮಾನ್ ಮ್ಯಾನ್ ಸಿಎಂ ಎನಿಸಿಕೊಳ್ಳುತ್ತಾರೆ.

ನಾಡಿನ ಹಿತದ ಪ್ರಶ್ನೆ ಬಂದಾಗ ರಾಜಕೀಯ ವಿರೋಧಿಗಳನ್ನು ಸಹ ಒಲಿಸಿ, ಒಳಗೊಳ್ಳುವ ಧೀಮಂತಿಕೆ. ರಾಜಕೀಯ ಭಿನ್ನಮತ, ಸೈದ್ಧಾಂತಿಕ ಜಗಳವನ್ನು ಕ್ಷಣ ಹೊತ್ತು ಬದಿಗಿಟ್ಟು ರಾಜ್ಯದ ಹಿತಕ್ಕಾಗಿ ಒಗ್ಗಟ್ಟು ರೂಪಿಸುವಲ್ಲಿ ಅವರು ಎತ್ತಿದ ಕೈ. ಕಳೆದ ಒಂದು ವರ್ಷದ ಅವಧಿಯಲ್ಲಿ ಇದು ಎದ್ದು ಕಾಣುವ ಅಂಶ. ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ ಅನಿರೀಕ್ಷಿತ ಎನ್ನುವಂತೆ ಅವರು ಮುಖ್ಯಮಂತ್ರಿ ಆಗುವ ಹೊತ್ತಿಗೆ ಗೃಹ ಸಚಿವರಾಗಿ ಅನೇಕ ಸಂಕಷ್ಟಗಳ ಸನ್ನಿವೇಶಗಳನ್ನು ಸಮರ್ಥವಾಗಿ ಪರಿಹರಿಸಿದ ಅನುಭವ ಅವರಿಗೆ ಇತ್ತು. ನಾಡಿನ ಸಮಗ್ರ ಅಭಿವೃದ್ಧಿಯ ಅಂತ:ಸತ್ವ ಹೊಂದಿದ ಬಜೆಟ್ ಮಂಡಿಸಿದ ಮುಖ್ಯಮಂತ್ರಿಗಳು ತಮ್ಮ ಹೊಸ ಆಲೋಚನೆ, ಯೋಚನೆ, ಕನಸುಗಳೊಂದಿಗೆ ಇಡೀ ಆಡಳಿತ ಸೂತ್ರವನ್ನು ಸಂಯಮದಿಂದ ನಿಭಾಯಿಸುವ ಮೂಲಕ ಕಳೆದ ಒಂದು ವರ್ಷದಲ್ಲಿ ರಾಜ್ಯದಲ್ಲಿ ಅಭಿವೃದ್ಧಿಯ ಹೊಸ ಅಧ್ಯಾಯ ಬರೆದಿದ್ದಾರೆ. ಎಲ್ಲಾ ವರ್ಗ, ಪ್ರದೇಶಗಳ ಹಿತವನ್ನು ಗಮನದಲ್ಲಿಟ್ಟುಕೊಂಡು ಜಾರಿಗೆ ತರುತ್ತಿರುವ ಯೋಜನೆಗಳು ಎಲ್ಲರನ್ನೂ ಸಂತೈಸುವ ತಾಯ್ತನ ಹೊಂದಿದೆ ಎನ್ನುವುದು ಮುಖ್ಯವಾದ ಸಂಗತಿ.

### ಪುಸ್ತಕ ಸಂಸ್ಕೃತಿಗೆ ಶ್ರೀಕಾರ

ಅಧಿಕಾರಸ್ಥರನ್ನು ಓಲೈಸಲು ದೊಡ್ಡ ದೊಡ್ಡ ಹಾರ, ತುರಾಯಿ ಹಾಕುವುದು, ಸನ್ಮಾನಿಸುವುದು, ಹೊಗಳಿ ಅಟ್ಟಕ್ಕೇರಿಸುವುದು ರೂಢಿ. ಆದರೆ ಇಂತಹ ಸಂಸ್ಕೃತಿಗೆ ಮುಖ್ಯಮಂತ್ರಿಗಳು ಆರಂಭದಲ್ಲಿಯೇ ಕಡಿವಾಣ ಹಾಕಿದ್ದು ಅವರ ಹೆಗ್ಗಳಿಕೆ. ಮುಖ್ಯಮಂತ್ರಿಗಳು ಮೂಲತ: ಪುಸ್ತಕ ಪ್ರಿಯರು. ನಿರಂತರ ಓದು ಅವರ ಜೀವನದ ಉದ್ದಕ್ಕೂ ರೂಢಿಗತ. ಮುಖ್ಯಮಂತ್ರಿ ಆದ ಕೂಡಲೇ ತಮ್ಮನ್ನು ಸನ್ಮಾನಿಸಲು ಬಂದ ಜನಕ್ಕೆ ಅವರು ಕೊರಳೊಡ್ಡಲಿಲ್ಲ. ಸನ್ಮಾನ ಬೇಡ, ಹಾರ ತುರಾಯಿಯೂ ಬೇಡ, ನಿಮ್ಮ ಪ್ರೀತಿ, ಅಭಿಮಾನದ ಅಭಿವ್ಯಕ್ತಿಗೆ ಒಂದು ಕನ್ನಡ ಪುಸ್ತಕ ಕೊಡಿ ಸಾಕು ಎಂದರು. ಬಹುತೇಕ ಸಚಿವರು, ಶಾಸಕರು ಇದನ್ನೇ ಅನುಸರಿಸಿದರು. ಕನ್ನಡ ಪುಸ್ತಕಗಳಿಗೆ ಬೇಡಿಕೆ ಬಂತು. ಇದು ಮುಖ್ಯಮಂತ್ರಿಗಳು ಆರಂಭದಲ್ಲಿಯೇ ತೋರಿದ ಹೊಸತನ.

ಬಸವರಾಜ ಬೊಮ್ಮಾಯಿ ಅವರು ಅಧಿಕಾರ ಸ್ವೀಕರಿಸಿದ ದಿನ ಕೈಗೊಂಡ ನಿರ್ಧಾರಗಳು ಆಡಳಿತದ ದಿಕ್ಸೂಚಿ ಆಯಿತು. ಕೃಷಿಕರ ಮಕ್ಕಳು ಉನ್ನತ ಶಿಕ್ಷಣದಿಂದ ವಂಚಿತರಾಗುತ್ತಿರುವುದಕ್ಕೆ ಹಣಕಾಸಿನ ತೊಂದರೆಯೇ ಕಾರಣ ಎಂಬುದನ್ನು ಅರಿತ ಅವರು, ರೈತರ ಮಕ್ಕಳ ಉನ್ನತ ಶಿಕ್ಷಣಕ್ಕೆ ಪ್ರೋತ್ಸಾಹ ನೀಡಲು ಯೋಜನೆ ಪ್ರಕಟಿಸಿದರು. ಶಿಷ್ಯ ವೇತನಕ್ಕಾಗಿ ಒಂದು ಸಾವಿರ ಕೋಟಿ ರೂ. ಘೋಷಿಸಿದರು. 'ಮುಖ್ಯಮಂತ್ರಿ ರೈತ ವಿದ್ಯಾನಿಧಿ' ಹೆಸರಿನ ಯೋಜನೆ ಅನ್ನದಾತನ ಋಣ ತೀರಿಸುವ ಕೈಂಕರ್ಯದಿಂದ ಕೂಡಿದೆ. ದೇಶದಲ್ಲಿ ಪ್ರಥಮವಾಗಿ ರೂಪಿಸಲಾದ ಯೋಜನೆ ಎಂಬ ಹೆಗ್ಗಳಿಕೆ. ಕಳೆದ ಸೆಪ್ಟೆಂಬರ್ 5ರಂದು ಚಾಲನೆ ಪಡೆದುಕೊಂಡ ಯೋಜನೆ ಲಕ್ಷಾಂತರ ರೈತ ಮಕ್ಕಳ ಉನ್ನತ ವ್ಯಾಸಾಂಗದ ಕನಸಿನ ವಿದ್ಯಾ ಜ್ಯೋತಿ ಪ್ರಖರವಾಗಿ ಉರಿಯುವಂತೆ ಮಾಡಿದೆ. ಸಂಧ್ಯಾ ಸುರಕ್ಷಾ ಯೋಜನೆಯಲ್ಲಿ ನೀಡಲಾಗುತ್ತಿದ್ದ 1000 ರೂ. ಮಾಸಾಶನವನ್ನು 1200 ರೂಗೆ ಹಾಗೂ ವಿವಿಧ ಮಾಸಾಶನಗಳನ್ನು 600 ರೂ, ನಿಂದ 800 ರೂಗೆ ಹೆಚ್ಚಿಸಿದರು.

ಪರಿಶಿಷ್ಟ ಪಂಗಡದ ಸಮುದಾಯದ ಕಲ್ಯಾಣಕ್ಕೆ ಪ್ರತ್ಯೇಕ ಸಚಿವಾಲಯ ಸ್ಥಾಪನೆ, ಮಹಿಳಾ ಕಲ್ಯಾಣ ಕಾರ್ಯಕ್ರಮಗಳಿಗೆ



Downloaded From:www.kpscvaani.com

ಸಿಎಂ ನೇತೃತ್ವದ ಸಮಿತಿ ರಚನೆ, ಬಜೆಟ್‌ನಲ್ಲಿ ಪ್ರತ್ಯೇಕ ಅನುದಾನ ಈ ಆರಂಭಿಕ ಹೆಜ್ಜೆಗಳು ಸರ್ಕಾರದ ಕಾಳಜಿ ಮತ್ತು ಆದ್ಯತೆಯನ್ನು ನಾಡಿನ ಜನರ ಮುಂದೆ ಖಚಿತಪಡಿಸಿದವು.
ಮುಖ್ಯಮಂತ್ರಿಗಳು ಕಂಡ ನವಕರ್ನಾಟಕದ ಕನಸು ಸುವರ್ಣ ಸ್ವಾತಂತ್ರೋತ್ಸವದ ದಿನಾಚರಣೆಯಲ್ಲಿ ಹೊಂಗನಸಾಗಿ ರಾಜ್ಯದ ಜನರ ಹೃದಯವನ್ನು ತಲುಪಿತು. ಅಂದು ಅವರು ಪ್ರಕಟಿಸಿದ ಹದಿನಾಲ್ಕು ಅಮೃತ ಯೋಜನೆಗಳು ಚಿಗುರೊಡೆಯುತ್ತಿವೆ. ಸಶಕ್ತ ಗ್ರಾಮೀಣ ಕರ್ನಾಟಕವನ್ನು ಕಟ್ಟುವಲ್ಲಿ ಸಮರ್ಥ ಪಾತ್ರ ವಹಿಸುತ್ತಿವೆ.

ರಾಜ್ಯದ 750 ಗ್ರಾಮ ಪಂಚಾಯ್ತಿಗಳನ್ನು ಗುರುತಿಸಿ ಅವುಗಳನ್ನು ಮಾದರಿಯಾಗಿ ರೂಪಿಸುವುದು ಈ ಮಹತ್ವಾಕಾಂಕ್ಷಿ ಯೋಜನೆಯ ಹೆಗ್ಗನಸು. ಅಭಿವೃದ್ಧಿಯ ಜತೆಗೆ ಸಮಗ್ರತೆಯನ್ನು ಇದು ಒಳಗೊಂಡಿದೆ. ಹೈದರಾಬಾದ್ ಕರ್ನಾಟಕ, ಉತ್ತರ ಕರ್ನಾಟಕ ಸೇರಿದಂತೆ 750 ಗ್ರಾಮಗಳನ್ನು ಅಮೃತ ಗ್ರಾಮ ಪಂಚಾಯ್ತಿ ಎಂದು ಗುರುತಿಸಿ ಅವುಗಳ ಸಮಗ್ರ ಮುಖವನ್ನೇ ಬದಲಾಯಿಸುವ ಸಂಕಲ್ಪ ಮಾಡಲಾಗಿದೆ. ಶುದ್ಧ ಕುಡಿಯುವ ನೀರಿನ ಸರಬರಾಜು, ಬೀದಿ ದೀಪಗಳ ಅಳವಡಿಕೆ, ಅತ್ಯಾಧುನಿಕ ಡಿಜಿಟಲ್ ಗ್ರಂಥಾಲಯ, ಘನ ತ್ಯಾಜ್ಯ ವಿಲೇವಾರಿ ಮುಂತಾದ ಕ್ರಮಗಳ ಮೂಲಕ ಹೊಸತನ ಮೇಳೈಸಲಿದೆ. ಹಳ್ಳಿಗಳನ್ನು ಭಾರತದ ಆತ್ಮ ಎಂದು ಕರೆದರು ಗಾಂಧೀಜಿ. ಅಂತಹ ಆತ್ಮಗಳಿಗೆ ಬಲ ತುಂಬುವ ಕಾರ್ಯ ಭರದಿಂದ ಸಾಗಿದೆ. ಜನಪ್ರಿಯರಾಗುವುದು ಸುಲಭ, ಜನೋಪಯೋಗಿಯೂ ಆಗಬೇಕು. ಜನರಿಗಾಗಿ ಜನರ ಕಲ್ಯಾಣಕ್ಕಾಗಿ ನನ್ನ ಆಡಳಿತವನ್ನು ಮೀಸಲಿಡುತ್ತೇನೆ ಎಂದು ಹೇಳಿರುವ ಮುಖ್ಯಮಂತ್ರಿಗಳ ಮಾತು ಈ ಅರ್ಥಪೂರ್ಣ ಯೋಜನೆಯಲ್ಲಿ ದಿಟವಾಗಿ ಸಾಕಾರಗೊಳ್ಳುತ್ತಿದೆ.




ಮನುಷ್ಯನ ಬಾಳನ್ನು ಬೆಳಗಿಸುವುದು ಶಿಕ್ಷಣ. ಶಿಕ್ಷಣದ ಹೊಸ ಆವಿಷ್ಕಾರಗಳಿಗೆ ತೆರೆದುಕೊಳ್ಳದಿದ್ದರೆ ಪ್ರಗತಿ ಇಲ್ಲ. ಈ ದಿಸೆಯಲ್ಲಿ ಸರ್ಕಾರ ಖಚಿತವಾದ ನಿಲುವನ್ನು ಹೊಂದಿರುವುದು ಸ್ಪಷ್ಟವಾಗಿದೆ. ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ರಾಜ್ಯ ಸರ್ಕಾರ ಕೈಗೊಂಡ ತ್ವರಿತ ಕ್ರಮಗಳೇ ಇದಕ್ಕೆ ಸಾಕ್ಷಿ.



### ಕಲ್ಪನೆಯ ಕರ್ನಾಟಕ

ಕನಸು ಕಟ್ಟದೇ ಗುರಿ ಸಾಧನೆ ಸಾಧ್ಯವಿಲ್ಲ. ಕನಸು ಕಾಣಬೇಕು. ಅದನ್ನು ಸಾಧಿಸುವ ಛಲ ತೋರಬೇಕು. ಮುಖ್ಯಮಂತ್ರಿಗಳು ನಾಡಿನ ಸರ್ವಾಂಗೀಣ ಅಭಿವೃದ್ಧಿಯ ಬಗ್ಗೆ ತಮ್ಮ ಕನಸೇನು ಎನ್ನುವುದನ್ನು ಮೊದಲು ನಾಡಿನ ಜನರ ಮುಂದಿಟ್ಟರು. ಆ ಕನಸನ್ನು ಸಾಕಾರಗೊಳಿಸುವ ಯೋಜನೆ ರೂಪಿಸಿದರು. 'ನನ್ನ ಕಲ್ಪನೆಯ ಕರ್ನಾಟಕ'ದ ಮೂಲಕ ಜನಮಾನಸದಲ್ಲಿ ಕನಸುಗಳನ್ನು ಹರಡಿದರು. ಅವು ನನಸಾಗಲು ಬಿತ್ತಿ ಬೆಳೆಯುವ ದಾರಿಯಲ್ಲಿ ಸಾಗಿದರು. ರಾಜ್ಯದಲ್ಲಿ ಇರುವ ವಿಫುಲ ಅವಕಾಶಗಳನ್ನು ಬಳಸಿಕೊಂಡು ಸರ್ವಾಂಗೀಣ ಅಭಿವೃದ್ಧಿ ಸಾಧಿಸುವುದೇ ಅವರ ಹಂಬಲ. ಕೃಷಿ, ನೀರಾವರಿ, ಶಿಕ್ಷಣ, ಕೈಗಾರಿಕಾ ಕ್ಷೇತ್ರಗಳಲ್ಲಿ ಆಗಬೇಕಾದ ಸಾಧನೆಗಳ ನೀಲಿನಕ್ಷೆ ಅವರ ಕಣ್ಣೆದುರು ಸ್ಪಷ್ಟವಾಗಿ ಇತ್ತು. ಅದಕ್ಕೆ ಪೂರಕವಾದ ಯೋಜನೆಗಳು ಜಾರಿಗೆ ಬಂದವು.

ಚುನಾಯಿತ ಸರ್ಕಾರ ಎಂದರೆ ಅದು ಜನಸೇವಕ. ಸೌಲಭ್ಯಗಳು ಯಾವುದೇ


Downloaded From:www.kpscvaani.com



ಮಧ್ಯವರ್ತಿಗಳ ಹಾವಳಿ ಇಲ್ಲದೇ, ಲಂಚರುಷುವತ್ತುಗಳ ತಗಾದೆ ಇಲ್ಲದೇ ಜನರಿಗೆ ತಲುಪುವಂತೆ ನೋಡಿಕೊಳ್ಳುವುದೇ ಸರ್ಕಾರದ ಗುರಿ. ಅದು ಸಾರ್ಥಕವಾಗುವ ರೀತಿಯಲ್ಲಿ ಬೊಮ್ಮಾಯಿ ಅವರ ಸರ್ಕಾರ ಜನಸೇವಕ ಹಾಗೂ ಜನಸ್ಪಂದನ ಕಾರ್ಯಕ್ರಮಗಳನ್ನು ಜಾರಿಗೆ ತಂದಿದೆ. ಬೆಂಗಳೂರಿನ ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲಿ ಇದು ಈಗಾಗಲೇ ಜಾರಿಯಲ್ಲಿದೆ. ಎಂಟು ಇಲಾಖೆಗಳ ವ್ಯಾಪ್ತಿಯಲ್ಲಿ ಬರುವ 58 ಸರ್ಕಾರಿ ಸೇವೆಗಳನ್ನು ಈ ಮೂಲಕ ನಾಗರೀಕರಿಗೆ ಒದಗಿಸಲಾಗುತ್ತಿದೆ. ಕಳೆದ ಮಾರ್ಚ್ 2ರಂದು ಟಿ. ದಾಸರಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಯೋಜನೆಗೆ ಚಾಲನೆ ನೀಡಲಾಯಿತು. ಸರ್ಕಾರಿ ಸೇವೆ ಜನರ ಮನೆ ಬಾಗಿಲಿಗೆ ತಲುಪಿಸುವಲ್ಲಿ ಇದು ಮೊದಲ ಹೆಜ್ಜೆ. ಸರ್ಕಾರ ಯೋಜನೆಗಳನ್ನು ಜಾರಿಗೆ ತರುವುದು ಎಷ್ಟು ಮುಖ್ಯವೋ ಅದರಲ್ಲಿ ಪಾರದರ್ಶಕತೆ ಕಾಪಿಟ್ಟುಕೊಳ್ಳುವುದು ಅಷ್ಟೇ ಮುಖ್ಯ. ಇನ್ನು ವಿವಿಧ ಯೋಜನೆಗಳಿಂದ ಫಲಾನುಭವಿಗಳಿಗೆ ಸಂದಾಯವಾಗಬೇಕಾದ ಹಣವನ್ನು ನೇರವಾಗಿ ಅವರ ಖಾತೆಗೆ ಕಳುಹಿಸುವ ವ್ಯವಸ್ಥೆ ಮಾಡಲಾಯಿತು. ಇದರಿಂದ ಜನರ ಹಣ ಅನ್ಯಾಯವಾಗಿ ಮಧ್ಯವರ್ತಿಗಳ ಪಾಲಾಗುತ್ತಿದ್ದುದನ್ನು ತಪ್ಪಿಸಲಾಯಿತು.

ಪ್ರಜಾಪ್ರಭುತ್ವದ ಮುಖ್ಯ ಜೀವಾಳವೇ ಉತ್ತರದಾಯಿತ್ವ ಮತ್ತು ಪಾರದರ್ಶಕತೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಕಾರ್ಯಕ್ರಮಗಳ ಉದ್ದೇಶ ಮತ್ತಿತರ ವಿವರಗಳನ್ನು ಜನರಿಗೆ ದೊರಕಿಸುವ ಸಲುವಾಗಿ ಇತ್ತೀಚೆಗೆ ವೆಬ್‌ಸೈಟ್‌ಗೆ ಚಾಲನೆ ನೀಡಲಾಗಿದೆ. ಇದು ಈ ದಿಸೆಯಲ್ಲಿ ಸರ್ಕಾರದ ಪ್ರಾಮಾಣಿಕತೆಗೆ ದ್ಯೋತಕವಾಗಿದೆ. ಕೃಷಿಯೇತರ ಚಟುವಟಿಕೆಗಳಿಂದ ರೈತರ ಆದಾಯ ಹೆಚ್ಚಿಸುವ ಉದ್ದೇಶದಿಂದ ದೇಶದಲ್ಲಿಯೇ ಪ್ರಥಮವಾಗಿ ಸೆಂಕೆಡರಿ ಅಗ್ರಿಕಲ್ಚರ್ ನಿರ್ದೇಶನಾಲಯ ಸ್ಥಾಪನೆ ಮಾಡಿರುವುದು ಮಗದೊಂದು ಮಹತ್ವದ ಬೆಳವಣಿಗೆ. ಕಲ್ಯಾಣ ಕರ್ನಾಟಕದ ಅಭಿವೃದ್ಧಿ ಎಂದರೆ ಅದು ಸಮಗ್ರ ಅಭಿವೃದ್ಧಿ.

ಈ ದಿಸೆಯಲ್ಲಿ ಹೈದರಾಬಾದ್ ಕರ್ನಾಟಕದ ಅಭಿವೃದ್ಧಿಗೆ ಸರ್ಕಾರ ಆದ್ಯಗಮನ ನೀಡಿದೆ. ಹೈದರಾಬಾದ್ ಕರ್ನಾಟಕವನ್ನು ಕಲ್ಯಾಣ ಕರ್ನಾಟಕ ಎಂದು ಮರು ನಾಮಕರಣ ಮಾಡಲಾಗಿದೆ. ಈ ವ್ಯಾಪ್ತಿಯ ಏಳು ಜಿಲ್ಲೆಗಳ 1.3 ಕೋಟಿ ಜನರ ಸಮಗ್ರ ಅಭಿವೃದ್ಧಿಗೆ ಸರ್ಕಾರ ಯೋಜನೆ ರೂಪಿಸಿದೆ. ಕಲ್ಯಾಣ ಕರ್ನಾಟಕ ಉತ್ಸವ ಆಚರಣೆ, ಮೂಲಸೌಕರ್ಯ ಅಭಿವೃದ್ಧಿಗೆ ಅನುದಾನ ಮುಂತಾದ ಕ್ರಮಗಳ ಮೂಲಕ ಸರ್ಕಾರ ತನ್ನ ಬದ್ಧತೆ ಪ್ರದರ್ಶನ ಮಾಡಿದೆ. ಅಸಮತೋಲನ ನಿವಾರಣೆ ಉದ್ದೇಶದಿಂದ 38.17 ಕೋಟಿ ರೂ.ವೆಚ್ಚದ ಸವಲತ್ತುಗಳ ವಿತರಣೆ ಸೇರಿ ವಿವಿಧ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ. ಕಲಬುರಗಿ ವಿವಿಯಲ್ಲಿ ಹೈದರಾಬಾದ್ ಕರ್ನಾಟಕ ಸಮಗ್ರ ಅಧ್ಯಯನ ಪೀಠ, ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಕಲಬುರಗಿ ಪೀಠಕ್ಕೆ ಚಾಲನೆ ಮುಂತಾದವು ಇತರೆ ಪ್ರಮುಖ ಹೆಜ್ಜೆಗಳು.

### ದಾಸೋಹ ದಿನ

ಸರ್ಕಾದ ಒಂದು ವರ್ಷದ ಆಡಳಿತಕ್ಕೆ ಮಾನವೀಯ ಮುಖವಿದೆ. ಪ್ರೀತಿ, ಕರುಣೆಯ ನೆಲೆಯಿದೆ. ಸಿದ್ಧಗಂಗೆಯ ಶ್ರೀ ಶಿವಕುಮಾರ ಶ್ರೀಗಳು ನಡೆದಾಡುವ ದೇವರು ಎಂದು ಪ್ರತೀತಿ. ಅವರು ನಡೆಸಿಕೊಂಡು ಬಂದ ತ್ರಿವಿಧ ದಾಸೋಹ ನಾಡನ್ನು ಬೆಳಗುತ್ತಿದೆ. ಶ್ರೀಗಳು ಲಿಂಗೈಕ್ಯರಾದ ಜನವರಿ 21ರಂದು ದಾಸೋಹ ದಿನ ಆಚರಿಸಲು ಸರ್ಕಾರ ನಿರ್ಧರಿಸಿದೆ. ಈ ಬಗ್ಗೆ ಅಧಿಕೃತ ಘೋಷಣೆ ಮಾಡಲಾಗಿದೆ. ಮಕ್ಕಳಿಗೆ ಆಹಾರ ಬಡಿಸುವ ಮೂಲಕ ದಾಸೋಹ ದಿನಕ್ಕೆ ಮುಖ್ಯಮಂತ್ರಿಗಳು ಚಾಲನೆ ನೀಡಿದರು.





Downloaded From:www.kpscvaani.com



ಇಂಧನ ಕ್ಷೇತ್ರದಲ್ಲಿಯೂ ಸರ್ಕಾರ ಮಹತ್ವದ ಹೆಜ್ಜೆ ಇಟ್ಟಿದೆ. ರಾಜ್ಯದಲ್ಲಿ ಸಮರ್ಪಕ ವಿದ್ಯುತ್ ಸರಬರಾಜಿನ ನಿರ್ವಹಣೆ ನಡೆಯುತ್ತಿದೆ. ಗ್ರಾಮ ಪಂಚಾಯಿತಿಗಳ ಕುಡಿಯುವ ನೀರು ಮತ್ತು ವಿದ್ಯುತ್ ದೀಪ ಸ್ಥಾವರಗಳ ಶುಲ್ಕ ಪಾವತಿಗೆ ಕಾರ್ಯನಿರ್ವಹಿಸದ ಮೀಟರ್‌ಗಳನ್ನು ತೆರವುಗೊಳಿಸಲು ಸಹಾಯಕವಾಗುವಂತಹ ಇ–ಬೆಳಕು ತಂತ್ರಾಂಶ ಅಭಿವೃದ್ಧಿಪಡಿಸಿರುವುದು ಈ ದಿಸೆಯಲ್ಲಿ ನಿರ್ಣಾಯಕ ಕ್ರಮ.

ಸರ್ಕಾರವು ಈ ಒಂದು ವರ್ಷದಲ್ಲಿ ಗ್ರಾಮೀಣ ಪ್ರದೇಶದ ಆಡಳಿತ ಸುಧಾರಿಸಲು ಹಲವು ಉಪಕ್ರಮಗಳನ್ನು ಕೈಗೊಂಡಿದೆ. ಈ ದಿಸೆಯಲ್ಲಿ 'ಗ್ರಾಮ ಒನ್' ಕೇಂದ್ರಗಳನ್ನು ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಆರಂಭಿಸಲಾಗಿದೆ. ಈ ಯೋಜನೆಗೆ ಮುಖ್ಯಮಂತ್ರಿಗಳು ಕಳೆದ ಜನವರಿ 26ರಂದು ಚಾಲನೆ ನೀಡಿದರು. ಮೊದಲ ಹಂತದಲ್ಲಿ 12 ಜಿಲ್ಲೆಗಳ 3026 ಗ್ರಾಮ ಪಂಚಾಯಿತಿಗಳಲ್ಲಿ ಯೋಜನೆ ಜಾರಿಗೆ ಬಂದಿದೆ. ಸರ್ಕಾರಿ ಸೌಲಭ್ಯಗಳು ಸುಲಭವಾಗಿ ಸಿಗುವಂತೆ ಮಾಡುವುದು, ಮಧ್ಯವರ್ತಿಗಳ ಹಾವಳಿ ತಪ್ಪಿಸುವುದು ಈ ಪರಿಕಲ್ಪನೆಯ ಮುಖ್ಯ ಉದ್ದೇಶ.

ಮಹಿಳೆಯರನ್ನು ಒಳಗೊಳ್ಳದ ಅಭಿವೃದ್ಧಿ ಅಪೂರ್ಣ ಎನ್ನುವುದನ್ನು ಸರ್ಕಾರ ಅರಿತಿದೆ ಎನ್ನುವುದು ಕಳೆದ ಒಂದು ವರ್ಷದ ಸಾಧನೆಯ ಪಟ್ಟಿಯನ್ನು ಗಮನಿಸಿದರೆ ಗೊತ್ತಾಗುತ್ತದೆ. ಮಹಿಳಾ ಸಬಲೀಕರಣಕ್ಕೆ ಹಲವು ಉಪಕ್ರಮಗಳನ್ನು ಕೈಗೊಂಡಿದೆ. ಆರ್ಥಿಕ, ಶೈಕ್ಷಣಿಕ ಮಾತ್ರವಲ್ಲ, ಒಂದು ಹೆಜ್ಜೆ ಮುಂದೆ ಹೋಗಿ ಹೆಣ್ಣುಮಕ್ಕಳಿಗೆ ಆತ್ಮರಕ್ಷಣೆಯ ಕಲೆಯನ್ನು ಕಲಿಸಲು ಮುಂದಾಗಿರುವುದು ಒಂದು ಮಹತ್ವದ ಸಂಗತಿ. ಕಳೆದ ಫೆಬ್ರವರಿ 6ರಂದು ಮುಖ್ಯಮಂತ್ರಿಗಳು 'ಓಬವ್ವ ಹೆಣ್ಣು ಮಕ್ಕಳ ಆತ್ಮರಕ್ಷಣೆ ಕಲೆ ತರಬೇತಿ'ಗೆ ಚಾಲನೆ ನೀಡಿದ್ದಾರೆ. ಮಹಿಳಾ ಸುರಕ್ಷತೆಗಾಗಿ ಮೊಬೈಲ್ ಆ್ಯಪ್, ಐದು ಸಾವಿರ ಬಸ್‌ಗಳಲ್ಲಿ ಮಹಿಳಾ ಸುರಕ್ಷತೆಗಾಗಿ ಸಿಸಿಟಿವಿ ಕ್ಯಾಮರಾ, ಮಹಿಳಾ ಸ್ವಸಹಾಯ ಗುಂಪುಗಳ ಉತ್ಪನ್ನ ಮಾರಾಟ ಮತ್ತು ಪ್ರದರ್ಶನಕ್ಕೆ ವ್ಯವಸ್ಥೆ ಇತ್ಯಾದಿ ಕ್ರಮಗಳು ಗಮನಾರ್ಹ.

### ಕ್ಷೀರಕ್ರಾಂತಿಗೊಂದು ಕಿರೀಟ

ಕ್ಷೀರಕ್ರಾಂತಿಗೆ ನಾಡು ಹೆಸರುವಾಸಿ. ಹಾಲು ಉತ್ಪಾದಕರಿಗೆ ಸಾಲ ಸೌಲಭ್ಯ ನೀಡಲು ರಾಜ್ಯದಲ್ಲಿ ಮೊದಲ ಬಾರಿಗೆ ಕ್ಷೀರ ಸಮೃದ್ಧಿ ಸಹಕಾರ ಬ್ಯಾಂಕ್ ಅನ್ನು ಸರ್ಕಾರ ಸ್ಥಾಪನೆ ಮಾಡಿದೆ. ಕಳೆದ ಏಪ್ರಿಲ್ ಒಂದರಂದು ಕೇಂದ್ರ ಗೃಹ ಹಾಗೂ ಸಹಕಾರ ಸಚಿವ ಅಮಿತ್ ಶಾ ಬ್ಯಾಂಕಿನ ಲಾಂಛನ ಬಿಡುಗಡೆ ಮಾಡಿ ಯೋಜನೆಗೆ ಚಾಲನೆ ನೀಡಿದ್ದಾರೆ. ಬ್ಯಾಂಕಿಗೆ ಸರ್ಕಾರ ನೂರು ಕೋಟಿ ರೂ.ಷೇರು ಬಂಡವಾಳ ನೀಡಿ ತನ್ನ ಬದ್ಧತೆ ಮೆರೆದಿದೆ.

### ಬಂಡವಾಳ ಹೂಡಿಕೆಗೆ ವೇದಿಕೆ

ರಾಜ್ಯ ವಿಫುಲ ಕೈಗಾರಿಕಾ ಬೆಳವಣಿಗೆಯ ಅವಕಾಶವನ್ನು ಹೊಂದಿದೆ. ಈ ದಿಸೆಯಲ್ಲಿ ಸರ್ಕಾರ ಪೂರಕ ನೀತಿಗಳನ್ನು ಅಳವಡಿಸಿಕೊಂಡಿದೆ. ಹೂಡಿಕೆಗೆ ಹೆಬ್ಬಾಗಿಲು ತೆರೆದಿದೆ. ದೇಶದ ತಂತ್ರಜ್ಞಾನ, ವಿಜ್ಞಾನ ಬೆಳವಣಿಗೆಯಲ್ಲಿ ಬೆಂಗಳೂರು ಸೇರಿದಂತೆ ಇಡೀ ರಾಜ್ಯ



Downloaded From:www.kpscvaani.com

ತನ್ನದೇ ಆದ ಛಾಪು ಹೊಂದಿದೆ. ಮುಂದಿನ ನವೆಂಬರ್ 16ರಿಂದ ಮೂರು ದಿನಗಳ ಕಾಲ ಬೆಂಗಳೂರಿನಲ್ಲಿ ನಡೆಯಲಿರುವ ಬೆಂಗಳೂರು ತಂತ್ರಜ್ಞಾನ ಸಮಾವೇಶಕ್ಕೆ ಭರದ ಸಿದ್ಧತೆ ನಡೆದಿದೆ. ಕಳೆದ ಒಂದು ವರ್ಷದ ಅವಧಿಯಲ್ಲಿ ಬಂಡವಾಳ ಹೂಡಿಕೆ ದಾಖಲೆ ಪ್ರಮಾಣದಲ್ಲಿ ಆಗಿದೆ ಎನ್ನುವುದು ಗಮನಾರ್ಹ. ಈ ಬಾರಿ ದಾವೋಸ್‌ನಲ್ಲಿ ನಡೆದ ವಿಶ್ವ ಆರ್ಥಿಕ ಶೃಂಗಸಭೆಯ ಅವಕಾಶಗಳನ್ನು ಮುಖ್ಯಮಂತ್ರಿಗಳು ಸಮರ್ಥವಾಗಿ ಬಳಸಿಕೊಂಡಿದ್ದಾರೆ. ಹಲವು ಜಾಗತಿಕ ಕಂಪನಿಗಳು ರಾಜ್ಯದಲ್ಲಿ ಬಂಡವಾಳ ಹೂಡಿಕೆಗೆ ಆಸಕ್ತಿ ತೋರಿವೆ. ಈ ಸಮಾವೇಶದಲ್ಲಿ ಭಾಗವಹಿಸಿದ್ದ ಮುಖ್ಯಮಂತ್ರಿಗಳು ತಾವೇ ಸ್ವತ: 25ಕ್ಕೂ ಹೆಚ್ಚು ಉದ್ಯಮಿಗಳೊಂದಿಗೆ ಮತುಕತೆ ನಡೆಸಿದರು. 52 ಸಾವಿರ ಕೋಟಿ ರೂ. ಹೂಡಿಕೆ ಒಪ್ಪಂದಕ್ಕೆ ಎರಡು ಬೃಹತ್ ಕಂಪನಿಗಳು ಸಹಿ ಹಾಕಿವೆ.

ಪ್ರಧಾನಿ ನರೇಂದ್ರ ಮೋದಿ ಅವರ ಇತ್ತೀಚಿನ ರಾಜ್ಯ ಭೇಟಿಯಂತೂ ಅವಿಸ್ಮರಣೀಯ. ಈ ಸಂದರ್ಭದಲ್ಲಿ 33 ಸಾವಿರ ಕೋಟಿ ರೂ.ವೆಚ್ಚದ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡಲಾಯಿತು. ರಾಜ್ಯ ಸರ್ಕಾರ ಹಳಿಯ ಮೇಲೆ ತಂದಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳ ಚುರುಕಿಗೆ ಪ್ರಧಾನಿ ಅವರ ಈ ಭೇಟಿ ಇಂಬು ನೀಡಲಿದೆ. ಜೂನ್ 21ರಂದು ಮೈಸೂರಿನ ಅಂಬಾ ವಿಲಾಸಿ ಅರಮನೆ ಆವರಣದಲ್ಲಿ ನಡೆದ 8 ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಗೆ ಪ್ರಧಾನಿ ಚಾಲನೆ ನೀಡಿದರು. ಆ ಮೂಲಕ ಜಾಗತಿಕ ನಕ್ಷೆಯಲ್ಲಿ ಕರ್ನಾಟಕ ಮತ್ತೊಮ್ಮೆ ಮಿಂಚುವಂತಾಯಿತು.



### ಬಜೆಟ್: ಸರ್ವಹಿತ ದೃಷ್ಟಿ

ಕಳೆದ ಮಾರ್ಚ್ 4 ರಂದು ಮುಖ್ಯಮಂತ್ರಿಗಳು ಮಂಡಿಸಿದ ಬಜೆಟ್ ಸರ್ವವ್ಯಾಪಿ, ಸರ್ವಸ್ಪರ್ಶಿ, ಸರ್ವಹಿತ ರಕ್ಷಕವಾಗಿದೆ. ಬಜೆಟ್ ಬಗ್ಗೆ ಮಾಧ್ಯಮಗಳು ಸಾಕಷ್ಟು ಪ್ರಶಂಸೆ ಮಾಡಿವೆ. ಜನಸಾಮಾನ್ಯರ ಹಿತವೇ 2022– 23 ನೇ ಸಾಲಿನ ಬಜೆಟ್‌ನ ಗುರಿ ಎಂಬ ಪ್ರಶಂಸೆ ಎಲ್ಲಾ ವರ್ಗದಿಂದ ಕೇಳಿ ಬಂದಿದೆ. ಕೃಷಿ, ನೀರಾವರಿ, ಶಿಕ್ಷಣಕ್ಕೆ ಆದ್ಯತೆ, ಸಮಾಜ ಕಲ್ಯಾಣಕ್ಕೆ ಒತ್ತು, ದೀನ ದುರ್ಬಲರ ಆಶಾಕಿರಣವಾಗಿ ಹೊರ ಹೊಮ್ಮಿರುವ ಬಜೆಟ್ ಘೋಷಿತ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಮುಖ್ಯಮಂತ್ರಿಗಳು ಒತ್ತು ನೀಡಿದ್ದಾರೆ. ಅಭಿವೃದ್ಧಿ ಆಕಾಂಕ್ಷಿ ತಾಲೂಕುಗಳಿಗೆ 3 ಸಾವಿರ ಕೋಟಿ ಅನುದಾನ, ಏಳು ಹೊಸ ವಿಶ್ವವಿದ್ಯಾಲಯಗಳ ಸ್ಥಾಪನೆ, ಪೂರ್ವ ಪ್ರಾಥಮಿಕ ಹಂತದಿಂದಲೇ ನೂತನ ಪಠ್ಯಕ್ರಮ, ರಾಜ್ಯಾದ್ಯಂತ ಡಿಜಿಟಲ್ ಗ್ರಂಥಾಲಯಗಳ ಸ್ಥಾಪನೆ, ಅಸಾಂಕ್ರಾಮಿಕ ರೋಗಗಳ ಪತ್ತೆ ಮತ್ತು ಹೆಚ್ಚಿನ ಚಿಕಿತ್ಸೆಗಾಗಿ ತಜ್ಞರ ಬಳಿಗೆ ಕಳುಹಿಸುವ ಸೇವೆ ಒದಗಿಸಲು ರಾಜ್ಯದ ಪ್ರಮುಖ ನಗರಗಳಲ್ಲಿ 438 'ನಮ್ಮ ಕ್ಲಿನಿಕ್' ಸ್ಥಾಪನೆ ಮಾಡಲು ಉದ್ದೇಶಿಲಾಗಿದೆ.

### ವಿಧಾನಮಂಡಲದ ಅಧಿವೇಶನ ಒಂದು ದಾಖಲೆ

ಸಂಸದೀಯ ಪ್ರಜಾಸತ್ತೆಯಲ್ಲಿ ಶಾಸನಸಭೆ ಕಾರ್ಯಕಲಾಪಗಳು ಅರ್ಥಪೂರ್ಣವಾಗಿ ಸುಗಮವಾಗಿ ನಡೆಯುವುದು ಮುಖ್ಯ. ಜನಹಿತದ ದೃಷ್ಟಿಯಿಂದ ಹಲವು ವಿಷಯಗಳನ್ನು ಚರ್ಚಿಸುವ, ಮಹತ್ವದ ನಿರ್ಧಾರ ಕೈಗೊಳ್ಳುವ ಮತ್ತು ಅಗತ್ಯ ಶಾಸನ ರೂಪಿಸುವ ಹೊಣೆಗಾರಿಕೆ ಈ ಅತ್ಯುನ್ನತ ವೇದಿಕೆಗೆ ಇದೆ. ಆ ದೃಷ್ಟಿಯಿಂದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ತಮ್ಮ ಮೊದಲ ವಿಧಾನ ಮಂಡಲದ ಅಧಿವೇಶನವನ್ನು ಯಶಸ್ವಿಯಾಗಿ ಪೂರೈಸಿದರು. ಸೆಪ್ಟೆಂಬರ್ 13 ರಿಂದ 24ರವರೆಗೆ ಬೆಂಗಳೂರಿನಲ್ಲಿ ನಡೆದ ಅಧಿವೇಶನ ಅರ್ಥಪೂರ್ಣವಾಗಿತ್ತು. ಆನ್‌ಲೈನ್ ಜೂಜನ್ನು ಶಿಕ್ಷಾರ್ಹ ಅಪರಾಧವನ್ನಾಗಿ ಪರಿಗಣಿಸುವ ವಿಧೇಯಕ ಸೇರಿದಂತೆ ಹಲವು ಮಹತ್ವದ ವಿಧೇಯಕಗಳು ಅಂಗೀಕಾರಗೊಂಡವು. ಅಧಿವೇಶನದ ಕೊನೆ ದಿನ ಸ್ವಾತಂತ್ರ್ಯ ಅಮೃತ ಮಹೋತ್ಸವದ ಪ್ರಯುಕ್ತ ಲೋಕಸಭಾ ಸ್ಪೀಕರ್ ಓಂ ಪ್ರಕಾಶ್ ಬಿರ್ಲಾ ಜಂಟಿ ಅಧಿವೇಶನ ಉದ್ದೇಶಿಸಿ ಮಾತನಾಡಿದ್ದು ದಾಖಲೆ. ಬೆಳಗಾವಿ ಸುವರ್ಣ ಸೌಧದಲ್ಲಿ ನಡೆದ ಅಧಿವೇಶನವೂ ಯಶ ಕಂಡಿತು.

ಆಡಳಿತದ ದೃಷ್ಟಿಯಿಂದ ವಿಕೇಂದ್ರೀಕರಣ ಅಗತ್ಯ. ಇದನ್ನು ಜಿಲ್ಲಾ, ತಾಲೂಕು ಮಟ್ಟದಲ್ಲಿ ಕೈಗೊಳ್ಳಲಾಗುತ್ತದೆ. ವಿಜಯ ನಗರ ಪ್ರತ್ಯೇಕ ಜಿಲ್ಲೆಯಾಗಬೇಕು ಎಂಬ ಕೂಗಿಗೆ ಸರ್ಕಾರ ಸ್ಪಂದಿಸಿದೆ. ವಿಜಯ ನಗರ ಸಾಮ್ರಾಜ್ಯದ ವೈಭವ ಮರುಕಳಿಸುವ ಹೆಗ್ಗನಸಿನೊಂದಿಗೆ ರಾಜ್ಯದ 31 ನೇ ಜಿಲ್ಲೆಯಾಗಿ ವಿಜಯನಗರ ಜನ್ಮತಾಳಿದೆ. ಗಾಂಧಿ ಜಯಂತಿಯ ದಿನವಾದ ಕಳೆದ ಅಕ್ಟೋಬರ್ 2ರಂದು ಇದು ಉದಯವಾಗಿದ್ದು, ಆಡಳಿತ ಸುಧಾರಣೆ ಬಗ್ಗೆ ಸರ್ಕಾರಕ್ಕಿರುವ ಕಾಳಜಿಗೆ ಸಾಕ್ಷಿ.





Downloaded From:www.kpscvaani.com

## ಕೃಷಿಕರ ಆದಾಯ ಹೆಚ್ಚಿಸುವ ದಿಶೆಯಲ್ಲಿ

# ಮುನ್ನಡೆಯುತ್ತಿರುವ ಸರ್ಕಾರ

**ಕೃಷಿ ಉತ್ಪಾದನೆಯ ಹೆಚ್ಚಳಕ್ಕೆ ಅನುಗುಣವಾಗಿ ರೈತರ ಆದಾಯವನ್ನು ಹೆಚ್ಚಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರವು ಹೊಸ ಹೊಸ ಯೋಜನೆ ಮತ್ತು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಮುನ್ನಡೆಯುತ್ತಿದೆ.**

ಬಿ.ಜಿ.ಪೂರ್ಣಿಮ

ನಮ್ಮ ದೇಶ ಕೃಷಿ ಪ್ರಧಾನ ದೇಶ. ರೈತನಿಲ್ಲದೆ ಕೃಷಿ ಇಲ್ಲ. ಹಾಗಾಗಿಯೇ ರೈತನನ್ನು ನಮ್ಮ ದೇಶದ ಬೆನ್ನೆಲಬು ಎಂದು ಹೇಳಲಾಗುತ್ತದೆ. ಮಾನವನಿಗೆ ಬೆನ್ನೆಲುಬು ಎಷ್ಟು ಮುಖ್ಯವೋ, ಅದೇ ರೀತಿ ದೇಶದ ಅಭಿವೃದ್ಧಿಗೆ ಕೃಷಿ ಕ್ಷೇತ್ರದ ಕೊಡುಗೆಯು ಅಷ್ಟೇ ಮುಖ್ಯವಾಗುತ್ತದೆ.

ಮುಖ್ಯಮಂತ್ರಿ ಬಸವರಾಜ ಎಸ್ ಬೊಮ್ಮಾಯಿ ಅವರು 'ಸಬ್ ಕಾ ಸಾಥ್-ಸಬ್ ಕಾ ವಿಕಾಸ್' ಎಂಬ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ದೃಷ್ಟಿಕೋನಕ್ಕೆ ಅನುಗುಣವಾಗಿಯೇ ಮುನ್ನಡೆಯುತ್ತಿದ್ದಾರೆ. ಎಲ್ಲಾ ಕ್ಷೇತ್ರದ ಅಭಿವೃದ್ಧಿ ಮತ್ತು ಎಲ್ಲಾ ಕ್ಷೇತ್ರದ ಜನರ ಶ್ರೇಯೋಭಿವೃದ್ಧಿಗಾಗಿ ಹಾಗೂ ಆತ್ಮನಿರ್ಭರ ಭಾರತ ಕಟ್ಟುವ ಆಶಯಕ್ಕೆ ಪೂರಕವಾಗುವಂತೆ ಹೊಸ ಹೊಸ ಯೋಜನೆಗಳನ್ನು ಹಮ್ಮಿಕೊಳ್ಳುತ್ತಿದ್ದಾರೆ.

ರೈತ ಜನರ ಮೇಲೆ ಹೆಚ್ಚಿನ ಒಲವು ಹೊಂದಿರುವ ಕಾರಣದಿಂದಾಗಿ ಅವರು ಮುಖ್ಯಮಂತ್ರಿ ಆದ ಬಳಿಕ ರೈತರಿಗಾಗಿ ಹಲವು ಯೋಜನೆಗಳನ್ನು ಹಮ್ಮಿಕೊಂಡರು. 'ರೈತ ಶಕ್ತಿ', 'ಮುಖ್ಯಮಂತ್ರಿಗಳ ರೈತ ವಿದ್ಯಾ ನಿಧಿ', 'ಕ್ಷೀರ ಸಮೃದ್ಧಿ ಸಹಕಾರ ಬ್ಯಾಂಕ್', 'ಯಶಸ್ವಿನಿ' ಯೋಜನೆಯ ಮರುಜಾರಿ, 'ಸಂಚಾರಿ ಆರೋಗ್ಯ ಚಿಕಿತ್ಸಾಲಯ' ಇವು ಅವರು ರೈತರಿಗಾಗಿ ಹಮ್ಮಿಕೊಂಡಿರುವ ಪ್ರಮುಖ ಯೋಜನೆಗಳು.

ಬಸವರಾಜ ಬೊಮ್ಮಾಯಿ ಅವರ ನೇತೃತ್ವದ ಸರ್ಕಾರವು ಇಂತಹ ಜನಪ್ರಿಯ ಯೋಜನೆಗಳನ್ನು ಹಮ್ಮಿಕೊಳ್ಳುವ ಮೂಲಕ, ಕೃಷಿ ಉತ್ಪಾದನೆಯ ಹೆಚ್ಚಳಕ್ಕೆ ಅನುಗುಣವಾಗಿ ರೈತರ ಆದಾಯ ಹೆಚ್ಚಿಸುವ ನಿಟ್ಟಿನಲ್ಲಿ ಮುನ್ನಡೆದಿದೆ ಎಂದರೆ ತಪ್ಪಾಗಲಾರದು. ಇತರೆ ರಾಜ್ಯಗಳಿಗಿಂತಲೂ ಮೊದಲಿಗೆ ನಮ್ಮ





Downloaded From:www.kpscvaani.com




**ರೇಷ್ಮೆ ಬೆಳೆಗಾರರಿಗೆ ಪಾರದರ್ಶಕ ಮತ್ತು ನ್ಯಾಯಯುತ ಬೆಲೆ ಒದಗಿಸಲು ಎಲ್ಲಾ ರೇಷ್ಮೆ ಗೂಡು ಮಾರುಕಟ್ಟೆಗಳಲ್ಲಿ ಇ-ಹರಾಜು ಮತ್ತು ಇ-ನಗದು ಪಾವತಿ ವ್ಯವಸ್ಥೆಯನ್ನು ಅನುಷ್ಠಾನಗೊಳಸಲಾಗುತ್ತಿದ್ದು, ಈಗಾಗಲೇ 10 ರೇಷ್ಮೆ ಗೂಡು ಮಾರುಕಟ್ಟೆಗಳಲ್ಲಿ ಈ ವ್ಯವಸ್ಥೆಯನ್ನು ಪ್ರಾರಂಭಿಸಲಾಗಿದೆ.**

ರಾಜ್ಯ ಸರ್ಕಾರವೇ 'ಸೆಕೆಂಡರಿ ಕೃಷಿ ನಿರ್ದೇಶನಾಲಯ' ಸ್ಥಾಪಿಸಿರುವುದು ಇದಕ್ಕೆ ಸಾಕ್ಷಿ. ರೈತರ ಆದಾಯವನ್ನು ದ್ವಿಗುಣಗೊಳಿಸುವುದೇ ಈ ನಿರ್ದೇಶನಾಲಯದ ಉದ್ದೇಶ. ರೈತ ಉತ್ಪಾದಕರ ಸಂಸ್ಥೆಗಳನ್ನು ಬಳಸಿ ಕೃಷಿಯ ಪ್ರಾಥಮಿಕ ಉತ್ಪನ್ನಗಳ ಮೌಲ್ಯವರ್ಧನೆ ಮಾಡಿ, ಈ ಉತ್ಪನ್ನಗಳಿಗೆ ಹೆಚ್ಚಿನ ಮಾರುಕಟ್ಟೆ ಅವಕಾಶಗಳನ್ನು ಸೃಷ್ಟಿಸಲು ಇದು ಸಹಕಾರಿಯಾಗಲಿದೆ.

ಮುಖ್ಯಮಂತ್ರಿಗಳಾಗಿ ಒಂದು ವರ್ಷ ಪೂರೈಸಿರುವ ಸಂದರ್ಭದಲ್ಲಿ ಕಳೆದ ಒಂದು ವರ್ಷದಿಂದ ಕೃಷಿ ಮತ್ತು ಕೃಷಿ ಪೂರಕ ಚಟುವಟಿಕೆಗಳನ್ನು ಹೊಂದಿರುವ ಇಲಾಖೆಗಳಲ್ಲಿ ಸಾಧಿಸಲಾಗಿರುವ ಸಾಧನೆಯನ್ನು ಈ ಲೇಖನದಲ್ಲಿ ಸಂಕ್ಷಿಪ್ತವಾಗಿ ಪುನರ್ ಮನನ ಮಾಡಿಕೊಳ್ಳಲಾಗಿದೆ.

**“ಮುಖ್ಯಮಂತ್ರಿ ರೈತ ವಿದ್ಯಾ ನಿಧಿ”**

ಕಾಲೇಜು ವಿದ್ಯಾಭ್ಯಾಸಕ್ಕೆ ಶುಲ್ಕ ಕಟ್ಟಲಾಗದೇ ಬಹಳಷ್ಟು ರೈತ ಮಕ್ಕಳು ವಿದ್ಯಾಭ್ಯಾಸದಿಂದ ಹೊರಗುಳಿದಿರುವುದನ್ನು ಅರಿತ ಮುಖ್ಯಮಂತ್ರಿ ಅವರು ರೈತ ಮಕ್ಕಳೂ ಉನ್ನತ ಶಿಕ್ಷಣ ಪಡೆದು ಉನ್ನತ ಹುದ್ದೆಗಳನ್ನು ಹೊಂದುವಂತಾಗಬೇಕು ಎಂಬ ಉದ್ದೇಶದಿಂದ ರೈತ ಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡುವ ಸಲುವಾಗಿ ಮುಖ್ಯಮಂತ್ರಿಗಳ ರೈತ ವಿದ್ಯಾ ನಿಧಿ ಯೋಜನೆಯನ್ನು ದೇಶದಲ್ಲೇ ಮೊಟ್ಟ ಮೊದಲ ಬಾರಿಗೆ ಪ್ರಾರಂಭಿಸಿದರು. ಈ ಯೋಜನೆಗೆ ರೈತ ವರ್ಗದ ಜನರಿಂದಷ್ಟೇ ಅಲ್ಲದೆ, ದೇಶಾದ್ಯಂತ ಪ್ರಶಂಸೆಗೆ ಒಳಪಟ್ಟಿತು.

ಹತ್ತನೇ ತರಗತಿ ನಂತರದ ವಿದ್ಯಾರ್ಜನೆಗೆ ಮಾತ್ರವೇ ಈ ಯೋಜನೆಯಡಿ ವಿದ್ಯಾರ್ಥಿ ವೇತನವನ್ನು ನೀಡಲಾಗುತ್ತಿತ್ತು. ಆದರೆ ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಒತ್ತು ನೀಡುವ ಉದ್ದೇಶದಿಂದ 8 ರಿಂದ 10 ನೇ ತರಗತಿಯ ಹೆಣ್ಣು ಮಕ್ಕಳು, ನೇಕಾರ ಮತ್ತು ಮೀನುಗಾರರ ಮಕ್ಕಳಿಗೂ ಈ ವಿದ್ಯಾರ್ಥಿ ವೇತನ ಸೌಲಭ್ಯವನ್ನು ವಿಸ್ತರಿಸಲಾಯಿತು.

ಈ ಯೋಜನೆಯಡಿ 2021-22 ನೇ ಸಾಲಿನಲ್ಲಿ 7,13,432 ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗಳಿಗೆ 261.176 ಕೋಟಿ ರೂ.ಗಳನ್ನು ಮತ್ತು 2022-23 ನೇ ಸಾಲಿನಲ್ಲಿ ಜೂನ್ ತಿಂಗಳ ಅಂತ್ಯದವರೆಗೆ 1,22,495 ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗಳಿಗೆ ರೂ 73.73 ಕೋಟಿ ವಿದ್ಯಾರ್ಥಿವೇತನವನ್ನು ನೇರ ನಗದು ಮೂಲಕ ವರ್ಗಾಯಿಸಲಾಗಿದೆ.

ಮುಖ್ಯಮಂತ್ರಿಯವರ ದೂರದೃಷ್ಟಿಯಿಂದ ಸಿದ್ಧಗೊಂಡಿರುವ ಈ ಯೋಜನೆಯ ಫಲಶ್ರುತಿ ತಿಳಿಯಲು ಕಾಲಾವಕಾಶ ಹಿಡಿಯಬಹುದು. ಆದರೆ ಮುಂದಿನ ಐದಾರು ವರ್ಷಗಳಲ್ಲಿ ಈ ಯೋಜನೆಯಿಂದಾಗಿ ರೈತರ ಮಕ್ಕಳೆಲ್ಲರೂ ಉನ್ನತ ಶಿಕ್ಷಣವನ್ನು ಹೊಂದುವಂತಾಗುವುದರಿಂದ ಗ್ರಾಮೀಣ ಭಾಗದಲ್ಲಿ ಶೈಕ್ಷಣಿಕ ಕ್ರಾಂತಿಯಾಗುವುದರಲ್ಲಿ ಸಂಶಯವಿಲ್ಲ.

ಇನ್ನು ರಾಜ್ಯ ಸರ್ಕಾರವು ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ಯೋಜನೆಯ ಅರ್ಹ ರೈತರಿಗೆ ಹೆಚ್ಚುವರಿಯಾಗಿ 4 ಸಾವಿರ ರೂ.ಗಳ ಆರ್ಥಿಕ ನೆರವನ್ನು ಎರಡು ಕಂತುಗಳಲ್ಲಿ ನೀಡುತ್ತಿದೆ. 2021-22 ಮತ್ತು 2022-23 ನೇ ಸಾಲಿನಲ್ಲಿ ಒಟ್ಟು 9818562 ರೈತರಿಗೆ ರೂ 1963.84 ಆರ್ಥಿಕ ನೆರವನ್ನು ಬಿಡಿಟಿ ಮೂಲಕ ಅವರ ಬ್ಯಾಂಕ್ ಖಾತೆಗಳಿಗೆ ವರ್ಗಾವಣೆ ಮಾಡಲು ಮಂಜೂರಾತಿ ನೀಡಿದೆ.

ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯಡಿ 2021-22 ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ 12.67 ಲಕ್ಷ ರೈತರಿಂದ ಬಂದಿದ್ದ ಪ್ರಸ್ತಾವನೆಗಳಲ್ಲಿ 5.39


Downloaded From:www.kpscvaani.com

## ಕೃಷಿ ದೇಶದ ಆರ್ಥಿಕ ಬೆಳವಣಿಗೆಯ ಎಂಜಿನ್

ಕೃಷಿ ಕ್ಷೇತ್ರದ ಅಭಿವೃದ್ಧಿ ದೇಶದ ಅಭಿವೃದ್ಧಿಗೆ ಪೂರಕ. ದೇಶದಲ್ಲಿ ಉತ್ಪಾದನೆ, ಐಟಿ ಬಿಟಿ ಸೇರಿದಂತೆ ಹಲವು ವಲಯಗಳಿವೆ. ಆದರೆ ನಮ್ಮ ದೇಶದ ಆರ್ಥಿಕ ಬೆಳವಣಿಗೆಯನ್ನು ಮುಂದಕ್ಕೆ ತೆಗೆದುಕೊಂಡು ಹೋಗುವ ಎಂಜಿನ್ ಎಂದರೆ ಅದು ಕೃಷಿ.

ಕೃಷಿ ಕೇವಲ ಒಂದು ವಲಯವಷ್ಟೇ ಅಲ್ಲ. ಅದು ದೇಶದ ಒಂದು ಸಂಸ್ಕೃತಿಯಾಗಿದೆ. ಇದು ದೇಶದ ಭ್ರಾತೃತ್ವದ ಬೆನ್ನೆಲುಬಾಗಿದೆ. ದೇಶದ ಯಾವುದೇ ಭಾಗದಲ್ಲೇ ಆದರೂ ರೈತನ ಜೀವನ ಪದ್ಧತಿ ಒಂದೇ ರೀತಿಯನ್ನು ಪ್ರತಿಬಿಂಬಿಸುತ್ತದೆ. ಕೃಷಿಯಲ್ಲಿ ಶೇಕಡ 1 ರಷ್ಟು ಬೆಳವಣಿಗೆ ಆದರೆ ಉತ್ಪಾದನಾ ವಲಯದಲ್ಲಿ ಶೇಕಡ 4 ಮತ್ತು ಸೇವಾವಲಯದಲ್ಲಿ ಶೇಕಡ 10 ರಷ್ಟು ಬೆಳವಣಿಗೆ ಆಗುತ್ತದೆ.

ಕೃಷಿಯು ಕೇವಲ ಆರ್ಥಿಕತೆಯನ್ನು ಮುಂದಕ್ಕೆ ತೆಗೆದುಕೊಂಡು ಹೋಗುವುದು ಮಾತ್ರವಲ್ಲದೇ, ರಾಷ್ಟ್ರದ ಜನರಿಗೆ ಆಹಾರ ಭದ್ರತೆಯನ್ನೂ ಒದಗಿಸುತ್ತಿದೆ. ಕೃಷಿಯ ಪ್ರಾಮುಖ್ಯತೆಯನ್ನು ಹಲವು ವರ್ಷಗಳ ಹಿಂದೆಯೇ ತಿಳಿದುಕೊಂಡಿದ್ದರೆ ನಮ್ಮ ದೇಶ ಇಂದು ಇನ್ನಷ್ಟು ಉತ್ತಮ ಸ್ಥಿತಿಯಲ್ಲಿ ಇರುತ್ತಿತ್ತು. ಕೃಷಿ ತಂತ್ರಜ್ಞಾನ ಎಷ್ಟೇ ಮುಂದುವರೆದಿದ್ದರೂ ರೈತನ ಸ್ಥಿತಿ ಈಗಲೂ ಕೆಳಮಟ್ಟದಲ್ಲೇ ಇದೆ. ಹಾಗಾಗಿ ರೈತನ ಜೀವನಮಟ್ಟ ಸುಧಾರಣೆಗಾಗಿ ಪ್ರಧಾನಿ ಅವರ ದೂರದೃಷ್ಟಿಯಿಂದ ಹಲವು ಯೋಜನೆ, ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

–ಬಸವರಾಜ ಎಸ್. ಬೊಮ್ಮಾಯಿ,
ಮುಖ್ಯಮಂತ್ರಿಗಳು



ಲಕ್ಷ ರೈತರಿಗೆ ರೂ 694.46 ಕೋಟಿ ಹಾಗೂ ಹಿಂಗಾರಿನ ಹಂಗಾಮಿನಲ್ಲಿ ಬಂದಿದ್ದ 3.09 ಲಕ್ಷ ರೈತರ ಪ್ರಸ್ತಾವನೆಗಳಲ್ಲಿ 3106 ರೈತರಿಗೆ ರೂ 99.57 ಲಕ್ಷ ಪರಿಹಾರವನ್ನು ಒದಗಿಸಲಾಗಿದೆ.

**"ರೈತ ಶಕ್ತಿ ಯೋಜನೆ"**

ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದ ಬೆಳವಣಿಗೆಯ ಜೊತೆಗೆ ಕೃಷಿ ಕ್ಷೇತ್ರದಲ್ಲೂ ಆಧುನಿಕ ಯಂತ್ರೋಪಕರಣಗಳ ಬಳಕೆಯಾಗುತ್ತಿದೆ. ಇದು ಕೃಷಿ ಉತ್ಪಾದಕತೆಯನ್ನು ಹೆಚ್ಚಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಹಾಗಾಗಿ ರಾಜ್ಯದಲ್ಲಿಯೇ ಮೊಟ್ಟಮೊದಲ ಬಾರಿಗೆ ಯಂತ್ರೋಪಕರಣಗಳ ಬಳಕೆಯನ್ನು ಪ್ರೋತ್ಸಾಹಿಸಲು ಹಾಗೂ ಇಂಧನ ವೆಚ್ಚದ ಭಾರವನ್ನು ಕಡಿಮೆ ಮಾಡಲು 'ರೈತ ಶಕ್ತಿ' ಎಂಬ ಹೊಸ ಯೋಜನೆಯನ್ನು ಈ ಬಾರಿಯ ಬಜೆಟ್‌ನಲ್ಲಿ ಮುಖ್ಯಮಂತ್ರಿಗಳು ಘೋಷಣೆ ಮಾಡಿದರು.

ಗರಿಷ್ಠ ಐದು ಎಕರೆಯವರೆಗೆ ಪ್ರತಿ ಎಕರೆಗೆ 250 ರೂ.ಗಳಂತೆ ಡೀಸಲ್ ಖರೀದಿಗಾಗಿ ಸಹಾಯಧನವನ್ನು ಈ ಯೋಜನೆಯಡಿ ನೀಡಲು 500 ಕೋಟಿ ರೂ.ಗಳನ್ನು ಒದಗಿಸಲಾಗಿದ್ದು, ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಸರ್ಕಾರಿ ಆದೇಶವನ್ನು ಹೊರಡಿಸಲಾಗಿದೆ.

**"ಸೆಕೆಂಡರಿ ಅಗ್ರಿಕಲ್ಚರ್ ನಿರ್ದೇಶನಾಲಯ"**

2022–23 ರ ಒಳಗೆ ರೈತರ ಆದಾಯವನ್ನು ದ್ವಿಗುಣಗೊಳಿಸಲು ಕೇಂದ್ರ ಸರ್ಕಾರವು ಗುರಿ ಹಾಕಿಕೊಂಡಿದೆ. ಕೃಷಿ ಆದಾಯವನ್ನು ಮಾತ್ರ ನಂಬಿಕೊಂಡು ರೈತರು ಜೀವನ ಮಾಡಲು ಸಾಧ್ಯವಿಲ್ಲ. ಆದ್ದರಿಂದ ಅದಕ್ಕೆ ಪೂರಕವಾಗಿ ಇತರೆ ಚಟುವಟಿಕೆಗಳನ್ನು ನಡೆಸುವುದಕ್ಕೆ ಪ್ರೋತ್ಸಾಹ ನೀಡುವುದು ಮುಖ್ಯವಾಗುತ್ತದೆ.

ರೈತರ ಹೊರೆಯನ್ನು ಇಳಿಸುವುದರ ಜೊತೆಗೆ ಕೃಷಿ ಉತ್ಪಾದನೆಯನ್ನು ಹೆಚ್ಚಿಸಲು ರಾಜ್ಯದಲ್ಲಿ ಸೆಂಕೆಂಡರಿ ಅಗ್ರಿಕಲ್ಚರ್ ನಿರ್ದೇಶನಾಲಯವನ್ನು ಸ್ಥಾಪಿಸಲಾಗಿದೆ. ಕೃಷಿಯಲ್ಲಿ ಲಭ್ಯವಾಗುವ ಮತ್ತು ಜೈವಿಕ ಕಚ್ಚಾ ಸಂಪನ್ಮೂಲಗಳನ್ನು ಮೌಲ್ಯವರ್ಧನೆ ಮಾಡಿ, ಸಂಸ್ಕರಣೆ, ಪ್ಯಾಕಿಂಗ್ ಹಾಗೂ ಸೂಕ್ತ ಬ್ರ್ಯಾಂಡ್ ಮೂಲಕ ಮಾರುಕಟ್ಟೆ ಕಲ್ಪಿಸುವುದು ಸೆಕೆಂಡರಿ ಅಗ್ರಿಕಲ್ಚರ್‌ನ ಮುಖ್ಯ ಧ್ಯೇಯೋದ್ದೇಶವಾಗಿದೆ.

ಕೇಂದ್ರ ಸರ್ಕಾರವು ರೈತರ ಆದಾಯ ದ್ವಿಗುಣಗೊಳಿಸುವ ನಿಟ್ಟಿನಲ್ಲಿ ನಿರ್ದೇಶನಾಲಯವನ್ನು ಸ್ಥಾಪಿಸುವಂತೆ ಸೂಚಿಸಿದ ಹಿನ್ನೆಲೆಯಲ್ಲಿ ಉಳಿದೆಲ್ಲಾ ರಾಜ್ಯಗಳಿಗಿಂತಲೂ ನಮ್ಮ ರಾಜ್ಯ ಸರ್ಕಾರವೇ ಮೊದಲಿಗೆ ಈ ನಿರ್ದೇಶನಾಲಯವನ್ನು ಸ್ಥಾಪಿಸಿತು. ಈ ಬೆಳೆವಣಿಗೆ ಕೂಡ ರಾಜ್ಯ ಸರ್ಕಾರಕ್ಕೆ ರೈತರ ಹಿತದ ಮೇಲೆ ಇರುವ ಕಾಳಜಿಯನ್ನು ತೋರಿಸುತ್ತದೆ.

ರೈತರು ತಮ್ಮ ಬೆಳೆಯನ್ನು ತಾವೇ ಸಮೀಕ್ಷೆ ಮಾಡಿಕೊಳ್ಳಲು ನೆರವಾಗುವಂತಹ ನನ್ನ ಬೆಳೆ ನನ್ನ ಹಕ್ಕು ಎಂಬ ಬೆಳೆ ಸಮೀಕ್ಷೆ ಮೊಬೈಲ್ ಆ್ಯಪ್ ಇಡೀ ದೇಶಕ್ಕೆ ಮಾದರಿಯಾಗಿದೆ. ಈ ಆ್ಯಪ್‌ನಿಂದಾಗಿ ಬೆಳೆ ಸಮೀಕ್ಷೆ ಕಾರ್ಯವು ಅತ್ಯಂತ ತ್ವರಿತವಾಗಿ ಜರುಗುತ್ತಿರುವುದಲ್ಲದೆ, ಪಾರದರ್ಶಕವಾಗಿ



Downloaded From:www.kpscvaani.com




**ಈ ಒಂದು ವರ್ಷದ ಅವಧಿಯಲ್ಲಿ ಸಹಕಾರ ಸಂಘಗಳ ಮೂಲಕ 30.85 ಲಕ್ಷ ರೈತರಿಗೆ 20810 ಕೋಟಿ ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲ ವಿತರಣೆ ಗುರಿ ಹೊಂದಲಾಗಿದ್ದು, 28.42 ಲಕ್ಷ ರೈತರಿಗೆ ರೂ. 2097.79 ಕೋಟಿ ಸಾಲವನ್ನು ವಿತರಿಸಲಾಗಿದೆ. ಆ ಮೂಲಕ ರೈತರ ಸಾಲ ವಿತರಣೆಯಲ್ಲಿ ಶೇ.101 ರಷ್ಟು ಪ್ರಗತಿ ಸಾಧಿಸಲಾಗಿದೆ.**

ಬೆಂಬಲ ಬೆಲೆ, ಬೆಳೆ ವಿಮೆ, ಬೆಳೆ ಸಾಲ ಇವೇ ಮುಂತಾದ ಸೌಲಭ್ಯಗಳನ್ನು ತಲುಪಿಸಲು ಸಾಧ್ಯವಾಗುತ್ತಿದೆ. 2021-22 ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಗುರಿಗಿಂತಲೂ ಹೆಚ್ಚಿನ ತಾಕುಗಳ ಸಮೀಕ್ಷೆಯನ್ನು ಕೈಗೊಳ್ಳಲಾಗಿದ್ದು, 2022-23 ನೇ ಸಾಲಿನ ಪೂರ್ವ ಮುಂಗಾರು ಹಂಗಾಮಿನ ಬೆಳೆ ಸಮೀಕ್ಷೆ ನಡೆಸಲು ಪೂರ್ವಸಿದ್ಧತೆ ಮಾಡಿಕೊಳ್ಳಲಾಗಿದೆ. ಇದರಿಂದಾಗಿ ರೈತರು ಬೆಳೆದ ಬೆಳೆಗೆ ಸರಿಯಾದ ಬೆಲೆ ದೊರಕಿಸಿಕೊಡಲು ಸಾಧ್ಯವಾಗಲಿದೆ.

2021-22 ನೇ ಸಾಲಿನಲ್ಲಿ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ 4,25,419 ರೈತರಿಂದ ರಾಗಿ, ಭತ್ತ, ಜೋಳ, ಕಡಲೇಕಾಳು, ತೊಗರಿ ಹಾಗೂ ಹೆಸರುಕಾಳು ಸೇರಿದಂತೆ ಒಟ್ಟು 77.97 ಲಕ್ಷ ಕ್ವಿಂಟಾಲ್ ವಿವಿಧ ಕೃಷಿ ಉತ್ಪನ್ನಗಳನ್ನು ಖರೀದಿಸಲಾಗಿದೆ.

ಸಕಾಲದಲ್ಲಿ ಉತ್ತಮ ಗುಣಮಟ್ಟದ ಬಿತ್ತನೆ ಬೀಜಗಳನ್ನು ರೈತರಿಗೆ ಒದಗಿಸುವ ಸಲುವಾಗಿ ರೈತ ಸಂಪರ್ಕ ಕೇಂದ್ರಗಳು, ಗುರುತಿಸಿದ ಹೆಚ್ಚುವರಿ ಮಾರಾಟ ಕೇಂದ್ರಗಳು ಮತ್ತು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕ ಬಿತ್ತನೆ ಬೀಜಗಳನ್ನು ವಿತರಿಸಲಾಗುತ್ತಿದೆ. 2021-22 ನೇ ಸಾಲಿನಲ್ಲಿ ರೂ. 166.08 ಕೋಟಿ ಮೌಲ್ಯದ ಸಹಾಯಧನವನ್ನು 15.48 ಲಕ್ಷ ರೈತರು ಪಡೆದುಕೊಂಡಿದ್ದಾರೆ.

**"ಕೃಷಿ ಸಂಜೀವಿನಿ"**

ಬೆಳೆಗೆ ಸರಿಯಾದ ಬೆಲೆ ಒದಗಿಸಿಕೊಡುವುದಕ್ಕೂ ಮೊದಲಿಗೆ ರೈತರು ಬೆಳೆದ ಬೆಳೆಯನ್ನು ವಿವಿಧ ರೋಗ ಕೀಟ ಬಾಧೆ, ಮಣ್ಣಿನ ಪೋಷಕಾಂಶಗಳ ಕೊರತೆ ಇವೇ ಮುಂತಾದವುಗಳಿಂದ ರಕ್ಷಣೆ ಮಾಡುವುದು ಬಹಳ ಮುಖ್ಯ. ಈ ಉದ್ದೇಶದಿಂದ ಸರ್ಕಾರವು ರೈತರ ಜಮೀನಿಗೆ ಹೋಗಿ ಪರಿಹಾರ ನೀಡುವಂತಹ ಕೃಷಿ ಸಂಜೀವಿನಿ ಎಂಬ ಸಂಚಾರಿ ಸಸ್ಯ ಚಿಕಿತ್ಸಾಲಯ ವಾಹನಗಳನ್ನು ಪ್ರಾರಂಭಿಸಿದೆ. ಪ್ರಯೋಗಾಲಯದಿಂದ ರೈತರ ಹೊಲದವರೆಗೆ ಎಂಬ ಉದ್ದೇಶದಿಂದ ಪ್ರಾರಂಭಿಸಲಾಗಿರುವ ಈ ಸಂಚಾರಿ ವಾಹನವು ಪ್ರತಿ ದಿನ ಒಂದು ತಾಲ್ಲೂಕಿನಲ್ಲಿ ಸಂಚರಿಸುತ್ತದೆ. ಈ ವಾಹನದಲ್ಲಿ ಡಿಪ್ಲೋಮಾ ಪದವಿ ಹೊಂದಿದ ಕೃಷಿ ತಜ್ಞರು, ವಿಷಯ ತಜ್ಞರು ಮತ್ತು ರೈತ ಸಂಪರ್ಕ ಕೇಂದ್ರದ ಅಧಿಕಾರಿಗಳಿದ್ದು, ಅವರು ಬೆಳೆ ಸಂರಕ್ಷಣೆ ಕುರಿತು ಮಾರ್ಗೋಪಾಯಗಳನ್ನು ಒದಗಿಸಲಿದ್ದಾರೆ.

ಕೃಷಿಗೆ ಫಲವತ್ತಾದ ಭೂಮಿ ಎಷ್ಟು ಮುಖ್ಯವೋ, ಹಾಗೆಯೇ ನೀರು ಕೂಡ ಅಷ್ಟೇ ಪ್ರಮುಖವಾಗುತ್ತದೆ. ಕೃಷಿ ಚಟುವಟಿಕೆ ಸರಾಗವಾಗಿ ಸಾಗಲು ನೀರಾವರಿ ಸೌಲಭ್ಯವಿರಲೇಬೇಕು. ಸರ್ಕಾರವು ರೈತರ ಬೆಳೆಗಳಿಗೆ ನೀರನ್ನು ಒದಗಿಸುವ ನಿಟ್ಟಿನಲ್ಲಿ ಹಲವಾರು ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡುತ್ತಿದೆ. ಕಳೆದ ಒಂದು ವರ್ಷದಲ್ಲಿ ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ 1421 ವಿವಿಧ ನೀರು ಸಂಗ್ರಹಣಾ ವಿನ್ಯಾಸಗಳಾದ ತಡೆಅಣೆ, ಕಿಂಡಿ ಅಣೆ, ನಾಲಾಬದು, ಜಿನುಗು ಕೆರೆ ಮತ್ತು ಗೋಕಟ್ಟೆಗಳನ್ನು ರೂ 63.90 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿದೆ. ಹಾಗೆಯೇ ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆ-ಜಲಾನಯನ ಅಭಿವೃದ್ಧಿ ಘಟಕ-2.0 ಕಾರ್ಯಕ್ರಮದಡಿ ರಾಜ್ಯದ 57 ತಾಲ್ಲೂಕುಗಳಲ್ಲಿ 57 ಯೋಜನೆಗಳನ್ನು 2,75,006 ಹೆಕ್ಟೇರ್ ಪ್ರದೇಶದಲ್ಲಿ ಅನುಷ್ಠಾನಗೊಳಿಸಲು ತಗಲುವ ವೆಚ್ಚ ರೂ 642.2615 ಕೋಟಿ ಅನುದಾನವನ್ನು ಮಂಜೂರು ಮಾಡಲಾಗಿದೆ. ಜಲಾನಯನ ಅಭಿವೃದ್ಧಿ ಮೂಲಕ ಬರಗಾಲವನ್ನು ತಡೆಯುವುದಕ್ಕಾಗಿ ರೂ 40.07 ಕೋಟಿ ವೆಚ್ಚದಲ್ಲಿ 33,010 ಹೆಕ್ಟೇರ್ ಪ್ರದೇಶವನ್ನು ಉಪಚರಿಸಲಾಗಿದೆ. ರೈತರ ಆರ್ಥಿಕ ಮಟ್ಟವನ್ನು ಹೆಚ್ಚಿಸಲು ಇವು ಪೂರಕವಾಗಿ ಸಹಕಾರಿಯಾಗಲಿವೆ.

ಇನ್ನು ರಾಜ್ಯದಲ್ಲಿ ನೀರಾವರಿ


Downloaded From:www.kpscvaani.com

ಪ್ರದೇಶವನ್ನು ಹೆಚ್ಚಿಸಲು ಸರ್ಕಾರವು 2021-22ನೇ ಸಾಲಿನಲ್ಲಿ 8,774 ಕೋಟಿ ರೂ ವೆಚ್ಚದಲ್ಲಿ ಹೊಸ ನೀರಾವರಿ ಯೋಜನೆಗಳಿಗೆ ಅನುಮೋದನೆ ನೀಡಿರುವುದಲ್ಲದೆ, ಯೋಜನೆಗಳಿಗೆ ರೂಪುರೇಷೆಗಳನ್ನು ಸಿದ್ಧಪಡಿಸುತ್ತಿದೆ. 2022-23 ನೇ ಸಾಲಿನಲ್ಲಿ ಪ್ರಗತಿಯಲ್ಲಿರುವ 14 ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸುವ ಗುರಿ ಹೊಂದಲಾಗಿರುವುದರಿಂದ ಸುಮಾರು 35,319 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ದೊರಕಲಿದೆ. ಉತ್ತರ ಕರ್ನಾಟಕದ ಮಹತ್ವಾಕಾಂಕ್ಷಿ ಯೋಜನೆಯಾಗಿರುವ ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3ರ ಅನುಷ್ಠಾನಕ್ಕಾಗಿ ಪ್ರಸಕ್ತ ಆಯವ್ಯಯದಲ್ಲಿ 5,000 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗಿದೆ.



ರಾಜ್ಯದ ಕೆರೆಗಳ ಸಮಗ್ರ ಅಭಿವೃದ್ಧಿಯನ್ನು ಸರ್ಕಾರವು ಕೈಗೊಳ್ಳುತ್ತಿದ್ದು, ಅದಕ್ಕಾಗಿ 500 ಕೋಟಿ ರೂ.ಗಳ ವೆಚ್ಚದ ಕಿಯಾ ಯೋಜನೆಯನ್ನು ರೂಪಿಸಲಾಗುತ್ತಿದೆ. ಅಲ್ಲದೆ ಪ್ರವಾಹದಿಂದ ಹಾನಿಯಾಗಿರುವ ಕೆರೆಗಳ ದುರಸ್ತಿಯನ್ನು ಕೈಗೊಳ್ಳಲು ಮತ್ತು ನೀರು ಸಂಗ್ರಹಣಾ ಸಾಮರ್ಥ್ಯವನ್ನು ಹೆಚ್ಚಿಸಲು 200 ಕೋಟಿ ರೂ ಅನುದಾನವನ್ನು ಮೀಸಲಿಡಲಾಗಿದೆ.

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ರೈತರ ಮಕ್ಕಳಿಗೆ ಶೇಕಡ 50 ರಷ್ಟು ಸೀಟನ್ನು ಹಂಚಿಕೆ ಮಾಡಿರುವುದಲ್ಲದೆ, ಶೇಕಡ 10 ರಷ್ಟು ಸ್ನಾತಕ ಮತ್ತು ಸ್ನಾತಕೋತ್ತರ ಸೀಟುಗಳನ್ನು ಹೆಚ್ಚಿಸಿದೆ. ಅಲ್ಲದೆ ಶಾಲಾ ಶಿಕ್ಷಣದಲ್ಲಿಯೇ ಕೃಷಿಯನ್ನು ಮುಖ್ಯವಾಹಿನಿಗೆ ತರಲು ಪಠ್ಯಕ್ರಮವನ್ನು ಸಿದ್ಧಪಡಿಸಿದೆ.

ಕೃಷಿ ಬೆಳೆಗಳಿಗೆ ಪರ್ಯಾಯವಾಗಿ ತೋಟಗಾರಿಕೆ ಬೆಳೆಗಳ ಬೇಸಾಯದಿಂದ ರೈತರು ಲಾಭಗಳಿಸಬಹುದು. ಹಾಗಾಗಿ ತೋಟಗಾರಿಕೆಯಲ್ಲಿ ತೊಡಗಿರುವ ಕೃಷಿಕರಿಗಾಗಿ ಕೂಡ ಸರ್ಕಾರ ಹಲವು ಯೋಜನೆಗಳನ್ನು ಹಮ್ಮಿಕೊಂಡಿದೆ. ದ್ರಾಕ್ಷಾರಸವನ್ನು ಅಂತಾರಾಷ್ಟ್ರೀಯ ಮಟ್ಟಕ್ಕೆ ಕೊಂಡೊಯ್ಯಲು ಮತ್ತು ದ್ರಾಕ್ಷಿ ಬೆಳೆಗಾರರ ಆರ್ಥಿಕ ಸ್ಥಿತಿಯನ್ನು ಉತ್ತಮ ಪಡಿಸಲು ದ್ರಾಕ್ಷಿ ಅಭಿವೃದ್ಧಿ ಮತ್ತು ದ್ರಾಕ್ಷರಸ ಮಂಡಳಿಯಲ್ಲಿ ತಾಜಾ ದ್ರಾಕ್ಷಿ ಉದ್ಪಾದನೆಯನ್ನು ಹೆಚ್ಚಿಸಲು ಸರ್ಕಾರ ಉದ್ದೇಶಿಸಿದೆ. ಇದರಿಂದ ಸುಮಾರು 1 ಲಕ್ಷಕ್ಕೂ ಅಧಿಕ ಜನರಿಗೆ ಉದ್ಯೋಗ ದೊರಕಲಿದೆ.

ತೈಲ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸುವ ನಿಟ್ಟಿನಲ್ಲಿ ತಾಳೆ ಬೆಳೆಗೆ ಬೆಂಬಲ ಬೆಲೆ ನೀಡಲಾಗುತ್ತಿದೆಯಲ್ಲದೆ ಮುಂದಿನ ಐದು ವರ್ಷಗಳಲ್ಲಿ 25 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ತಾಳೆ ಬೆಳೆ ಹೆಚ್ಚಿಸುವ ಗುರಿಯನ್ನು ಸರ್ಕಾರವು ಹೊಂದಿದ್ದು, ಇದಕ್ಕಾಗಿ 35 ಕೋಟಿ ರೂ ಅನುದಾನವನ್ನು ಒದಗಿಸಿದೆ.

ಚನ್ನಪಟ್ಟಣ ತಾಲ್ಲೂಕಿನಲ್ಲಿ ಮಾವು ಮತ್ತು ಬಹು ಉತ್ಪನ್ನ ಸಂಸ್ಕರಣಾ ಘಟಕ ಸ್ಥಾಪನೆಗೆ ಸರ್ಕಾರ ಸಿದ್ಧತೆ ನಡೆಸಿದೆ. ತೋಟಗಾರಿಕಾ ಬೆಳೆಗಳಿಗೆ ಹನಿ ನೀರಾವರಿ ಅಳವಡಿಸಿಕೊಳ್ಳಲು ಸಹಾಯಧನ, ಅಡಿಕೆ ಬೆಳೆಗೆ ಬಾಧಿಸುವ ಎಲೆ ಚುಕ್ಕೆ ರೋಗ ನಿಯಂತ್ರಣಕ್ಕೆ ಸಹಾಯಧನ, ಜೇನು ಸಾಕಣಿಗೆ ಸಹಾಯಧನ ಇವೇ ಮುಂತಾದ ಸೌಲಭ್ಯಗಳನ್ನು ತೋಟಗಾರಿಕೆ ಇಲಾಖೆವತಿಯಿಂದ ನೀಡಲಾಗುತ್ತಿದೆ.



ಕೃಷಿ ಆಧಾರಿತ ರೇಷ್ಮೆ ಉದ್ಯಮವು ಗ್ರಾಮೀಣ ಜನರಿಗೆ ಸುಸ್ಥಿರ ಜೀವನೋಪಾಯ ನಡೆಸುವ ಅವಕಾಶವನ್ನು ಕಲ್ಪಿಸುತ್ತದೆ. ರೇಷ್ಮೆ ಉತ್ಪಾದನೆಯಲ್ಲಿ ನಮ್ಮ ರಾಜ್ಯವು ರಾಷ್ಟ್ರದಲ್ಲಿಯೇ ಪ್ರಥಮ ಸ್ಥಾನದಲ್ಲಿದೆ. ರೇಷ್ಮೆ ಬೆಳೆಗಾರರ ಆದಾಯವನ್ನು ಹೆಚ್ಚಿಸಲು ಕೂಡ ಮುಖ್ಯಮಂತ್ರಿಗಳು ಉದ್ದೇಶಿಸಿದ್ದಾರೆ. ಹಾಗಾಗಿ ಅವರು



Downloaded From:www.kpscvaani.com



**ಜೇನು ಸಾಕಾಣಿಕೆ ಸಹಕಾರ ಸಂಘಗಳು ಮತ್ತು ರೈತ ಉತ್ಪಾದಕ ಸಂಸ್ಥೆಗಳ ಸಹಯೋಗದೊಂದಿಗೆ ಕೊಡಗು ಮತ್ತು ಬೆಳಗಾವಿಯ ಜಾಂಬೋಟಿ ಜೇನುತುಪ್ಪವನ್ನು ಜನಪ್ರಿಯಗೊಳಿಸಲು ಆಧುನಿಕ ಜೇನು ಸಾಕಾಣಿಕೆ ಮತ್ತು ಉತ್ಕೃಷ್ಟ ಜೇನುತುಪ್ಪ ಉತ್ಪಾದನಾ ಕೇಂದ್ರವನ್ನು ಸ್ಥಾಪಿಸಲು ಸರ್ಕಾರವು ಸಿದ್ಧತೆ ನಡೆಸಿದ್ದು, ಅದಕ್ಕಾಗಿ 5 ಕೋಟಿ ರೂ ಅನುದಾನವನ್ನು ಒದಗಿಸಿದೆ.**

2022–23 ನೇ ಸಾಲಿನ ಆಯವ್ಯಯದಲ್ಲಿ ಸರ್ಕಾರಿ ರೇಷ್ಮೆ ಗೂಡು ಮಾರುಕಟ್ಟೆಯಲ್ಲಿ ಮಾರಾಟ ಮಾಡುವ ಪ್ರತಿ ಟನ್ ದ್ವಿತಳಿ ರೇಷ್ಮೆ ಗೂಡಿಗೆ ಹತ್ತು ಸಾವಿರ ರೂಗಳಂತೆ ಪ್ರೋತ್ಸಾಹಧನ ನೀಡುವ ಯೋಜನೆಯನ್ನು ಪ್ರಕಟಿಸಿದರು. ಈ ಯೋಜನೆಯನ್ನು ಪ್ರಾರಂಭಿಸಲು ಕ್ರಮಕೈಗೊಳ್ಳಲಾಗುತ್ತಿದೆ. ಅದೇ ರೀತಿಯಲ್ಲಿ ದ್ವಿತಳಿ ಬಿತ್ತನೆ ಗೂಡಿಗೆ ನೀಡುತ್ತಿರುವ ಪ್ರೋತ್ಸಾಹಧನವನ್ನು ಪ್ರತಿ ಕೆಜಿಗೆ 50 ರೂಗಳಷ್ಟು ಏರಿಕೆ ಮಾಡಲಾಗಿದ್ದು, ರೇಷ್ಮೆ ಬಿಚ್ಚಾಣಿಕೆದಾರರು ಉತ್ಪಾದಿಸಿದ ಕಚ್ಚಾ ರೇಷ್ಮೆಗೂ ಪ್ರೋತ್ಸಾಹಧನ ನೀಡಲು ಕ್ರಮವಹಿಸಲಾಗುತ್ತಿದೆ. ಹಾಗೆಯೇ ರೇಷ್ಮೆ ಗೂಡು ಮತ್ತು ಕಚ್ಚಾ ರೇಷ್ಮೆ ಧಾರಣೆಗಳಲ್ಲಿ ಕುಸಿತವಾದ ಸಂದರ್ಭದಲ್ಲಿ ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಯ ವತಿಯಿಂದಲೇ ಖರೀದಿಸಲು ಕ್ರಮವಹಿಸಲಾಗುತ್ತಿದೆ.

ಇನ್ನು ಕೃಷಿಕರು ತಮ್ಮ ವ್ಯವಸಾಯದ ಜೊತೆಗೆ ಉಪಕಸುಬಾಗಿ ಜಾನುವಾರುಗಳ ಸಾಕಾಣಿಕೆಯಲ್ಲೂ ಕೂಡ ತೊಡಗುತ್ತಾರೆ. ರೈತರ ಜಾನುವಾರುಗಳ ಆರೋಗ್ಯ ಕಾಪಾಡುವ ಜವಾಬ್ದಾರಿಯನ್ನು ಸರ್ಕಾರ ಕೈಗೊಂಡಿದೆ. ಈ ನಿಟ್ಟಿನಲ್ಲಿ ರೈತರ ಮನೆ ಬಾಗಿಲಿಗೆ ತುರ್ತು ಅಗತ್ಯ ಪಶುವೈದ್ಯಕೀಯ ಚಿಕಿತ್ಸೆಯನ್ನು ಒದಗಿಸಲು ಕೇಂದ್ರ ಸರ್ಕಾರವು ನಮ್ಮ ರಾಜ್ಯಕ್ಕೆ 275 ಸಂಚಾರಿ ಪಶುಚಿಕಿತ್ಸಾ ವಾಹನಗಳನ್ನು ಒದಗಿಸಿದೆ. ಅಲ್ಲದೆ ಜಾನುವಾರುಗಳಿಗೆ ದಿನದ ಇಪ್ಪತ್ನಾಲ್ಕು ಗಂಟೆ ನಿರಂತರ ಸೇವೆಯನ್ನು ಒದಗಿಸಲು ಪಶುಪಾಲನ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಿಂದ ಪ್ರಾಣಿ ಕಲ್ಯಾಣ ಸಹಾಯವಾಣಿಯನ್ನು ಪ್ರಾರಂಭಿಸಲಾಗಿದೆ. ಆಕಸ್ಮಿಕವಾಗಿ ಮರಣ ಹೊಂದಿದ ಕುರಿ/ಮೇಕೆಗಳ ಮಾಲೀಕರಿಗೆ ಕಳೆದ ಒಂದು ವರ್ಷದಲ್ಲಿ ರೂ. 54.32 ಕೋಟಿಗಳನ್ನು ನೇರ ನಗದು ವರ್ಗಾವಣೆ ಮೂಲಕ ಪರಿಹಾರವನ್ನು ಒದಗಿಸಲಾಗಿದೆ.





Downloaded From:www.kpscvaani.com

**"ಕ್ಷೀರ ಸಮೃದ್ಧಿ ಸಹಕಾರ ಬ್ಯಾಂಕ್"**

ದೇಶದಲ್ಲಿಯೇ ಪ್ರಥಮ ಬಾರಿಗೆ ರಾಜ್ಯ ಸರ್ಕಾರವು ಹಾಲು ಉತ್ಪಾದಕರಿಗೆ ಸರಳ ನಿಬಂಧನೆಗಳೊಂದಿಗೆ ಸಾಲ ಸೌಲಭ್ಯ ನೀಡಲು ಕ್ಷೀರ ಸಮೃದ್ಧಿ ಸಹಕಾರ ಬ್ಯಾಂಕ್ ಅನ್ನು ಸ್ಥಾಪಿಸಿದೆ. ಮುಖ್ಯಮಂತ್ರಿಯವರು ತಮ್ಮ ಆಯವ್ಯಯದಲ್ಲಿ ಇದಕ್ಕಾಗಿ 100 ಕೋಟಿ ರೂಪಾಯಿ ಷೇರು ಬಂಡವಾಳವನ್ನು ಒದಗಿಸಿದ್ದಾರೆ. ಮಾರ್ಚ್ 23 ರಂದು ಸರ್ಕಾರಿ ಆದೇಶವೂ ಜಾರಿಯಾಗಿದೆ. ಇದೊಂದು ಕ್ರಾಂತಿಕಾರಿ ಹೆಜ್ಜೆಯಾಗಿದ್ದು, ಇದರಿಂದ ಮುಂದಿನ ದಿನಗಳಲ್ಲಿ ಹಾಲು ಉತ್ಪಾದಕರಿಗೆ ಹೆಚ್ಚಿನ ಆರ್ಥಿಕ ನೆರವು ಸಿಗಲಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ನೇತೃತ್ವದ ಸರ್ಕಾರವು ಗೋ ಸಂಪತ್ತಿನ ಸಂರಕ್ಷಣೆಗೆ ಹೆಚ್ಚಿನ ಮಹತ್ವವನ್ನು ನೀಡಿದೆ. ಸದ್ಯ 15 ಕೋಟಿ ರೂ ಅನುದಾನದಲ್ಲಿ ಪ್ರತಿ ಜಿಲ್ಲೆಗೆ ಒಂದರಂತೆ ಸರ್ಕಾರಿ ಗೋಶಾಲೆಗಳನ್ನು ನಡೆಸಲಾಗುತ್ತಿದೆ. ಆದಾಗ್ಯೂ ಕಳೆದ ಆಯವ್ಯಯದಲ್ಲಿ ಗೋಶಾಲೆಗಳ ಸಂಖ್ಯೆಯನ್ನು 31 ರಿಂದ 100ಕ್ಕೆ ಹೆಚ್ಚಿಸಲು 50 ಕೋಟಿ ರೂಗಳನ್ನು ಮುಖ್ಯಮಂತ್ರಿಗಳು ಒದಗಿಸಿದ್ದಾರೆ.

ಕಳೆದ ಒಂದು ವರ್ಷದಲ್ಲಿ ರಾಜ್ಯದ 8.95 ಲಕ್ಷ ಹಾಲು ಉತ್ಪಾದಕರಿಗೆ ರೂ. 1643.57 ಕೋಟಿ ಪ್ರೋತ್ಸಾಹ ಧನವನ್ನು ನೇರ ನಗದು ವರ್ಗಾವಣೆ ಮುಖಾಂತರ ಸರ್ಕಾರವು ಅವರ ಬ್ಯಾಂಕ್ ಖಾತೆಗಳಿಗೆ ಜಮೆ ಮಾಡಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಶೇಕಡ 90 ರಷ್ಟು ಸಹಾಯಧನದೊಂದಿಗೆ ಹಾಲು ಕರೆಯುವ ಯಂತ್ರಗಳನ್ನು ವಿತರಿಸಲಾಗುತ್ತಿದೆ.

ಕರಾವಳಿ ಭಾಗದ ಮೀನುಗಾರರ ಆದಾಯವನ್ನು ಹೆಚ್ಚಿಸಲು ಕೂಡ ರಾಜ್ಯ ಸರ್ಕಾರವು ಮುಂದಾಗಿದೆ. ನಮ್ಮಲ್ಲಿ ಬಹುತೇಕ ಮೀನು ಉತ್ಪಾದನೆಯು ಸಮುದ್ರ ತೀರದಲ್ಲೇ ಆಗುತ್ತಿರುವುದರಿಂದ ಆಳ ಸಮುದ್ರ ಮೀನುಗಾರಿಕೆಯ ಸಾಮರ್ಥ್ಯದ ವೃದ್ಧಿಗೆ ಸರ್ಕಾರವು ಹೆಚ್ಚಿನ ಒತ್ತು ನೀಡುತ್ತಿದೆ. ಈ ಹಿನ್ನೆಲೆಯಲ್ಲಿ 100 ಆಳ ಸಮುದ್ರ ಮೀನುಗಾರಿಕಾ ದೋಣಿಗಳಿಗೆ ಪ್ರಧಾನಮಂತ್ರಿ ಮತ್ಸ್ಯ ಸಂಪದ ಯೋಜನೆಯೊಂದಿಗೆ ಸಂಯೋಜಿಸಿ 'ಮತ್ಸ್ಯ ಸಿರಿ' ಎಂಬ ವಿಶೇಷ ಯೋಜನೆಯನ್ನು ರಾಜ್ಯದಲ್ಲಿ ಮೊಟ್ಟ ಮೊದಲ ಬಾರಿಗೆ ರೂಪಿಸಲಾಗಿದೆ.

ಮೀನುಗಾರಿಕೆಗೆ ಅವಶ್ಯಕತೆ ಇರುವ ಮೀನುಗಾರಿಕೆ ಬಂದರು, ಇಳಿದಾಣ ಕೇಂದ್ರಗಳು, ಕೊಂಡಿ ರಸ್ತೆಗಳು ಸೇರಿದಂತೆ ಮೂಲಭೂತ ಸೌಲಭ್ಯಗಳ ಅಭಿವೃದ್ಧಿಯನ್ನು ಸರ್ಕಾರ ಕೈಗೊಂಡಿದೆ. ಇನ್ನು ಮಹಿಳಾ ಮೀನುಗಾರರನ್ನು ಪ್ರೋತ್ಸಾಹಿಸಲು 4870 ಮಹಿಳಾ ಮೀನುಗಾರರಿಗೆ ಮೀನುಗಾರಿಕೆ ಚಟುವಟಿಕೆಗಳನ್ನು ಕೈಗೊಳ್ಳಲು 50 ಸಾವಿರ ರೂ.ಗಳವರೆಗೆ ಶೂನ್ಯ ಬಡ್ಡಿ ದರದಲ್ಲಿ ಅಲ್ಪಾವಧಿ ಸಾಲವನ್ನು ಒದಗಿಸಲಾಗುತ್ತಿದೆ.

ಒಳನಾಡು ಮೀನುಗಾರಿಕೆ ಅಭಿವೃದ್ಧಿಯಡಿ ಸುಮಾರು 3407 ಇಲಾಖೆಯ ಕೆರೆಗಳನ್ನು ಮತ್ತು 2835 ಗ್ರಾಮ ಪಂಚಾಯತ್ ಕೆರೆಗಳಲ್ಲಿ ಪ್ರತಿ ವರ್ಷ ಉತ್ತಮ ಗುಣಮಟ್ಟದ ಮೀನುಮರಿಗಳನ್ನು ದಾಸ್ತಾನು ಮಾಡಿ ಅಭಿವೃದ್ಧಿ ಪಡಿಸಲಾಗುತ್ತಿದೆ. ಇನ್ನು ಸಂಕಷ್ಟ ಪರಿಹಾರ ನಿಧಿ ಯೋಜನೆಯಡಿ 87 ಪ್ರಕರಣಗಳಿಗೆ ರೂ. 340.60 ಲಕ್ಷ ಪರಿಹಾರವನ್ನು ಹಾಗೂ 3532 ಯಾಂತ್ರೀಕೃತ ಮೀನುಗಾರಿಕೆ ದೋಣಿಗಳಿಗೆ ರೂ.88.11 ಕೋಟಿ ವೆಚ್ಚದಲ್ಲಿ ಡೀಸಲ್ ಸಹಾಯಧನವನ್ನು ವಿತರಿಸಲಾಗಿದೆ.

'ಜೈ ಜವಾನ್ ಜೈ ಕಿಸಾನ್' ಎಂದು ಮಾಜಿ ಪ್ರಧಾನಮಂತ್ರಿ ಲಾಲ್ ಬಹದ್ದೂರ್ ಶಾಸ್ತ್ರಿ ಹೇಳಿರುವುದು ಸರಿಯಾಗಿದೆ. ಸೈನಿಕರು ಶತ್ರುಗಳಿಂದ ನಮ್ಮ ದೇಶವನ್ನು ಮತ್ತು ನಮ್ಮನ್ನು ರಕ್ಷಿಸುತ್ತಿರುವಂತೆ, ರೈತರು ಪ್ರತಿದಿನ ದೇಶವನ್ನು ಮತ್ತು ನಮ್ಮನ್ನು ಪೋಷಿಸುತ್ತಿದ್ದಾರೆ. ಹಾಗಾಗಿ ನಾವು ಅವರಿಬ್ಬರಿಗೂ ಜೈಕಾರ ಹಾಕಲೇಬೇಕು. ಬೇರೆ ಯಾರೇ ಇಲ್ಲದಿದ್ದರೂ ನಾವು ಬದುಕಬಹುದು. ಆದರೆ ರೈತನಿಲ್ಲದೆ ಬದುಕಲು ಸಾಧ್ಯವಿಲ್ಲ. ಅಂತಹ ರೈತನ ಆದಾಯವನ್ನು ದ್ವಿಗುಣ ಮಾಡಲು ಪಣತೊಟ್ಟಿರುವ ಸರ್ಕಾರವು ಅವರ ಆರೋಗ್ಯದ ವಿಚಾರದಲ್ಲೂ ಗಮನ ಹರಿಸಿದೆ. ರೈತ ಆರೋಗ್ಯವಂತನಾಗಿದ್ದರೆ ಕೃಷಿಯಲ್ಲಿ ತೊಡಗಿ ಆದಾಯವನ್ನು ಗಳಿಸಲು ಸಾಧ್ಯ. ಹಾಗಾಗಿ ಸರ್ಕಾರವು 'ಯಶಸ್ವಿನಿ' ಯೋಜನೆಯನ್ನು ಪರಿಷ್ಕರಿಸಿ, ಮರು ಜಾರಿಗೊಳಿಸಿ ಅನುಷ್ಠಾನಗೊಳಿಸಲು ತಾತ್ವಿಕ ಅನುಮೋದನೆಯನ್ನು ನೀಡಿದ್ದು, ಈ ಉದ್ದೇಶಕ್ಕಾಗಿ ರಾಜ್ಯ ಸರ್ಕಾರವು 300 ಕೋಟಿ ರೂ.ಗಳನ್ನು ಒದಗಿಸಿದೆ.

ಕೃಷಿಯು ಅತ್ಯಂತ ಮಹತ್ವದ ಆರ್ಥಿಕ ಚಟುವಟಿಕೆಯನ್ನು ಹೊಂದಿರುವ ಕ್ಷೇತ್ರವಾಗಿದೆ. ಅಭಿವೃದ್ಧಿಶೀಲ ದೇಶವಾದ ನಮ್ಮ ದೇಶದ ಬಹುಪಾಲು ಜನರು ನೇರವಾಗಿ ಅಥವಾ ಪರೋಕ್ಷವಾಗಿ ತಮ್ಮ ಜೀವನೋಪಾಯಕ್ಕಾಗಿ ಕೃಷಿ ಕ್ಷೇತ್ರವನ್ನು ಅವಲಂಬಿಸಿದ್ದಾರೆ. ಒಟ್ಟಿನಲ್ಲಿ ರೈತರು, ರೇಷ್ಮೆ ಬೆಳೆಗಾರರು, ಹಾಲು ಉತ್ಪಾದಕರು, ಮೀನುಗಾರರು, ಕುರಿ/ಮೇಕೆ ಸಾಕಾಣಿಗಾರರ ಆದಾಯವನ್ನು ಹೆಚ್ಚಿಸಲು ನಮ್ಮ ರಾಜ್ಯ ಸರ್ಕಾರವು ಹೊಸ ಹೊಸ ಯೋಜನೆಗಳು ಮತ್ತು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ಇದು ಗ್ರಾಮೀಣ ಭಾಗದ ಜನರಲ್ಲಿ ಆಶಾದಾಯಕ ಭರವಸೆಯನ್ನು ಮೂಡಿಸಿದೆ. ■





Downloaded From:www.kpscvaani.com



ಅಂಚಿನಲ್ಲಿರುವ, ಕಟ್ಟಕಡೆಯ ವ್ಯಕ್ತಿಯ ಶ್ರೇಯೋಭಿವೃದ್ಧಿ ಸರ್ಕಾರದ ಗುರಿ. ಇದೇ ಸರ್ವೋದಯದ ಮೂಲ. ಈ ಕಾರಣದಿಂದಲೇ ಈ ಬಾರಿಯ ಆಯವ್ಯಯದಲ್ಲಿ 68,479 ಕೋಟಿ ರೂಪಾಯಿ ಅನುದಾನವನ್ನು ಸರ್ವೋದಯ ಮತ್ತು ಕ್ಷೇಮಾಭಿವೃದ್ಧಿಗಾಗಿ ಸರ್ಕಾರ ನಿಗದಿ ಮಾಡಿದೆ. ಶಿಕ್ಷಣ, ಆರೋಗ್ಯ, ಕೌಶಲ್ಯಾಭಿವೃದ್ಧಿ ಮತ್ತು ವಿವಿಧ ಕಲ್ಯಾಣ ಕಾರ್ಯಕ್ರಮಗಳಿಗೆ 6,329 ಕೋಟಿ ರೂಪಾಯಿ ಹೆಚ್ಚುವರಿ ಅನುದಾನವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಒದಗಿಸಿದ್ದಾರೆ.

# ಸರ್ವ ಜನರ ಕ್ಷೇಮಾಭಿವೃದ್ಧಿಯಡೆಗೆ ಸರ್ಕಾರದ ನಡೆ...

ವಿ. ನಂಜುಂಡಪ್ಪ

ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಹಯೋಗದಲ್ಲಿ ರಾಷ್ಟ್ರೀಯ ನಗರ ಮತ್ತು ಗ್ರಾಮೀಣ ಜೀವನೋಪಾಯ ಅಭಿಯಾನದಡಿ ದೀನ್ ದಯಾಳ್ ಅಂತ್ಯೋದಯ ಯೋಜನೆಯನ್ನು ಕೌಶಲ್ಯಾಭಿವೃದ್ಧಿ ಮತ್ತು ಜೀವನೋಪಾಯ ಇಲಾಖೆಯಿಂದ ಅನುಷ್ಠಾನಗೊಳಿಸಲಾಗಿದೆ. ಬೀದಿ ಬದಿ ವ್ಯಾಪಾರಿಗಳು, ಲಿಂಗತ್ವ ಅಲ್ಪಸಂಖ್ಯಾತರು, ನಗರ ಪ್ರದೇಶದ ನಿರಾಶ್ರಿತರು ಒಳಗೊಂಡಂತೆ ಸರ್ವರ ಅಭ್ಯುದಯ ಈ ಯೋಜನೆಯ ಗುರಿ. ಒಂದು ಕಾಲದಲ್ಲಿ ಬೀದಿ ವ್ಯಾಪಾರ ಮಾಡುವವರು ಸಂಕಷ್ಟದಲ್ಲಿದ್ದರು. ಇದೀಗ ಇವರಿಗೂ ಕಾನೂನಿನ ಸುರಕ್ಷತೆ, ಮಳೆ, ಗಾಳಿಯಿಂದ ರಕ್ಷಣೆ, ವ್ಯಾಪಾರ ವಹಿವಾಟು ನಡೆಸಲು ಪ್ರತ್ಯೇಕ ವ್ಯವಸ್ಥೆ, ಸಾಲ ಸೌಲಭ್ಯದ ಜೊತೆಗೆ ಸುಗಮವಾಗಿ ಪರವಾನಗಿ ನೀಡುವ ಹತ್ತು ಹಲವು ಕ್ರಮಗಳು ಇವರ ಬದುಕಿನಲ್ಲಿ ಹೊಸ ಆಶಾಕಿರಣ ಮೂಡಿಸಿವೆ.

ಬೀದಿ ಬದಿ ವ್ಯಾಪಾರಿಗಳಿಗೆ ಲೇವಾದೇವಿಗಾರರ ಉಪಟಳ ಬಹುತೇಕ ಕಡಿಮೆಯಾಗಿದೆ. ಬಡ್ಡಿ, ಚಕ್ರಬಡ್ಡಿ, ಮೀಟರ್ ಬಡ್ಡಿ ಕಟ್ಟಿ ಸುಸ್ತಾಗಿದ್ದವರ ಬದುಕಿನಲ್ಲಿ ನೆಮ್ಮದಿ ಮೂಡಿದೆ. ಸರ್ವೋದಯ ಮತ್ತು ಕ್ಷೇಮಾಭಿವೃದ್ಧಿ ಎಂಬ ಪರಿಕಲ್ಪನೆಯಲ್ಲಿ ಸರ್ಕಾರ ಭಿಕ್ಷುಕರು, ನಗರ ನಿರಾಶ್ರಿತರ ಬಾಳಿನಲ್ಲೂ ಹೊಸ ಬೆಳಕು ಮೂಡಿಸುತ್ತಿದೆ. ಮನೆ ಬಿಟ್ಟು ಬಂದವರು, ಬೀದಿಯಲ್ಲಿ ಮಲಗುವವರನ್ನು ಪತ್ತೆ ಮಾಡಿ ನಿರಾಶ್ರಿತರ



Downloaded From:www.kpscvaani.com

ತಂಗುದಾಣಕ್ಕೆ ಸೇರಿಸಲಾಗುತ್ತಿದೆ. ಇಂತಹ ತಂಗು ದಾಣಗಳನ್ನು ನಗರ ಪ್ರದೇಶಗಳಲ್ಲಿ ನಿರ್ಮಿಸುವ ಕಾರ್ಯ ತೀವ್ರಗತಿಯಲ್ಲಿ ಸಾಗಿದೆ. ಸಂವಿಧಾನ ಪ್ರತಿಯೊಬ್ಬರಿಗೂ ಘನತೆಯಿಂದ ಬದುಕುವ ಹಕ್ಕು ನೀಡಿದ್ದು, ಇದನ್ನು ಸರ್ಕಾರ ಅಕ್ಷರಶಃ ಪಾಲಿಸುತ್ತಿದೆ.

ಮಹಿಳಾ ಉದ್ದೇಶಿತ ಯೋಜನೆಗಳಿಗಾಗಿ 43,188 ಕೋಟಿ ರೂ ನಿಗದಿ ಮಾಡಿದ್ದು, ಈ ಹಣ ವಿವಿಧ ಚಟುವಟಿಕೆಗಳಿಗೆ ವಿನಿಯೋಗವಾಗುತ್ತಿದೆ. ಮಹಿಳಾ ಸ್ವಸಹಾಯ ಸಂಘಗಳ ರಚನಾತ್ಮಕ ಚಟುವಟಿಕೆಗೆ ಕರ್ನಾಟಕ ಇಡೀ ದೇಶಕ್ಕೆ ಮಾದರಿ. ಸಹಕಾರಿ ತತ್ವದಡಿ ಇವರೆಲ್ಲರೂ ಸಂಘಟಿತರಾಗಿ ತಮ್ಮ ಕಾರ್ಯ ವ್ಯಾಪ್ತಿ ಹಿಗ್ಗಿಸಿಕೊಳ್ಳುತ್ತಿದ್ದಾರೆ. ಸ್ವ-ಸಹಾಯ ಸಂಘಗಳನ್ನು ಸಣ್ಣ ಉದ್ಯಮಗಳನ್ನಾಗಿ ಮಾಡಲು ಸರ್ಕಾರ "ಅಮೃತ" ಎಂಬ ಮಹತ್ವದ ಯೋಜನೆಯನ್ನು ಬಜೆಟ್‌ನಲ್ಲಿ ಘೋಷಿಸಿದೆ. ಆಯ್ದ ಸ್ವ-ಸಹಾಯ ಸಂಘಗಳಿಗೆ ತಲಾ 1.5 ಲಕ್ಷ ನೆರವು ಒದಗಿಸುತ್ತಿದೆ. ಇದಕ್ಕಾಗಿ 500 ಕೋಟಿರೂ ಮೀಸಲಿರಿಸಿದ್ದು, ಪರಿಶಿಷ್ಟ ಜಾತಿ, ಪಂಗಡವರಿಗೆ 50 ಕೋಟಿರೂ ನಿಗದಿಯಾಗಿದೆ. ಸುಮಾರು 3.9 ಲಕ್ಷ ಮಹಿಳೆಯರಿಗೆ ಅನುಕೂಲ ಕಲ್ಪಿಸಿಕೊಡುವ ಮಹತ್ವದ ಗುರಿ ಹಾಕಿಕೊಳ್ಳಲಾಗಿದೆ. ಅಮೃತ ಕೌಶಲ್ಯ ಕಾರ್ಯಕ್ರಮದಡಿ ಈವರೆಗೆ 53,840 ಅಭ್ಯರ್ಥಿಗಳು ವಿವಿಧ ತರಬೇತಿಗಳನ್ನು ಪಡೆದಿದ್ದು, 10,345 ಮಂದಿ ಉದ್ಯೋಗಗಳಿಸಿ ಸ್ವಾವಲಂಬಿ ಬದುಕು ಕಟ್ಟಿಕೊಂಡಿದ್ದಾರೆ.



### ಸರ್ಕಾರಿ ಶಾಲೆಗಳ ಅಭಿವೃದ್ಧಿ

ಸ್ವಾತಂತ್ರ್ಯದ ಅಮೃತ ಮಹೋತ್ಸವದ ಆಚರಣೆಯ ನೆನಪಿಗಾಗಿ ಅಮೃತ ಶಾಲಾ ಸೌಲಭ್ಯ ಯೋಜನೆಯಡಿ 75 ಕೋಟಿ ರೂ ವೆಚ್ಚದಲ್ಲಿ ರಾಜ್ಯದಾದ್ಯಂತ 750 ಸರ್ಕಾರಿ ಶಾಲೆಗಳಿಗೆ ಸಮಗ್ರ ಸೌಲಭ್ಯ ಒದಗಿಸುವ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗಿದ್ದು, ರಾಜ್ಯದ ಎಂಟು ಜ್ಞಾನಪೀಠ ಪುರಸ್ಕೃತರು ಅಭ್ಯಸಿಸಿದ್ದ ಶಾಲೆಗಳನ್ನು ಅಭಿವೃದ್ಧಿ ಮಾಡಲು 16.88 ಕೋಟಿ ಅನುದಾನವನ್ನು ಒದಗಿಸಲಾಗಿದೆ.

ಇನ್ನು ಗ್ರಾಮೀಣ ದೀನ್ ದಯಾಳ್ ಅಂತ್ಯೋದಯ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನದಡಿ 5063 ಸ್ವ-ಸಹಾಯ ಗುಂಪುಗಳನ್ನು ರಚಿಸಲಾಗಿದ್ದು, 9280 ಗುಂಪುಗಳಿಗೆ ತರಬೇತಿ ನೀಡಲಾಗಿದೆ. 350 ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟಗಳನ್ನು ರಚಿಸಿ ತರಬೇತಿ ನೀಡಿರುವುದು ಮಹತ್ವದ ಸಾಧನೆಯಾಗಿದೆ. ಗ್ರಾಮೀಣ ಜೀವನೋಪಾಯ ಅಭಿಯಾನಕ್ಕೆ ಇದೀಗ ಒಂದು ದಶಕ ತುಂಬಿದೆ. ಈ ಬಾರಿಯ ಬಜೆಟ್‌ನಲ್ಲಿ 1,100 ಕೋಟಿರೂ ಮೊತ್ತದ ಕ್ರಿಯಾಯೋಜನೆ ಜಾರಿಗೊಳಿಸಲಾಗುತ್ತಿದೆ. ಈ ಅಭಿಯಾನದ ಮೂಲಕ ಗ್ರಾಮೀಣ ಪ್ರದೇಶದಲ್ಲಿ ಕೃಷಿ ಮತ್ತು ಕೃಷಿಯೇತರ ಎಂಬ ಎರಡು ವಿಭಾಗಗಳಲ್ಲಿ ಮಹಿಳಾ ಸ್ವ-ಸಹಾಯ ಗುಂಪುಗಳಿಗೆ ತರಬೇತಿ ನೀಡಲಾಗುತ್ತಿದೆ. ಕೃಷಿಯಲ್ಲಿ ವಿಶೇಷವಾಗಿ ಮಹಿಳೆಯರದ್ದು ಸಿಂಹಪಾಲಿದೆ. ಇದೇ ಕಾರಣದಿಂದ ಅಕ್ಟೋಬರ್ 15 ರಂದು ರೈತ ಮಹಿಳಾ ದಿನ ಆಚರಿಸಲಾಗುತ್ತಿದೆ. ಕೃಷಿ ಚಟುವಟಿಕೆಯಲ್ಲಿ ಬದುಕು ಕಟ್ಟಿಕೊಳ್ಳಲು ಮಹಿಳಾ ಸ್ವ-ಸಹಾಯ ಗುಂಪುಗಳಿಗೆ ಹೆಚ್ಚಿನ ಸಾಲ ಸೌಲಭ್ಯ, ತರಬೇತಿ ನೀಡಲಾಗುತ್ತಿದೆ.

ಜಗತ್ತು ಇಂದು ಸಾಕಷ್ಟು ಬದಲಾಗಿದೆ, ಬದಲಾಗುತ್ತಲೂ ಇದೆ. ನಮ್ಮ ಗ್ರಾಮೀಣ ಮಹಿಳೆಯರೀಗ ಅಸಾಮಾನ್ಯರು. ಪ್ರತಿಯೊಂದು ಜಿಲ್ಲೆ, ತಾಲ್ಲೂಕುಗಳಲ್ಲಿ ನೂರಾರು, ಸ್ತ್ರೀ ಸ್ವಸಹಾಯ ಗುಂಪುಗಳು ಕೃಷಿಯೇತರ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿವೆ. ಸ್ವಚ್ಛ, ಹದವಾಗಿ ಸಿದ್ಧಪಡಿಸಿದ ಆಹಾರ ಉತ್ಪನ್ನಗಳು,





Downloaded From:www.kpscvaani.com

## ಕೋವಿಡ್-19 ಲಸಿಕೆ

ರಾಜ್ಯದಲ್ಲಿ ಜನವರಿ 16, 2021 ರಿಂದ ಜುಲೈ 15, 2022 ರವರೆಗೆ ಒಟ್ಟು 11.35 ಕೋಟಿ ಲಸಿಕಾ ಡೋಸ್ ನೀಡಲಾಗಿದ್ದು, ಅದರಲ್ಲಿ ಮೊದಲ ಡೋಸ್ ಅನ್ನು 5.49 ಕೋಟಿ ಫಲಾನುಭವಿಗಳಿಗೆ ಮತ್ತು 5.43 ಕೋಟಿ ಫಲಾನುಭವಿಗಳಿಗೆ ಎರಡೂ ಡೋಸ್‌ಗಳನ್ನು ಮತ್ತು 42,39,344 ಫಲಾನುಭವಿಗಳಿಗೆ ಮುನ್ನೆಚ್ಚರಿಕೆ ಡೋಸ್ ಲಸಿಕೆ ನೀಡಲಾಗಿದೆ.



ದೇಹಾರೋಗ್ಯ ಹೆಚ್ಚಿಸುವ ಸಿರಿಧಾನ್ಯ ತಿನಿಸುಗಳು, ಮಹಿಳೆಯರ ಶೃಂಗಾರ ಸಾಮಗ್ರಿಗಳು, ಅಂದ ಹೆಚ್ಚಿಸುವ ಅಲಂಕಾರಿಕ ವಸ್ತುಗಳು, ಉಡುಪುಗಳು, ಕರಕುಲಶ ವಸ್ತುಗಳನ್ನು ಮಹಿಳೆಯರು ತಯಾರಿಸುತ್ತಿದ್ದಾರೆ. ಅವರು ತಯಾರಿಸುವ ಉತ್ಪನ್ನಗಳಿಗೆ ಜಾಗತಿಕ ಮಾರಾಟಕ್ಕೆ ವೇದಿಕೆ ಒದಗಿಸುವ ಪ್ರಯತ್ನಗಳು ಪ್ರಗತಿಯಲ್ಲಿವೆ. ಆನ್ ಲೈನ್ ಮಾರುಕಟ್ಟೆ ಜತೆಗೆ ವಿವಿಧ ಉತ್ಸವಗಳು, ಜಾತ್ರೆ, ವಸ್ತುಪ್ರದರ್ಶನ, ಸರಸ್ ಮೇಳ ಮತ್ತಿತರ ಪ್ರದೇಶಗಳಲ್ಲಿ ಮಹಿಳೆಯರು ತಮ್ಮ ಉತ್ಪನ್ನಗಳನ್ನು ಮಾರುವ ನೈಪುಣ್ಯತೆ ಮೈಗೂಡಿಸಿಕೊಂಡಿದ್ದಾರೆ. ಅಷ್ಟೇ ಏಕೆ ಈ ಮಹಿಳೆಯರು ವಿಧಾನಸೌಧದಲ್ಲೂ ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಿ ಸೈ ಎನಿಸಿಕೊಂಡಿದ್ದು, ಒಟ್ಟಿನಲ್ಲಿ ಮಹಿಳೆಯರು ಅಸಾಮಾನ್ಯರಾಗಿ ರೂಪುಗೊಳ್ಳಲು ಸರ್ಕಾರವು ಸಹಕರಿಸುತ್ತಿದೆ.

"ಸಂಜೀವಿನಿ" ಹೆಸರಿನಲ್ಲಿ ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ – ಕೆ.ಎಸ್.ಆರ್.ಎಲ್.ಪಿ.ಎಸ್ ಮೂಲಕ ಮಹಿಳಾ ಸ್ವ-ಸಹಾಯ ಗುಂಪುಗಳಿಗೆ ಹಣಕಾಸು ಒಳಗೊಳ್ಳುವಿಕೆ ಮತ್ತು ಬೆಂಬಲ ಒದಗಿಸಲು ಸಾಮಾಜಿಕ ಕ್ರೋಢೀಕರಣ ಮತ್ತು ಸಾಮಾಜಿಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಗಿದೆ. ಸಾಲ ಸೌಲಭ್ಯ ಪಡೆಯಲು ಹಣಕಾಸು, ಸಾಕ್ಷರತೆ ನೀಡಲಾಗುತ್ತಿದೆ. ಮಹಿಳಾ ಗುಂಪುಗಳಿಗೆ ಸುತ್ತುನಿಧಿ ಮತ್ತು ಸಮುದಾಯ ಬಂಡವಾಳ ನಿಧಿಗಳನ್ನು ಒದಗಿಸಲಾಗುತ್ತಿದೆ. ಮಹಿಳೆಯರು ಇದೀಗ ಲೆಕ್ಕಪತ್ರಗಳ ಬಗ್ಗೆ ಚರ್ಚಿಸುತ್ತಾರೆ. ಇವರ ಗ್ರಾಮೀಣ ಆರ್ಥಿಕ ಚಿಂತನೆಗಳು, ಕಷ್ಟಕ್ಕೆ ಸ್ಪಂದಿಸುವ ಗುಣಗಳು ನಿಜಕ್ಕೂ ಮಾದರಿಯಾಗಿವೆ. ಸ್ವ-ಸಹಾಯ ಗುಂಪುಗಳಿಗೆ ಸಾಲ ಸೌಲಭ್ಯ ನೀಡಲೆಂದೇ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಈ ಬಾರಿ ತಮ್ಮ ಬಜೆಟ್‌ನಲ್ಲಿ ಸಾರ್ವಜನಿಕ ವಲಯದ ಬ್ಯಾಂಕ್ ಒಂದನ್ನು "ಆಂಕರ್ ಬ್ಯಾಂಕ್" ಎಂದು ಗುರುತಿಸಿ ಸಾಲ ವಿತರಣೆಗೆ ಕ್ರಮ ಕೈಗೊಳ್ಳುವುದಾಗಿ ಭರವಸೆ ಕೊಟ್ಟಿದ್ದಾರೆ.

### ವಿದ್ಯಾರ್ಥಿಗಳಿಗೆ ಉಚಿತ ಟ್ಯಾಬ್ಲೆಟ್

ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಇಲಾಖೆ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗಳ ಸಹಭಾಗಿತ್ವದಲ್ಲಿ 161 ಕೋಟಿ ವೆಚ್ಚದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು, ಸರ್ಕಾರಿ ಪಾಲಿಟೆಕ್ನಿಕ್‌ಗಳು ಹಾಗೂ ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳ ಸುಮಾರು 1.6 ಲಕ್ಷ ವಿದ್ಯಾರ್ಥಿಗಳಿಗೆ ಟ್ಯಾಬ್ಲೆಟ್ ಪಿಸಿಗಳನ್ನು 2020-21 ನೇ ಸಾಲಿನಲ್ಲಿ ವಿತರಿಸಲಾಗಿದೆ.

ವೈದ್ಯಕೀಯ, ಇಂಜಿನಿಯರಿಂಗ್ ಮುಂತಾದ ಕೋರ್ಸ್‌ಗಳನ್ನು ಸೇರಲು ಸಾಧ್ಯವಾಗದ ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟುಕೊಂಡು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸರ್ಕಾರ ರಾಜ್ಯದ 150 ಸರ್ಕಾರಿ ಐಟಿಐಗಳನ್ನು ಅಂತಾರಾಷ್ಟ್ರೀಯ ಮಟ್ಟಕ್ಕೆ ಮೇಲ್ದರ್ಜೆಗೇರಿಸಿದೆ. ವೃತ್ತಿಪೇತಿ ವಲಯದಲ್ಲಿ ಇದೊಂದು ಮಹತ್ವದ, ಕ್ರಾಂತಿಕಾರಕ ಹೆಜ್ಜೆ. ಯುವ ಸಮೂಹಕ್ಕೆ ಉದ್ಯೋಗ, ಕೈಗಾರಿಕಾ ವಲಯಕ್ಕೆ ಅಗತ್ಯವಾಗಿರುವ ನುರಿತ ಮಾನವ ಸಂಪನ್ಮೂಲ ಒದಗಿಸಲು ಸರ್ಕಾರಿ ಐಟಿಐಗಳು ಸಜ್ಜಾಗಿವೆ. ಇದೇ ಮೊದಲ ಬಾರಿಗೆ ಟಾಟಾ ಕನ್ಸಲ್ಟೆನ್ಸಿ ಸಹಯೋಗದೊಂದಿಗೆ ಪ್ರತಿಯೊಂದು ಸರ್ಕಾರಿ ಐಟಿಐಗಳನ್ನು ಸರಾಸರಿ 30 ಕೋಟಿರೂ ವೆಚ್ಚದಲ್ಲಿ





Downloaded From:www.kpscvaani.com

ಉನ್ನತೀಕರಣಗೊಳಿಸಲಾಗಿದೆ. ಆಧುನಿಕ ಕೋರ್ಸ್‌ಗಳು, ಅತ್ಯಾಧುನಿಕ ತಂತ್ರಜ್ಞಾನ, ನುರಿತ ತರಬೇತುದಾರರು ಈ ಐಟಿಐಗಳ ಮೆರಗು ಹೆಚ್ಚಿಸಿದ್ದಾರೆ. ಕಲ್ಯಾಣ ಕರ್ನಾಟಕ, ಮುಂಬೈ ಕರ್ನಾಟಕ ಸೇರಿ ರಾಜ್ಯದ ಎಲ್ಲಾ ಭಾಗಗಳು, ಎಲ್ಲಾ ಜಿಲ್ಲೆಗಳಲ್ಲೂ ಮೇಲ್ದರ್ಜೆಗೇರಿದ ಐಟಿಐಗಳು ಜೀವಕಳೆ ತುಂಬಿಕೊಂಡು ವೃತ್ತಿತರಬೇತಿ ವಲಯದಲ್ಲಿ ಹೊಸ ಭಾಷ್ಯ ಬರೆಯುತ್ತಿವೆ. ಮುಂದಿನ (4.0) ತಲೆಮಾರಿನ ಕೈಗಾರಿಕೆಗಳ ತಂತ್ರಜ್ಞಾನಕ್ಕೆ ಅನುಗುಣವಾಗಿ ಹೊಸ ಅಲ್ಪಾವಧಿ, ದೀರ್ಘಾವಧಿ ಕೋರ್ಸ್‌ಗಳಲ್ಲಿ ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ. ಜೂನ್ 20 ರಂದು ಪ್ರಧಾನಿ ನರೇಂದ್ರ ಮೋದಿ ಅವರು ಮೇಲ್ದರ್ಜೇಗೇರಿದ 150 ಸರ್ಕಾರಿ ಐಟಿಐಗಳನ್ನು ಲೋಕಾರ್ಪಣೆ ಮಾಡಿದ್ದು ಸಹ ವಿಶೇಷವೇ ಸರಿ. ಬೇರೆ ಯಾವುದೇ ರಾಜ್ಯದಲ್ಲೂ ಇಂತಹ ದೊಡ್ಡ ಪ್ರಮಾಣದಲ್ಲಿ ಐಟಿಐಗಳ ಪುನಶ್ಚೇತನ ಕಾರ್ಯಕ್ರಮ ಹಮ್ಮಿಕೊಂಡಿಲ್ಲ. ಬೇರೆ ರಾಜ್ಯಗಳು ಈ ಬೆಳವಣಿಗೆಯನ್ನು ಬೆರಗುಗಣ್ಣಿಂದ ನೋಡುತ್ತಿವೆ.

ಕೌಶಲ್ಯ ವಲಯದಲ್ಲಿ ಇಡೀ ದೇಶದಲ್ಲಿ ಕರ್ನಾಟಕ ಮುಂಚೂಣಿಯಲ್ಲಿದೆ. ಇಲ್ಲಿ ಗಟ್ಟಿಯಾದ ಶಿಕ್ಷಣ ವ್ಯವಸ್ಥೆಯಿದೆ. ಸ್ಪಷ್ಟವಾದ ನೆಲೆಯಿದೆ. ಪ್ರವರ್ಧಮಾನಕ್ಕೆ ಬರುತ್ತಿರುವ ತಂತ್ರಜ್ಞಾವನ್ನು ಅಳವಡಿಸಿಕೊಳ್ಳುವ ಬದ್ಧತೆಯನ್ನು ಸರ್ಕಾರ ಹೊಂದಿದೆ. ಉದ್ಯೋಗ ಕಳೆದುಕೊಂಡಿರುವವರನ್ನು ಸಂಪರ್ಕಿಸಲು ಕೌಶಲ್ಯ ಸಂಪರ್ಕ ಅಂದರೆ ಸ್ಕಿಲ್ ಕನೆಕ್ಟ್ ಪೋರ್ಟಲ್ ಆರಂಭಿಸಿದೆ. ಇದು ಕೂಡ ರಾಜ್ಯ ಸರ್ಕಾರದ ಅತ್ಯಂತ ಮಹತ್ವದ ಹೆಜ್ಜೆಯಾಗಿದೆ. ಸಾಮಾನ್ಯವಾಗಿ ವೈಟ್ ಕಾಲರ್ಸ್ ಜಾಬ್‌ಗಳು ಅಂದರೆ ಐಟಿ-ಬಿಟಿ, ಹೆಚ್ಚಿನ ಅಧ್ಯಯನ ಮಾಡಿರುವರಿಗಷ್ಟೇ ವಿದೇಶಗಳಲ್ಲಿ ಉದ್ಯೋಗಾವಕಾಶಗಳಿವೆ ಎನ್ನುವ ತಪ್ಪು ಕಲ್ಪನೆಗಳಿವೆ. ಬ್ಲ್ಯೂ ಕಾಲರ್ಸ್ ಜಾಬ್ ಅಂದರೆ ಮನೆಗೆಲಸದವರು, ಚಾಲಕರು, ಕಟ್ಟಡ, ರಸ್ತೆ ನಿರ್ಮಾಣ ಕಾರ್ಮಿಕರು, ಕೇರ್‌ಟೇಕರ್ಸ್. ದಾದಿಯರು, ಎಲೆಕ್ಟ್ರೀಷಿಯನ್ಸ್, ಪ್ಲಂಬರ್ಸ್‌ಗಳಿಗೂ ಹೆಚ್ಚಿನ ಬೇಡಿಕೆಯಿದೆ. ಇವರಿಗೆ ವಿದೇಶಕ್ಕೆ ತೆರಳಲು ಎಲ್ಲಾ ರೀತಿಯಿಂದಲೂ ಈ ಕೇಂದ್ರ ನೆರವಾಗುತ್ತಿದೆ. ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ "ಅಂತಾರಾಷ್ಟ್ರೀಯ ವಲಸೆ ಕೇಂದ್ರ ಕರ್ನಾಟಕ" ಎಂಬ ವೇದಿಕೆಯನ್ನು ಸ್ಥಾಪಿಸಿದ್ದು, ಇದರ ಮೂಲಕ ಸಮಗ್ರ



**ಜಾಗತಿಕ ಗಮನ ಸೆಳೆದ ವಿಶ್ವಯೋಗ ದಿನ**

"ಯೋಗ" ಎಂಬ ಹೆಸರಿನಲ್ಲೇ ಮಾಂತ್ರಿಕ ಶಕ್ತಿಯಿದೆ. ಯೋಗ ಎಂದರೆ ಕೇವಲ ಆಸನ ಹಾಕುವುದಷ್ಟೇ ಅಲ್ಲ, ಯೋಗದ ವೈಭವ ವರ್ಣಿಸಲು ಸಾಧ್ಯವಿಲ್ಲ. ಯೋಗದ ಪ್ರಕಾರಗಳು, ಆಯಾಮಗಳು, ಮಹತ್ವ, ಲಾಭಗಳು ಹಲವು. ಮನಸ್ಸು ಮತ್ತು ದೇಹವನ್ನು ಒಂದು ಮಾಡುವ ಸಾಧನ ಯೋಗ. ಯೋಗದ ಮಹತ್ವವನ್ನು ಜಾಗತಿಕ ಮಟ್ಟಕ್ಕೆ ಕೊಂಡೊಯ್ಯುವಲ್ಲಿ ನಿರ್ಣಾಯಕ ಪಾತ್ರ ವಹಿಸಿದವರು ಪ್ರಧಾನಿ ನರೇಂದ್ರ ಮೋದಿ. ಅವರ ಪ್ರಯತ್ನದ ಫಲವಾಗಿಯೇ ಅಂತಾರಾಷ್ಟ್ರೀಯ ಯೋಗ ದಿನ ಆಚರಿಸಲಾಗುತ್ತಿದೆ. ಸ್ವತಃ ಯೋಗದ ಬಗ್ಗೆ ಅತೀವ ಕಾಳಜಿ ಹೊಂದಿರುವ, ದಿನನಿತ್ಯ ಯೋಗಾಭ್ಯಾಸ ಮಾಡುವುದನ್ನು ಮೈಗೂಡಿಸಿಕೊಂಡಿರುವ, ತಾವೇ ಹಾಕಿರುವ ವಿವಿಧ ಆಸನಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಅಪ್ ಲೋಡ್ ಮಾಡಿ ಯುವ ಸಮೂಹದಲ್ಲಿ ಯೋಗದ ಐಕಾನ್ ಆಗಿಯೂ ನರೇಂದ್ರ ಮೋದಿ ಹೊರ ಹೊಮ್ಮಿದ್ದಾರೆ. ತನ್ಮೂಲಕ ಯೋಗದ ನೈಜ ರಾಯಭಾರಿಯಾಗಿ ಜನಮಾನಸದಲ್ಲಿ ಗುರುತಿಸಿಕೊಂಡಿದ್ದಾರೆ. ರಾಜ್ಯದ ಮಟ್ಟಿಗೆ, ಅದರಲ್ಲೂ ವಿಶೇಷವಾಗಿ ಮೈಸೂರಿನಲ್ಲಿ ಈ ವರ್ಷದ ಯೋಗ ದಿನಾಚರಣೆ ನಡೆದದ್ದು ಎಲ್ಲರ ಸಂಭ್ರಮಕ್ಕೆ ಕಾರಣವಾಗಿತ್ತು.

ಪ್ರಧಾನಿ ನರೇಂದ್ರ ಮೋದಿ ಅವರು ಮೈಸೂರಿನ ಅರಮನೆ ಆವರಣದಲ್ಲಿ ಯೋಗಾಸನ ಮಾಡಿದ್ದು ಜಾಗತಿಕ ಗಮನ ಸೆಳೆಯಿತು. ಎಲ್ಲಿಯೂ ಲೋಪವಾಗದಂತೆ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿದ ಶ್ರೇಯಸ್ಸು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಸಲ್ಲುತ್ತದೆ. ಇದು ಮುಖ್ಯಮಂತ್ರಿ ಅವರ ಜೀವಮಾನದ ಅವಿಸ್ಮರಣೀಯ ಕ್ಷಣ ಮತ್ತು ಸಾಧನೆಯೂ ಆಗಿದೆ. ಮೈಸೂರು ಯೋಗ ರಾಜಧಾನಿ ಎಂಬ ಕಿರೀಟಕ್ಕೆ ಮೆರಗು ತಂದಂತೆ ಕಾರ್ಯಕ್ರಮ ಆಯೋಜಿಸಿದ್ದು ಮೆಚ್ಚುಗೆಗೆ ಕಾರಣವಾಗಿದೆ. ಯೋಗಕ್ಕೆ ಮೈಸೂರು ಬಹುದೊಡ್ಡ ಪರಂಪರೆ ಹೊಂದಿದೆ. ವಿಶ್ವಯೋಗ ದಿನದ ಮೂಲಕ ಇದೇ ಮೈಸೂರಿನಲ್ಲಿ ಮತ್ತೊಂದು ಹೊಸ ಅಧ್ಯಾಯದ ಪುಟ ತೆರೆಯಲಾಗಿದೆ.



Downloaded From:www.kpscvaani.com



ತರಬೇತಿ ನೀಡಿ ನೂರಾರು ಜನರನ್ನು ವಿದೇಶಕ್ಕೆ ಕಳುಹಿಸಿದೆ.

ಸದೃಢವಾದ ದೇಹ ಇದ್ದರೆ ಸದೃಢವಾದ ಧ್ಯೇಯ ಬೆಳೆಯುತ್ತದೆ ಎಂಬ ಮಾತಿದೆ. ಇದಕ್ಕೆ ಅನುಗುಣವಾಗಿ ಆರೋಗ್ಯವಂತ ಕರ್ನಾಟಕ ಮಾಡಲು ಸರ್ಕಾರ ಕಟಿಬದ್ಧವಾಗಿದೆ. ಆರೋಗ್ಯ ಮೂಲ ಸೌಕರ್ಯ ಹೆಚ್ಚಳಕ್ಕೆ ವಿಶೇಷ ಮುತುವರ್ಜಿ ವಹಿಸಿದೆ. ಅಪೌಷ್ಠಿಕತೆ ನಿವಾರಣೆಗಾಗಿ 14 ಜಿಲ್ಲೆಗಳಲ್ಲಿ ಕಬ್ಬಿಣ, ಫೋಲಿಕ್ ಆಮ್ಲ, ವಿಟಮಿನ್ ಬಿ–12, ಸಾರವರ್ಧಿತ ಅಕ್ಕಿ ವಿತರಿಸಲು 93 ಕೋಟಿ ರೂಪಾಯಿ ವೆಚ್ಚ ಮಾಡಲಾಗುತ್ತಿದೆ.

ಸರ್ಕಾರ ಹೇಗೆ ಕಾರ್ಯನಿರ್ವಹಿಸುತ್ತಿದೆ ಎಂಬುದನ್ನು ಅರಿಯಲು ತಾಯಿ ಮತ್ತು ಮಗುವಿನ ಮರಣ ಪ್ರಮಾಣವನ್ನು ಮಾನದಂಡವನ್ನಾಗಿ ಪರಿಗಣಿಸಲಾಗಿದೆ. ರಾಜ್ಯದಲ್ಲಿ ತಾಯಿ, ಶಿಶು ಮರಣ ತಗ್ಗಿಸಲು ಸರ್ಕಾರ ಕಾರ್ಯೋನ್ಮುಖವಾಗಿದೆ. 438 ಪ್ರಮುಖ ನಗರಗಳಲ್ಲಿ "ನಮ್ಮ ಕ್ಲಿನಿಕ್"ಗಳು, ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ 300 ಮಹಿಳಾ ಸ್ವಾಸ್ಥ್ಯ ಕೇಂದ್ರಗಳನ್ನು ತೆರೆಯುವ, 75 ತಾಲ್ಲೂಕು ಆಸ್ಪತ್ರೆಗಳಲ್ಲಿ ಜಯದೇವ ಹೃದ್ರೋಗ ಸಂಸ್ಥೆಯ ಸಹಯೋಗದಲ್ಲಿ ತಾಲ್ಲೂಕು ಹಂತದಲ್ಲಿಯೇ ಹೃದಯ ಸಂಬಂಧಿ ಚಿಕಿತ್ಸೆ ಒದಗಿಸುವ, ಋತುಚಕ್ರ ನೈರ್ಮಲ್ಯ ಕಾಪಾಡಲು 19 ಲಕ್ಷ ವಿದ್ಯಾರ್ಥಿನಿಯರಿಗೆ ಸ್ಯಾನಿಟರಿ ನ್ಯಾಪ್‌ಕಿನ್ ವಿತರಿಸಲಾಗುತ್ತಿದೆ. ಇದೀಗ ಮಧ್ಯಪ್ರದೇಶ ಮಾದರಿಯಲ್ಲಿ ದಕ್ಷಿಣಕನ್ನಡ, ಚಾಮರಾಜನಗರದಲ್ಲಿ ಪರಿಸರ ಸ್ನೇಹಿ "ಮುಟ್ಟಿನಕಪ್" ಗಳನ್ನು ನೀಡಲು ಸರ್ಕಾರ ಮುಂದಾಗಿದೆ. ಇದು ಬಳಸಿ ಬಿಸಾಡುವ ವಸ್ತುವಲ್ಲ. ಮಹಿಳೆಯರ ಆರೋಗ್ಯ ಮತ್ತು ಸುರಕ್ಷತೆಗಾಗಿ ಇದನ್ನು ಪುನರ್ ಬಳಕೆ ಮಾಡಬಹುದು. ಇದರಿಂದ ತ್ಯಾಜ್ಯ ಸಮಸ್ಯೆ ನಿವಾರಣೆ ಜೊತೆಗೆ ಸ್ವಚ್ಛ ಭಾರತ ಅಭಿಯಾನಕ್ಕೂ ಕೊಡುಗೆ ಕೊಟ್ಟಂತಾಗುತ್ತದೆ. ಇನ್ನು ಕೋವಿಡ್ ಮೂರನೇ ಅಲೆ ತಡೆಗೆ ಕೈಗೊಂಡ ಮುನ್ನೆಚ್ಚರಿಕೆ ಕ್ರಮಗಳು ಗಮನ ಸೆಳೆಯುತ್ತವೆ. ಸ್ವಸ್ಥ ಮತ್ತು ಶುಶಿಕ್ಷಿತ ಸಮಾಜ ನಿರ್ಮಾಣಕ್ಕಾಗಿ ಹಾಗೂ ಮಕ್ಕಳ ಉದ್ದೇಶಿತ ಯೋಜನೆಗಳಿಗೆ 43,944 ಕೋಟಿರೂ ನಿಗದಿ ಮಾಡಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಅತಿ ಹಿಂದುಳಿದ ತಿಗಳ, ಮಾಳಿ, ಮಾಲಗಾರ, ಕುಂಬಾರ, ಯಾದವ, ದೇವಾಡಿಗ, ಸಿಂಪಿ, ಕ್ಷತ್ರೀಯ, ಮೇದಾರ, ಕುಂಚಿ, ಕುರ್ಮ, ಪಿಂಜಾರ/ನದಾಫ್, ಕುರುಬ, ಬಲಿಜ, ಈಡಿಗ, ಹಡಪದ ಹಾಗೂ ಇತರೆ ಜನಾಂಗದ ಅಭಿವೃದ್ಧಿಗೆ 400 ಕೋಟಿ ರೂಪಾಯಿ ಪ್ರಕಟಿಸಿದ್ದು, ವಿವಿಧ ನಿಗಮಗಳು ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸುತ್ತಿವೆ.

ಶೈಕ್ಷಣಿಕ ಬೆಳವಣಿಗೆ ಸರ್ಕಾರದ ಆದ್ಯತಾ ಕ್ಷೇತ್ರಗಳಲ್ಲೊಂದು. ಡಾ.ಬಿ.ಆರ್.ಅಂಬೇಡ್ಕರ್ ವಿದ್ಯಾರ್ಥಿ ನಿಯಲಗಳು, 10 ಕ್ರೈಸ್ಟ್ ವಸತಿ ಶಾಲಾ ಕಟ್ಟಡಗಳನ್ನು 750 ಕೋಟಿರೂ ವೆಚ್ಚದಲ್ಲಿ ಲೋಕೋಪಯೋಗಿ ಇಲಾಖೆ ಮೂಲಕ ನಿರ್ಮಿಸುವ, ಸರ್ಕಾರಿ ಶಾಲೆಗಳಲ್ಲಿ ಮೂಲ ಸೌಕರ್ಯ ವೃದ್ಧಿಗೆ 500 ಕೋಟಿರೂ ಒದಗಿಸುವ, ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗಾಗಿ 3 ರಿಂದ 6 ವರ್ಷದ ಮಕ್ಕಳಿಗೆ ಪೂರ್ವ ಪ್ರಾಥಮಿಕ ಶಿಕ್ಷಣಕ್ಕಾಗಿ ಪಠ್ಯಕ್ರಮ ಸಿದ್ಧಪಡಿಸುವ ಕೆಲಸ ನಡೆಯುತ್ತಿದೆ. ಸ್ಪರ್ಧಾತ್ಮಕ ಪರೀಕ್ಷೆಗೆ ಆನ್ ಲೈನ್ ತರಬೇತಿ ನೀಡುವ "ಮುಖ್ಯಮಂತ್ರಿ ವಿದ್ಯಾರ್ಥಿ ಮಾರ್ಗದರ್ಶಿ" ಕಾರ್ಯಕ್ರಮ ಜಾರಿಗೊಳಿಸಲಾಗುತ್ತಿದೆ. ಮಧ್ಯಾಹ್ನದ ಉಪಹಾರ ಯೋಜನೆಯ ಮುಖ್ಯ ಅಡುಗೆಯವರು, ಅಡುಗೆ ಸಹಾಯಕರಿಗೆ ಜೂನ್ ನಿಂದ 10 ಸಾವಿರರೂ ಗೌರವ ಸಂಭಾವನೆ ಹೆಚ್ಚಿಸಲಾಗಿದೆ. 15 ಸಾವಿರ ಶಿಕ್ಷಕರನ್ನು ಏಕ ಕಾಲಕ್ಕೆ ನೇಮಿಸಲು ಸ್ಪರ್ಧಾತ್ಮಕ ಪರೀಕ್ಷೆ ನಡೆಸಿ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸಲು ಕ್ರಮ ವಹಿಸಲಾಗಿದೆ.

ಒಟ್ಟಿನಲ್ಲಿ ಸರ್ಕಾರವು ಎಲ್ಲಾ ವರ್ಗಗಳ ಜನರಿಗೂ ಆರೋಗ್ಯ, ಶಿಕ್ಷಣ ಹಾಗೂ ಪೌಷ್ಟಿಕತೆಯ ಅವಶ್ಯಕತೆಗಳನ್ನು ಒದಗಿಸುವ ಮೂಲಕ ಎಲ್ಲರೂ ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಾಗೂ ಆರ್ಥಿಕವಾಗಿ ಏಳಿಗೆಯಾಗುವಂತಹ ಕಾರ್ಯಕ್ರಮಗಳನ್ನು ರೂಪಿಸುತ್ತಿದೆ. ■

### ವೈದ್ಯಕೀಯ ಸೇವೆಗಳ ಹೆಚ್ಚಳ

**ಜನರಿಗೆ ಸುಸಜ್ಜಿತ ವೈದ್ಯಕೀಯ ಸೇವೆಗಳನ್ನು ಒದಗಿಸಲು ರಾಜ್ಯದ ಏಲು ತಾಲ್ಲೂಕು ಆಸ್ಪತ್ರೆಗಳನ್ನು 100 ಹಾಸಿಗೆಗಳ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಲಾಗುತ್ತಿದೆಯಲ್ಲದೆ ರಾಜ್ಯದ ಪ್ರಮುಖ 438 ನಗರಗಳಲ್ಲಿ ನಮ್ಮ ಕ್ಲಿನಿಕ್ ಸ್ಥಾಪಿಸಲಾಗುತ್ತಿದೆ. ಕ್ಯಾನ್ಸರ್ ರೋಗಿಗಳಿಗೆ ಕಿಮೋಥೆರಪಿ ಸೌಕರ್ಯವನ್ನು ಒದಗಿಸಲು ಆಯ್ದ 10 ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ Infusion Centre ಗಳನ್ನು ಸ್ಥಾಪಿಸಲು ತಾತ್ವಿಕ ಅನುಮೊದನೆ ನೀಡಲಾಗಿದೆ.**



Downloaded From:www.kpscvaani.com



# ರಾಜ್ಯದ ಸಮಗ್ರ ಪ್ರಗತಿಗೆ ಸರ್ಕಾರದ ಮುನ್ನುಡಿ

**“ ಉತ್ಸಾಹ ಸಾಹಸದ ಉತ್ತುಂಗ ವೀಚಿಗಳ
ಈ ಕ್ಷುಬ್ಧ ಸಾಗರವು ಬತ್ತಿ ಹೋಗುವ ಮುನ್ನ
ಕಟ್ಟುವೆವು ನಾವು ಹೊಸ ನಾಡೊಂದನು ”
ಕನ್ನಡದ ಹೆಮ್ಮೆಯ ಕವಿ ಡಾ. ಎಂ. ಗೋಪಾಲ ಕೃಷ್ಣ ಅಡಿಗರ ಕವಿತೆಯ ಸಾಲುಗಳು ಇವು.  ಹೊಸ ಸಮೃದ್ಧ ನಾಡನ್ನು ಕಟ್ಟುವ ನಿಟ್ಟಿನಲ್ಲಿ ಕವಿ ಅಡಿಗರ ಆಶಯವನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ದಿಟ್ಟ ಹೆಜ್ಜೆ ಇಟ್ಟಿದೆ. ನಿಜ ಅರ್ಥದಲ್ಲಿ ಇದು ಅಭಿವೃದ್ಧಿಯ ಕನಸಿನ ಮೂರ್ತ ಸ್ವರೂಪವೂ ಹೌದು.**

ಯಗಟಿ ಮೋಹನ್

ರಾಜ್ಯದ ಸಮಗ್ರ ಬೆಳವಣಿಗೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಕಳೆದ ಒಂದು ವರ್ಷದ ಅವಧಿಯಲ್ಲಿ ಸರ್ಕಾರ ರೂಪಿಸಿರುವ ಯೋಜನೆಗಳು ಅನೇಕ. ಅದೇ ರೀತಿ ಆ ಯೋಜನೆಗಳು ಸಾಕಾರಗೊಂಡು ಅದರ ಪ್ರಯೋಜನ ಪಡೆದವರು ಅಸಂಖ್ಯ ಮಂದಿ. ಸರ್ಕಾರ ಕಾರ್ಯ ರೂಪಕ್ಕೆ ತಂದ ಯೋಜನೆಗಳ ಯಶಸ್ಸು ಕಾಣುವುದು ಅವು ಗ್ರಾಮ ಮಟ್ಟದ ಫಲಾನುಭವಿಗಳನ್ನು ಮುಟ್ಟಿದಾಗಲೇ ಎಂಬುದಿಲ್ಲಿ ಗಮನಿಸಬೇಕಾದ ಸಂಗತಿ. ಅದೇ ರೀತಿ ಹಳ್ಳಿಗಳ ಅಭಿವೃದ್ಧಿಯ ಮೂಲಕ ಇಡೀ ರಾಜ್ಯದ ಪ್ರಗತಿಗೆ ರಾಜ್ಯ ಸರ್ಕಾರ ಮುನ್ನುಡಿ ಬರೆದಿದೆ ಎನ್ನುವುದರ ಜತೆಗೇ ಆರ್ಥಿಕ ಪ್ರಗತಿ ಸಾಧಿಸುವ ನಿಟ್ಟಿನಲ್ಲಿ ಮುನ್ನಡೆ ಸಾಧಿಸಿದೆ. ಅಭಿವೃದ್ಧಿ ದೃಷ್ಟಿಯಿಂದ ಇದೊಂದು ಕ್ರಾಂತಿಕಾರಿ ಹೆಜ್ಜೆ.

ಕೈಗಾರಿಕೆಗಳು ದೇಶದ ಆರ್ಥಿಕ ಬೆಳವಣಿಗೆಗೆ ಪೂರಕ. ಆ ಮೂಲಕ ನಿರುದ್ಯೋಗ ನಿವಾರಣೆಗೂ ದಾರಿಯಾದಂತೆ. ಕೈಗಾರಿಕೆಗಳು



Downloaded From:www.kpscvaani.com



ಆರಂಭವಾದರೆ ದುಡಿಯುವ ಕೈಗಳಿಗೆ ಕೆಲಸ ದೊರೆಯುತ್ತದೆ. ಆ ಮೂಲಕ ಆರ್ಥಿಕ ಪ್ರಗತಿ ಆಗುತ್ತದೆ. ಇದು ರಾಜ್ಯ ಸರ್ಕಾರದ ನೀತಿ. ದೃಢ ಸಂಕಲ್ಪವೂ ಹೌದು.

ಕೈಗಾರಿಕೆಗಳಷ್ಟೇ ಬೆಳೆದರೆ ಸಾಲದು, ಗ್ರಾಮೀಣ ಅಭಿವೃದ್ಧಿಯೂ ಆಗಬೇಕು ಹೀಗಾದಾಗ ಮಾತ್ರ ವಿವಿಧ ಕ್ಷೇತ್ರಗಳ ಪ್ರಗತಿ ಆದಂತೆ ಎಂಬುದು ರಾಜ್ಯ ಸರ್ಕಾರದ ನೀತಿ. ಇದೂ ಸೇರಿದಂತೆ ಕಳೆದೊಂದು ವರ್ಷದ ಅವಧಿಯಲ್ಲಿ ವಿದ್ಯುತ್, ನೀರಾವರಿ, ಇಂಧನ, ಗ್ರಾಮೀಣ ಅಭಿವೃದ್ಧಿ, ಜವಳಿ ಕ್ಷೇತ್ರ, ಮಾಹಿತಿ ತಂತ್ರಜ್ಞಾನ, ಕೈಗಾರಿಕಾ ಕ್ಷೇತ್ರಗಳ ಪ್ರಗತಿಗೆ ರಾಜ್ಯ ಸರ್ಕಾರ ವಿಶೇಷ ಗಮನ ನೀಡುವ ಮೂಲಕ ರಾಜ್ಯದ ಪ್ರಗತಿಗೆ ಮಹೋನ್ನತ ಕೊಡುಗೆ ನೀಡಿದೆ. ರಾಜ್ಯದ ಕರಾವಳಿ ಪ್ರದೇಶದ ಆರ್ಥಿಕ ಚಟುವಟಿಕೆಗಳಿಗೆ ನೆರವಾಗುವ ನಿಟ್ಟಿನಲ್ಲಿ ಕೈಗೊಂಡು ಬಂದರುಗಳ ಅಭಿವೃದ್ಧಿಯೂ ಈ ಆದ್ಯತಾ ಪಟ್ಟಿಗೆ ಮತ್ತೊಂದು ಸೇರ್ಪಡೆ.

**ಬಲಿಷ್ಠ ಆರ್ಥಿಕ ವ್ಯವಸ್ಥೆ ನಿರ್ಮಾಣದ ಗುರಿ:**

ಯಾವುದೇ ಒಂದು ರಾಜ್ಯ ಅಥವಾ ದೇಶದ ಪ್ರಗತಿಗೆ ಆರ್ಥಿಕ ಬೆಳವಣಿಗೆಯೂ ಅತಿ ಮುಖ್ಯ. ಆರ್ಥಿಕ ವ್ಯವಸ್ಥೆ ಬಲಿಷ್ಠವಾಗಿದ್ದರೆ ಮಾತ್ರ ಅಭಿವೃದ್ಧಿ ಯೋಜನೆಗಳ ಜಾರಿ ಸಾಧ್ಯ. ಸಂಪನ್ಮೂಲ ಸಂಗ್ರಹಣೆಯೇ ಜನ ತಂತ್ರ ವ್ಯವಸ್ಥೆಯಲ್ಲಿ ಸರ್ಕಾರಗಳಿಗೆ ದೊಡ್ಡ ಸವಾಲು. ಏಕೆಂದರೆ ಆಗಾಗ ಬಂದೆರಗುವ ಪ್ರಕೃತಿ ವಿಕೋಪ, ಮತ್ತಿತರ ನೈಸರ್ಗಿಕವಾದ ಸಮಸ್ಯೆಗಳು ಸಂಪನ್ಮೂಲ ಸಂಗ್ರಹಣೆಯ ಹಾದಿಯಲ್ಲಿ ದೊಡ್ಡ ಸವಾಲಾಗಿ ಎದುರಾಗುವುದು ಸಹಜವೇ.

ಆದರೆ ಇಂತಹ ಸವಾಲುಗಳನ್ನು ಮೆಟ್ಟಿ ನಿಂತು ಸಂಪನ್ಮೂಲ ಸಂಗ್ರಹಣೆಯಲ್ಲಿ ಯಶಸ್ವಿಯಾಗುವುದೆಂದರೆ ಅದು ಅಪ್ರತಿಮ ಸಾಧನೆಯೂ ಹೌದು. ಕಳೆದ ಒಂದು ವರ್ಷದ ಅವಧಿಯಲ್ಲಿ ಇಂತಹ ಹಲವು ಸವಾಲುಗಳನ್ನು ಸರ್ಕಾರ ಮೆಟ್ಟಿ ನಿಂತು ಸಂಪನ್ಮೂಲ ಸಂಗ್ರಹಣೆಯಲ್ಲಿ ಯಶಸ್ವಿಯಾಗಿದ್ದಲ್ಲದೇ ಜನ ಸಮುದಾಯದ ಕಲ್ಯಾಣಕ್ಕೆ ಅಗತ್ಯವಾದ ಯೋಜನೆಗಳನ್ನು ಜಾರಿಗೊಳಿಸುವಲ್ಲಿ ದೃಢವಾದ ಹೆಜ್ಜೆ ಇಟ್ಟು ಮುನ್ನಡೆದದ್ದು ಸಾಮಾನ್ಯ ಸಂಗತಿಯೇನಲ್ಲ. ಅದೊಂದು ಮಹತ್ವ ಪೂರ್ಣ ಸಾಧನೆ.

**ಕರ್ನಾಟಕ ಈಗ ಹೂಡಿಕೆದಾರರ ಸ್ನೇಹಿ**

ಇಂತಹ ಕ್ಲಿಷ್ಟಕರ ಸನ್ನಿವೇಶದಲ್ಲೇ ರಾಜ್ಯದ ಪ್ರಗತಿಗೆ ನೆರವಾಗುವ, ಆರ್ಥಿಕ ಬೆಳವಣಿಗೆಗೆ ಪೂರಕವಾಗುವ ನಿಟ್ಟಿನಲ್ಲಿ ಹಾಗೂ ಉದ್ಯೋಗ ಸೃಷ್ಟಿಯಲ್ಲಿ ಬಂಡವಾಳ ಹೂಡಿಕೆಗೆ ಅವಕಾಶವನ್ನು ಕಲ್ಪಿಸುವ ಮೂಲಕ ಹೂಡಿಕೆದಾರ ಸ್ನೇಹಿ ರಾಜ್ಯಗಳ ಪೈಕಿ ಮುಂಚೂಣಿಯಲ್ಲಿದೆ. ಕೈಗಾರಿಕಾ ಕ್ಷೇತ್ರದಲ್ಲಿ ಹಲವು ಹೂಡಿಕೆದಾರರು ಬಂಡವಾಳ ಹೂಡಲು ಮುಂದೆ ಬಂದಿದ್ದು, ಇದು ರಾಜ್ಯದ





Downloaded From:www.kpscvaani.com

ಆರ್ಥಿಕ ಪ್ರಗತಿಯ ವೇಗಕ್ಕೆ ಒತ್ತು ನೀಡಿದೆ. ಭವಿಷ್ಯದ ದಿನಗಳಲ್ಲಿ ರಾಜ್ಯದಲ್ಲಿ ಇದು ದುಡಿಯುವ ಸಹಸ್ರಾರು ಕೈಗಳಿಗೆ ಕೆಲಸ ನೀಡಿ ನಿರುದ್ಯೋಗ ಸಮಸ್ಯೆಯನ್ನು ನಿವಾರಣೆ ಮಾಡುವ ನಿಟ್ಟಿನಲ್ಲಿ ದೃಢವಾದ ಸಂಕಲ್ಪ ಎಂದೇ ಹೇಳಬಹುದು.

ಈ ಆರ್ಥಿಕ ವ್ಯವಸ್ಥೆ ಬೆಳವಣಿಗೆಯಾಗಲು ಪೂರಕವಾಗಿ ಮೂಲಭೂತ ಸೌಕರ್ಯ, ಸಾರಿಗೆ ಸಂಪರ್ಕ, ವಿದ್ಯುತ್ ಉತ್ಪಾದನೆ ಮತ್ತಿತರ ಕ್ಷೇತ್ರಗಳಿಗೂ ಸರ್ಕಾರ ಆದ್ಯತೆ ನೀಡಿದೆ.

**ಎಲ್ಲ ಹಳ್ಳಿಗಳ ಮನೆ ಮನೆಗೆ ಕುಡಿಯುವ ನೀರು :**

ರಾಜ್ಯದ ಪ್ರಗತಿಯ ಮೂಲ ಸತ್ವ ಅಡಗಿರುವುದು ಹಳ್ಳಿಗಳಲ್ಲಿ. ಹಳ್ಳಿಗಳು ಸಕಲ ಮೂಲಭೂತ ಸೌಲಭ್ಯಗಳೊಂದಿಗೆ ಪ್ರಗತಿಯಾದರೆ ಅದು ಇಡೀ ರಾಜ್ಯದ ಪ್ರಗತಿಯ ಓಟಕ್ಕೆ ಆಸರೆಯಾದಂತೆ ಎಂಬ ನಂಬಿಕೆಯನ್ನು ಸಾಕಾರಗೊಳಿಸಲು ಸರ್ಕಾರ ಪಣ ತೊಟ್ಟಿದೆ. ಇದರ ಒಂದು ಭಾಗವೇ ಗ್ರಾಮೀಣ ಪ್ರದೇಶಗಳ ಮನೆ ಮನೆಗಳಿಗೆ ಕುಡಿಯುವ ನೀರಿನ ಸೌಲಭ್ಯ ಒದಗಿಸುವ ಯೋಜನೆ. ಕೇಂದ್ರ ಸರ್ಕಾರ 2024 ಇಸವಿಯೊಳಗೆ ದೇಶದ ಎಲ್ಲಾ ಹಳ್ಳಿಗಳ ಮನೆಗಳಿಗೆ ನಲ್ಲಿ ಸಂಪರ್ಕದ ಮೂಲಕ ಕುಡಿಯುವ ನೀರಿನ ಸೌಲಭ್ಯ ಒದಗಿಸುವ ಭರವಸೆ ನೀಡಿದ್ದು, ಅದಕ್ಕಾಗಿ ಜಲ ಜೀವನ್ ಮಿಷನ್ ಯೋಜನೆ ಕೈಗೆತ್ತಿಕೊಂಡಿದೆ. ಇದು ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯೂ ಹೌದು.

**21.28 ಲಕ್ಷ ಮನೆಗಳಿಗೆ ನಲ್ಲಿಗಳ ಸಂಪರ್ಕ**

ಈ ಯೋಜನೆಯಡಿ ಇದುವರೆಗೆ 3,592 ಕೋಟಿ ರೂಗಳ ವೆಚ್ಚದಲ್ಲಿ 21 .28 ಲಕ್ಷ ಮನೆಗಳಿಗೆ ನಲ್ಲಿ ಸಂಪರ್ಕ ಒದಗಿಸಲಾಗಿದೆ. ಮುಂದಿನ ಎರಡು ವರ್ಷಗಳಲ್ಲಿ ತಲಾ 25 ಲಕ್ಷ ಮನೆಗಳಿಗೆ ಈ ಸೌಲಭ್ಯ ಕಲ್ಪಿಸುವುದು ಸಕಾರದ ಗುರಿಯಾಗಿದೆ. ಆ ನಿಟ್ಟಿನಲ್ಲಿ ಸಮರೋಪಾದಿಯಲ್ಲಿ ರಾಜ್ಯ ಸರ್ಕಾರ ಹೆಜ್ಜೆ ಇಟ್ಟು ಮುನ್ನಡೆದಿದೆ. ಇದಕ್ಕಾಗಿ ಈ ವರ್ಷ( 2022– 23)ಏಳು ಸಾವಿರ ಕೋಟಿ ರೂಗಳನ್ನು ವೆಚ್ಚ ಮಾಡುವ ನಿರ್ಧಾರ ಕೈಗೊಂಡಿದೆ.

ಸರ್ವರಿಗೂ ಸಮಬಾಳು ಸರ್ವರಿಗೆ ಸಮಪಾಲು ಎಂಬ ರಾಷ್ಟ್ರ ಕವಿ ಕುವೆಂಪು ಅವರ ವಾಣಿಯನ್ನೇ ಆದರ್ಶವಾಗಿ ಹೊಂದಿ ಮುನ್ನಡೆದಿರುವ ಸರ್ಕಾರ ಆರ್ಥಿಕ ಪ್ರಗತಿ ಸಾಧಿಸುವ ನಿಟ್ಟಿನಲ್ಲಿ ಹಲವು ಮಹತ್ವದ ನಿರ್ಧಾರ ಕೈಗೊಂಡು ಯಶಸ್ಸು ಸಾಧಿಸಿದೆ.




**ಜಾಗತಿಕ ಹೂಡಿಕೆದಾರರ ಸಮಾವೇಶ**

ನವೆಂಬರ್ 2, 2022 ರಿಂದ ಮೂರು ದಿನಗಳ ಕಾಲ ಬೆಂಗಳೂರಿನ ಅರಮನೆ ಮೈದಾನದಲ್ಲಿ ಜಾಗತಿಕ ಹೂಡಿಕೆದಾರರ ಸಮಾವೇಶ–ಇನ್ವೆಸ್ಟ್ ಕರ್ನಾಟಕ 2022 ಆಯೋಜಿಸಲು ಸರ್ಕಾರವು ಸಕಲ ಸಿದ್ಧತೆಯನ್ನು ಮಾಡಿಕೊಳ್ಳುತ್ತಿದೆ. ಈ ಕಾರ್ಯಕ್ರಮವು ರಾಜ್ಯಕ್ಕೆ ಹೆಚ್ಚಿನ ಹೂಡಿಕೆಗಳನ್ನು ಆಕರ್ಷಿಸುವತ್ತ ಕರ್ನಾಟಕವನ್ನು ಮುನ್ನಡೆಸುತ್ತದೆ ಮತ್ತು ಉದ್ಯೋಗ ಸೃಷ್ಟಿಯಲ್ಲಿ ಗಮನಾರ್ಹ ಉತ್ತೇಜನವನ್ನು ನೀಡುತ್ತದೆ.

**ಪಂಚ ಸೂತ್ರ ತಂದ ಯಶಸ್ಸು :**

ರಾಜ್ಯ ಸರ್ಕಾರ ಈ ವರ್ಷದ ಮಾರ್ಚ್ 4 ರಂದು ಬಜೆಟ್‌ನಲ್ಲಿ ಘೋಷಿಸಿರುವಂತೆ ರಾಜ್ಯದ ಸಮಗ್ರ ಅಭಿವೃದ್ಧಿಗೆ ನೀಲ ನಕ್ಷೆ ರೂಪಿಸಿ ಮುಂದಡಿ ಇಟ್ಟಿದೆ.

- ರಾಜ್ಯದಲ್ಲಿ ಎಲ್ಲರನ್ನೂ ಒಳಗೊಂಡ ಸಮಗ್ರ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿ ಸಾಧಿಸುವುದು.
- ದುರ್ಬಲ ವರ್ಗದವರ ರಕ್ಷಣೆ ಹಾಗೂ ಏಳಿಗೆಗೆ ಒತ್ತು ನೀಡುವುದರ ಜತೆಗೇ ಅವರನ್ನು ಪರಾವಲಂಬಿಗಳನ್ನಾಗಿ ಮಾಡದೇ ಸ್ವಾಭಿಮಾನದ ಬದುಕು ನಡೆಸಲು ಶಿಕ್ಷಣ, ಉದ್ಯೋಗ ಮತ್ತು ಸಬಲೀಕರಣದ ಕಾರ್ಯಕ್ರಮಗಳನ್ನು ರೂಪಿಸುವುದು, ಇದರ ಜತೆಗೆ ಉತ್ತಮ ಆರೋಗ್ಯ ಸೇವೆಯನ್ನು ಒದಗಿಸುವುದು .
- ರಾಜ್ಯದ ಹಿಂದುಳಿದ ಪ್ರದೇಶಗಳನ್ನು ವೈಜ್ಞಾನಿಕವಾಗಿ ಗುರುತಿಸಿ ವಿವಿಧ ವಲಯಗಳ ಅಭಿವೃದ್ಧಿಗೆ ಸಂಘಟಿತ ಪ್ರಯತ್ನ ಮಾಡುವ ಮೂಲಕ ಅಲ್ಲಿನ ಮಾನವ ಅಭಿವೃದ್ಧಿ ಸೂಚ್ಯಂಕವನ್ನು ರಾಜ್ಯದ ಸರಾಸರಿಗೆ ಸಮನಾಗಿ ತರುವುದು.
- ಕೃಷಿ, ಕೈಗಾರಿಕೆ ಹಾಗೂ ಸೇವಾ ವಲಯದಲ್ಲಿ ಹೆಚ್ಚಿನ ಜನ ಪಾಲುದಾರಿಕೆಯೊಂದಿಗೆ ಹೆಚ್ಚಿನ ಅಭಿವೃದ್ಧಿ ಸಾಧಿಸುವುದು.
- ಹೊಸ ಚಿಂತನೆ, ಹೊಸ ಚೈತನ್ಯ, ಹಾಗೂ ಹೊಸ ಮುನ್ನೋಟದೊಂದಿಗೆ ನವ ಭಾರತಕ್ಕಾಗಿ ನವ ಕರ್ನಾಟಕ ನಿರ್ಮಾಣ ಮಾಡುವುದು.

ಇವು ರಾಜ್ಯ ಮುಂಗಡ ಪತ್ರದಲ್ಲಿ ಮುಖ್ಯಮಂತ್ರಿಗಳು ಘೋಷಿಸಿದ ಅಂಶಗಳು. ಇವೇ ಅಂಶಗಳನ್ನು ಆದಾರವಾಗಿಟ್ಟುಕೊಂಡು ಅಭಿವೃದ್ಧಿಯ ಹಾದಿಯಲ್ಲಿ ಸರ್ಕಾರ ಅತ್ಯಂತ ವೇಗಯುತವಾಗಿ ಹೆಜ್ಜೆ ಹಾಕಿದೆ. ನಿರ್ದಿಷ್ಟ ಗುರಿಯನ್ನು ತಲಪುವ ಹುಮ್ಮಸ್ಸಿನಲ್ಲಿ ಮುನ್ನಡೆದಿದೆ.

**ಕಲ್ಯಾಣ ಕರ್ನಾಟಕದ ಅಭಿವೃದ್ಧಿ :**

ಆರ್ಥಿಕ ಪ್ರಗತಿಗೆ ಕರ್ನಾಟಕದ ಅಮೃತ ಮಹೋತ್ಸವದ ಅಂಗವಾಗಿ


Downloaded From:www.kpscvaani.com



ಇಡೀ ಪ್ರದೇಶದ ಅಭಿವೃದ್ಧಿಗೆ ರಾಜ್ಯ ಸರ್ಕಾರ ಕೈಗೆತ್ತಿಕೊಂಡಿರುವ ವಿವಿಧ ಯೋಜನೆಗಳು ಆ ಭಾಗದ ಆರ್ಥಿಕ ಪ್ರಗತಿಗೆ ನಾಂದಿ ಆಗಲಿದೆ. ಪ್ರದೇಶಾಭಿವೃದ್ಧಿ ಮಂಡಳಿಗೆ 3 ಸಾವಿರ ಕೋಟಿ ರೂ.ಗಳ ನೆರವು ಘೋಷಿಸಿರುವ ಸರ್ಕಾರ ಆ ಭಾಗದ ಅಭಿವೃದ್ಧಿಗೆ ಯೋಜನೆಗಳನ್ನು ಜಾರಿಗೊಳಿಸುವ ನಿಟ್ಟಿನಲ್ಲಿ ಕ್ರಮ ಕೈಗೊಂಡಿದೆ. ಈ ಮೊತ್ತದಲ್ಲಿ ಶಿಕ್ಷಣ, ಸಾಮಾಜಿಕ, ಮತ್ತು ಆರ್ಥಿಕ ಅಭಿವೃದ್ಧಿಗೆ ಸಂಬಂಧಿಸಿದ ಯೋಜನೆಗಳಿಗೆ ಒಂದೂವರೆ ಸಾವಿರ ಕೋಟಿ ರೂ. ಹಾಗೂ ಮೈಕ್ರೋ ಯೋಜನೆಗಳಿಗೆ ಒಂದೂವರೆ ಸಾವಿರ ಕೋಟಿ ರೂ.ಗಳನ್ನ ನಿಗದಿಗೊಳಿಸಿದೆ. ಕೈಗೊಂಡಿರುವ ಈ ಯೋಜನೆಗಳು ಪೂರ್ಣಗೊಂಡ ನಂತರ ಆ ಭಾಗದಲ್ಲಿ ಅಭಿವೃದ್ಧಿಯ ಹೊಸ ಸಕೆ ಆರಂಭವಾಗಲಿದೆ. ಒಂದು ಸರ್ಕಾರ ಜನತೆಗೆ ಹೇಗೆ ಉತ್ತರದಾಯಿಯಾಗಿ ಕೆಲಸ ಮಾಡಬಲ್ಲದು ಎಂಬುದಕ್ಕೆ ಇದು ನೇರ ಉದಾಹರಣೆ.

**ಸ್ಥಳೀಯ ಸಂಸ್ಥೆಗಳ ಸಬಲೀಕರಣಕ್ಕೆ ನೆರವು:**

ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಅಭಿವೃದ್ಧಿ ಪಡಿಸುವ ಸಲುವಾಗಿ ರಾಜ್ಯ ಸರ್ಕಾರ ದಿಟ್ಟ ಹೆಜ್ಜೆ ಇಟ್ಟಿದೆ. ಇದೂ ಜನತಂತ್ರ ವ್ಯವಸ್ಥೆಯಲ್ಲಿ ಸರ್ಕಾರ ನಂಬಿಕೆ ಇಟ್ಟಿದೆ ಎಂಬುದಕ್ಕೆ ಮತ್ತೊಂದು ಪ್ರತ್ಯಕ್ಷ ಉದಾಹರಣೆ. ಅಧಿಕಾರ ವಿಕೇಂದ್ರೀಕರಣದ ಸಿದ್ಧಾಂತವನ್ನು ಪ್ರತಿಪಾದಿಸುತ್ತಿರುವ ಸರ್ಕಾರ ಸ್ಥಳೀಯ ಸಂಸ್ಥೆಗಳನ್ನು ಬಲಗೊಳಿಸುವ ನಿಟ್ಟಿನಲ್ಲಿ ಹಲವು ಕಾರ್ಯ ಯೋಜನೆಗಳನ್ನು ರೂಪಿಸಿ ಜಾರಿಗೊಳಿಸಿದೆ. ಆ ಪೈಕಿ ಮುಖ್ಯಮಂತ್ರಿಗಳ ನಗರೋತ್ಥಾನ ಯೋಜನೆಯೂ ಒಂದು. ಈ ಯೋಜನೆಯಡಿ ಒಟ್ಟು 3,885 ಕೋಟಿ ರೂ ಮೊತ್ತದಲ್ಲಿ ಪ್ರಸಕ್ತ ವರ್ಷ ವಿವಿಧ ಯೋಜನೆಗಳನ್ನು ಜಾರಿಗೊಳಿಸಲು ಮುಂದಾಗಿದೆ. ಈ ಪೈಕಿ ಕೆಲವು ಕಾರ್ಯಾನುಷ್ಠಾನ ಹಂತದಲ್ಲೂ ಇವೆ. ಎರಡು ವರ್ಷಗಳ ಅವಧಿಯ ಈ ಯೋಜನೆಯ ಉದ್ದೇಶ ಎಂದರೆ ನಗರ ಸ್ಥಳೀಯ ಸಂಸ್ಥೆಗಳನ್ನು ಸಬಲೀಕರಣಗೊಳಿಸುವ ಮೂಲಕ ಸ್ಥಳೀಯ ಪ್ರದೇಶಗಳ ಅಭಿವೃದ್ಧಿಗೆ ನೆರವಾಗುವುದು. ಒಮ್ಮೆ ನಗರ ಪ್ರದೇಶಗಳಲ್ಲಿ ಮೂಲಭೂತ ಸೌಲಭ್ಯಗಳ ಅಭಿವೃದ್ಧಿಯಾದರೆ ಅಲ್ಲಿ ಬಂಡವಾಳ ಹೂಡಿಕೆಗೆ ಉತ್ತೇಜನ ನೀಡುವ ಮೂಲಕ ಆರ್ಥಿಕ ಅಭಿವೃದ್ಧಿಗೆ ಸಹಾಯ ಹಸ್ತ ಚಾಚುವುದು ಸರ್ಕಾರದ ಗುರಿ. ಮೂಲಭೂತ ಸೌಲಭ್ಯಗಳು ಅಭಿವೃದ್ಧಿಯಾದರೆ ರಾಜಧಾನಿಯ ಹೊರಗೂ ಬಂಡವಾಳ ಹೂಡಿಕೆಯ ಮೂಲಕ ಕೈಗಾರಿಕೆಗಳ ಸ್ಥಾಪನೆಗೆ ಉತ್ತೇಜನ ನೀಡಬಹುದು ಎಂಬುದು ಸರ್ಕಾರದ ದೂರ ದೃಷ್ಟಿ.

**ಬಂದರು ವಿಸ್ತರಣೆ :**

ರಾಜ್ಯದ ಕರಾವಳಿ ಪ್ರದೇಶಗಳು ಆರ್ಥಿಕ ಅಭಿವೃದ್ಧಿಗೆ ನೀಡಿರುವ ಕೊಡುಗೆಯೂ ಅಪಾರ. ಇಲ್ಲಿನ ಸಾಮಾಜಿಕ, ಔದ್ಯಮಿಕ, ಹಾಗೂ ಸಾಂಸ್ಕೃತಿಕ ವಾತಾವರಣವೇ ಇದಕ್ಕೆ ಸಾಕ್ಷಿ. ಹೀಗಾಗೇ ಸರ್ಕಾರ ಕರಾವಳಿ ಪ್ರದೇಶಗಳ ಅಭಿವೃದ್ಧಿಗೂ ಮುಂದಡಿ ಇಟ್ಟಿದೆ.

ಇದರಲ್ಲಿ ಮುಖ್ಯ ಯೋಜನೆ ಎಂದರೆ ಬಂದರುಗಳ ಅಭಿವೃದ್ಧಿ, ಜಲ ಸಾರಿಗೆ, ಮೀನುಗಾರಿಕೆಗೆ ಉತ್ತೇಜನ ಪ್ರಮುಖವಾದವು. ಕೇಂದ್ರ ಸರ್ಕಾರದ ನೆರವಿನೊಂದಿಗೆ 350 ಕೋಟಿ ರೂ. ವೆಚ್ಚದಲ್ಲಿ ಮಂಗಳೂರು ಬಂದರಿನ

**ಬೆಳಕು ಕಾರ್ಯಕ್ರಮ**

ರಾಜ್ಯ ಸರ್ಕಾರವು ವಿದ್ಯುತ್ ರಹಿತ ಮನೆಗಳಿಗೆ ಪ್ರಮುಖವಾಗಿ ಗ್ರಾಮೀಣ ಭಾಗದ ಮನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಬೆಳಕು ಕಾರ್ಯಕ್ರಮವನ್ನು 1-9-2021 ರಂದು ಜಾರಿಗೆ ತಂದಿದೆ. ಇಲ್ಲಿಯವರೆಗೆ ಈ ಕಾರ್ಯಕ್ರಮದಡಿ 1.44 ಲಕ್ಷ ಮನೆಗಳಿಗೆ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲಾಗಿದೆ.






Downloaded From:www.kpscvaani.com



ವಿಸ್ತರಣೆ ಯೋಜನೆಯನ್ನು ಸರ್ಕಾರ ಕೈಗೆತ್ತಿಕೊಂಡಿದೆ. ರಾಜ್ಯದ ಪ್ರಮುಖ ಬಂದರುಗಳಲ್ಲಿ ಒಂದಾದ ಮಂಗಳೂರು ಬಂದರು ವಿಸ್ತರಣೆ ಯೋಜನೆ ಮೂಲಕ ಅಭಿವೃದ್ಧಿಗೆ ಹೊಸ ಭಾಷ್ಯ ಬರೆಯುವುದು ಸರ್ಕಾರದ ಆಲೋಚನೆ. ಮಂಗಳೂರು ಬಂದರು ವಿಸ್ತರಣೆ ಯೋಜನೆ ಪೂರ್ಣಗೊಂಡ ನಂತರ ಔದ್ಯಮಿಕ ಚಟುವಟಿಕೆಗಳಿಗೆ ಹೊಸ ಹೆಬ್ಬಾಗಿಲು ತೆರೆದಂತ್ತಾಗಲಿದೆ. ಇದು ಕರಾವಳಿ ಪ್ರದೇಶದಲ್ಲಿ ಆರ್ಥಿಕ ಚಟುವಟಿಕೆಗಳ ವೇಗ ಹೆಚ್ಚಲು ಕಾರಣವಾಗಲಿದೆ. ಒಮ್ಮೆ ಆರ್ಥಿಕ ಚಟುವಟಿಕೆಗಳ ವೇಗ ಹೆಚ್ಚಾದರೆ ಔದ್ಯಮಿಕ ಅಭಿವೃದ್ಧಿಗೆ ಅದು ನೆರವಾಗಲಿದೆ. ಆ ಮೂಲಕ ಸರ್ಕಾರದ ಬೊಕ್ಕಸಕ್ಕೆ ತೆರಿಗೆ ಆದಾಯ ಹೆಚ್ಚಿನ ಪ್ರಮಾಣದಲ್ಲಿ ಹರಿದು ಬರಲಿದೆ. ಇದರ ಜತೆಗೇ ಆ ಭಾಗದಲ್ಲಿ ದುಡಿಯುವ ಕೈಗಳಿಗೆ ಉದ್ಯೋಗ ಸಿಕ್ಕಿ ನಿರುದ್ಯೋಗ ಸಮಸ್ಯೆಯ ಪರಿಹಾರಕ್ಕೆ ನೆರವಾಗಲಿದೆ. ಒಂದು ಸರ್ಕಾರ ಹೇಗೆ ಜನ ಪರವಾಗಿ ಯೋಜನೆಗಳನ್ನು ರೂಪಿಸಿ ಜಾರಿಗೊಳಿಸಲು ಮುಂದಾಗುತ್ತದೆ ಎಂಬುದಕ್ಕೆ ಇದೇ ತಜಾ ಉದಾಹರಣೆ.

**ಮೀನುಗಾರಿಕೆ ತರಬೇತಿ ಸಂಸ್ಥೆ ಸ್ಥಾಪನೆ:**

ಕರಾವಳಿ ಭಾಗದಲ್ಲಿ ಮೀನುಗಾರಿಕೆಯೂ ಒಂದು ಪ್ರಮುಖ ವ್ಯಾಪಾರ ಉದ್ಯಮ. ಇಲ್ಲಿನ ಜನರ ಬದುಕಿನ ಜತೆ ಮೀನುಗಾರಿಕೆ ಹಾಸುಹೊಕ್ಕಾಗಿದೆ. ಇದು ಅಲ್ಲಿನ ಜನರ ಬುದಕಿನ ಆಸರೆ. ಸಮುದ್ರಕ್ಕೂ ಮೀನುಗಾರಿಕೆಗೂ ಮೀನುಗಾರರಿಗೂ ಇರುವ ಸಂಬಂಧ ಅವಿನಾವಭಾವ. ಅದು ಒಂದನ್ನೊಂದು ಬೇರ್ಪಡಿಸಲಾಗದ್ದು. ಸಮುದ್ರದ ಜತೆ ಕರಾವಳಿ ಜನರಿಗೆ ಬಾಂದವ್ಯವೂ ಇದೆ. ಮೀನುಗಾರಿಕೆ ಇಲ್ಲಿನ ಜನರ ಜೀವನಾಡಿ. ಇದನ್ನು ಮನಗಂಡೇ ಸರ್ಕಾರ ಕಾರವಾರದಲ್ಲಿ ಜಲ ಸಾರಿಗೆ ಮತ್ತು ಮೀನುಗಾರಿಕೆ ತರಬೇತಿ ಸಂಸ್ಥೆಯನ್ನು ಆರಂಭಿಸಲು ಮುಂದಾಗಿದೆ. ಇದಕ್ಕೆ ಕೇಂದ್ರ ಸರ್ಕಾರದ ಸಹಯೋಗವೂ ದೊರೆತಿದೆ. ಕರಾವಳಿ ಭಾಗದಲ್ಲಿ ಕಡಲ ಕೊರೆತ ಇತ್ತೀಚಿನ ದಶಕಗಳಲ್ಲಿ ದೊಡ್ಡ ಸಮಸ್ಯೆಯಾಗಿದೆ. ಇದಕ್ಕೆ ಪರಿಹಾರ ರೂಪಿಸುವ ನಿಟ್ಟಿನಲ್ಲಿ ಕಡಲ ಕೊರೆತ ತಡೆಗೆ ಸರ್ಕಾರ ಹೊಸ ತಂತ್ರಜ್ಞಾನದ ಮೊರೆ ಹೋಗಿದೆ. ನವ ಕರ್ನಾಟಕದಿಂದ ನವ ಭಾರತ ನಿರ್ಮಾಣ ಧ್ಯೇಯ ದಡಿಯಲ್ಲಿ ಪರಿಸರ ಸ್ನೇಹಿ ನವ ನಗರಗಳನ್ನು ನಿರ್ಮಾಣ ಮಾಡುವುದು ಸರ್ಕಾರದ ಉದ್ದೇಶ. ಈ ನಿಟ್ಟಿನಲ್ಲಿ ಸರ್ಕಾರ ಕಾರ್ಯ ಪ್ರವೃತ್ತವಾಗಿದೆ.

**ಜವಳಿ ಕ್ಷೇತಕ್ಕೆ ಮಹೋನ್ನತ ಕೊಡುಗೆ**

ಜವಳಿ ಉದ್ಯಮ ಈಗ ವ್ಯಾಪಕವಾಗಿ ಎಲ್ಲರ ಗಮನ ಸೆಳೆದಿದೆ. ಅಭಿವೃದ್ಧಿ ಎಂಬುದು ಕೇವಲ ಒಂದು ಪ್ರದೇಶಕ್ಕೆ ಸೀಮಿತವಾದರೆ ಸಾಲದು ಅದರ ವ್ಯಾಪ್ತಿ ಹೆಚ್ಚಬೇಕು ಆಗ ಮಾತ್ರ ಇಡೀ ರಾಜ್ಯ ಪ್ರಗತಿ ಹೊಂದಲು ಸಾಧ್ಯ ಎಂಬ ನೀತಿಗೆ ಕಟ್ಟು ಬಿದ್ದಿರುವ ಸರ್ಕಾರ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಜವಳಿ ಉದ್ಯಮವನ್ನು ಪ್ರೋತ್ಸಾಹಿಸಲು ಮುಂದಾಗಿದೆ. ಈ ಯೋಜನೆಯ ಭಾಗವಾಗಿ ಕಲಬುರ್ಗಿ ಮತ್ತು ವಿಜಯಪುರದಲ್ಲಿ ಮೆಗಾ ಟೆಕ್ಸ್ ಟೈಲ್ ಪಾರ್ಕ್ ನಿರ್ಮಾಣ, ಬಳ್ಳಾರಿಯಲ್ಲಿ ಜೀನ್ಸ್ ಮತ್ತು ಸಿದ್ಧ ಉಡುಪುಗಳನ್ನು ಉತ್ತೇಜಿಸಲು ಟೆಕ್ಸ್ ಟೈಲ್ ಪಾರ್ಕ್, ಧಾರವಾಡ ಜಿಲ್ಲೆಯ ನವಲಗುಂದದಲ್ಲಿ ಹಾಗೂ ಹಾವೇರಿ ಜಿಲ್ಲೆಯ ರಾಣೆಬೆನ್ನೂರು ತಾಲ್ಲೂಕಿನಲ್ಲಿ ನೂತನ ಜವಳಿ ಪಾರ್ಕ್ ಸ್ಥಾಪಿಸಲು ಸರ್ಕಾರ ಈಗಾಗಲೇ ಅಗತ್ಯ ಕ್ರಮಗಳನ್ನು ಕೈಗೊಂಡಿದೆ. ಈ ಎಲ್ಲ ಯೋಜನೆಗಳು ಪೂರ್ಣಗೊಂಡ ನಂತರ ಈ ಭಾಗದಲ್ಲಿ ಜವಳಿ ಉದ್ಯಮ ವ್ಯಾಪಕವಾಗಿ ಬೆಳೆಯಲಿರುವುದರಿಂದ ಎಲ್ಲಾ ಭಾಗದಲ್ಲೂ ನಿರುದ್ಯೋಗ ಸಮಸ್ಯೆ ದೂರಾಗಲಿದೆ.

ಹೀಗೆ ಒಂದು ಸರ್ಕಾರ ಜನ ಪರವಾಗಿ ಹೇಗೆ ಚಿಂತಿಸಿ, ಅಭಿವೃದ್ಧಿ ಯೋಜನೆಗಳನ್ನು ಜಾರಿಗೊಳಿಸುವ ಬಗ್ಗೆ ಆಲೋಚಿಸುತ್ತದೆ ಎಂಬುದಕ್ಕೆ ಇವು ತಾಜಾ ಉದಾಹರಣೆಗಳು. ಈ ಎಲ್ಲ ಯೋಜನೆಗಳ ಒಟ್ಟು ಉದ್ದೇಶವೇ ಆರ್ಥಿಕ ಪ್ರಗತಿ ಎಂಬುದರಲ್ಲಿ ಎರಡು ಮಾತಿಲ್ಲ. ■

### ಒಂದು ಜಿಲ್ಲೆ ಒಂದು ಉತ್ಪನ್ನ

**ಒಂದು ಜಿಲ್ಲೆ ಒಂದು ಉತ್ಪನ್ನ ಉಪಕ್ರಮದ ಅಡಿಯಲ್ಲಿ ದೇವನಹಳ್ಳಿಯಲ್ಲಿ ಐಟಿ ಪಾರ್ಕ್, ಏರೋಸ್ಪೇಸ್ ಪಾರ್ಕ್ ಮತ್ತು ಹಾರ್ಡ್‌ವೇರ್ ಪಾರ್ಕ್, ಕೊಪ್ಪಳದಲ್ಲಿ ಟಾಯ್ಸ್ ಪಾರ್ಕ್, ತುಮಕೂರಿನಲ್ಲಿ ಮಿಷಿನ್ ಟೂಲ್ ಪಾರ್ಕ್, ಯಾದಗಿರಿಯಲ್ಲಿ ಫಾರ್ಮಾ ಪಾರ್ಕ್, ಕಲಬುರಗಿ ಹಾಗೂ ಬಳ್ಳಾರಿಯಲ್ಲಿ ಜವಳಿ ಪಾರ್ಕ್, ಹುಬ್ಬಳ್ಳಿ–ಧಾರವಾಡದಲ್ಲಿ ಸಿ.ಡಿ.ಜಿ.ಎ ಮತ್ತು ಎಫ್.ಎಂ.ಸಿ.ಜಿ ಕ್ಲಸ್ಟರ್, ಇವೇ ಮುಂತಾದ ಡೆಡಿಕೇಟೆಡ್ ಕೈಗಾರಿಕಾ ಪಾರ್ಕ್‌ಗಳನ್ನು ನಿರ್ಮಿಸಲಾಗುತ್ತಿದೆ.**


Downloaded From:www.kpscvaani.com



# ಭಾರತದ ರಾಷ್ಟ್ರಪತಿ
# ದ್ರೌಪದಿ ಮುರ್ಮು

ಪ್ರಜಾಪ್ರಭುತ್ವದಲ್ಲಿ
ಆಳು ಅರಸನಾಗಬಹುದು!
ಅರಸ ಆಳಾಗಬಹುದು !
ಎಂಬ ಮಾತು
ಜನಜನಿತವಾಗಿದೆ. ಅದುವೇ
ಪ್ರಜಾಪ್ರಭುತ್ವದ ಸೊಬಗು
ಮತ್ತು ಸೊಗಸು.

ಡಿ. ಪಿ. ಮುರಳೀಧರ್

Downloaded From:www.kpscvaani.com

ವಿಶ್ವದ ಅತೀದೊಡ್ಡ ಪ್ರಜಾಪ್ರಭುತ್ವ ನಮ್ಮ ಭಾರತ. ನಮ್ಮಲ್ಲಿ ಶಿಕ್ಷಕ ವೃತ್ತಿಯಲ್ಲಿದ್ದವರು ರಾಷ್ಟ್ರಪತಿಯಾದ ಉದಾಹರಣೆ ಇದೆ. ಚಹಾ ಮಾರಾಟ ಮಾಡುತ್ತಿದ್ದ ವ್ಯಕ್ತಿ ಪ್ರಧಾನ ಮಂತ್ರಿಯಾದ ನಿದರ್ಶನವಿದೆ. ಆಟೋ ಚಾಲಕ ಮುಖ್ಯಮಂತ್ರಿಯಾದುದಕ್ಕೆ ಸಾಕ್ಷಿ ಇದೆ. ಅಂತೆಯೇ, ಒಂದು ರಾಜಕೀಯ ಪಕ್ಷದಲ್ಲಿ ಸೇವಕನಾಗಿದ್ದ ವ್ಯಕ್ತಿ ದಶಕಕ್ಕೂ ಹೆಚ್ಚು ಕಾಲ ಕೇಂದ್ರ ಸಚಿವರಾಗಿ ಅದ್ಭುತ ಕಾರ್ಯನಿರ್ವಹಿಸಿದ ಇತಿಹಾಸವೂ ನಮ್ಮಲ್ಲಿದೆ.

ರಾಜಕಾರಣದಲ್ಲಿ ಮೇಲು-ಕೀಳು ಎಂಬ ತಾರತಮ್ಯ ಇರಕೂಡದು. ಲಿಂಗ-ಬೇಧಕ್ಕೆ ಆಸ್ಪದವನ್ನೂ ನೀಡಕೂಡದು. ರಾಜಕಾರಣದಲ್ಲಿ ಎಲ್ಲಾ ಕ್ಷೇತ್ರಗಳನ್ನೂ ಪ್ರತಿನಿಧಿಸುವ ಎಲ್ಲಾ ಸ್ತರದ ಜನರೂ ಇರುವ ಅಗತ್ಯವಿದೆ. ಎಲ್ಲರಿಗೂ ಅವಕಾಶದ ಬಾಗಿಲು ಸದಾ ಕಾಲ ತೆರೆದಿರಬೇಕು. ಎಲ್ಲರಿಗೂ ಸಮಾನ ಅವಕಾಶಗಳು ದೊರೆತಲ್ಲಿ, ಭವಿಷ್ಯದ ಬಗ್ಗೆ ಎಲ್ಲರಲ್ಲೂ ಆಶಾಕಿರಣ ಹಾಗೂ ಎಲ್ಲರಲ್ಲೂ ಆಶಾಭಾವನೆ ಮೂಡುತ್ತದೆ. ಆಗ ಮಾತ್ರ ಪ್ರಜಾಪ್ರಭುತ್ವಕ್ಕೆ ಅರ್ಥ ಮತ್ತು ಸಾರ್ಥಕತಾ ಭಾವ ಲಭಿಸುತ್ತದೆ, ಪ್ರಜಾಪ್ರಭುತ್ವ ಸದೃಢವಾಗಿ ಹಾಗೂ ಹೆಮ್ಮರವಾಗಿ ಬೆಳೆಯುತ್ತದೆ.

ವೈದ್ಯರ ಮಕ್ಕಳು ವೈದ್ಯರಾಗುತ್ತಾರೆ. ಅಭಿಯಂತರರ ಮಕ್ಕಳು ಅಭಿಯಂತರರಾಗುತ್ತಾರೆ. ಚಿತ್ರನಟರ ಮಕ್ಕಳು ಚಿತ್ರ ನಟರಾಗುತ್ತಾರೆ. ರಾಜಕಾರಣಿಗಳ ಮಕ್ಕಳು ರಾಜಕಾರಣಿಗಳಾಗುತ್ತಾರೆ. ಇವುಗಳಲ್ಲಿ ವಿಶೇಷತೆ ಏನಿಲ್ಲ. ಆದರೆ, ಪೌರ ಕಾರ್ಮಿಕನ ಮಗ ಭಾರತೀಯ ಆಡಳಿತ ಸೇವೆಯ ಅಧಿಕಾರಿಯಾಗಿ, ಪೊಲೀಸ್ ಪೇದೆಯ ಮಗಳು ಭಾರತೀಯ ಪೊಲೀಸ್ ಸೇವೆಯ ಅಧಿಕಾರಿಯಾಗಿ, ಅನ್ಯಾಯಕ್ಕೆ ಒಳಗಾಗಿ ನೊಂದು ಆತ್ಮಹತ್ಯೆ ಮಾಡಿಕೊಂಡ ವ್ಯಕ್ತಿಯ ಮಗಳು ನ್ಯಾಯಾಧೀಶೆಯಾಗಿ ಹೊರಹೊಮ್ಮಿರುವುದು ನಮ್ಮ ಭಾರತದ ಅತ್ಯುತ್ಕೃಷ್ಟ ಪ್ರಜಾಪ್ರಭುತ್ವದಲ್ಲಿ ಮಾತ್ರ ಎಂದರೆ ನಿಜವಾಗಿಯೂ ರೋಚಕವಾಗುತ್ತದೆ.

**ವಾದ್ಯಗೋಷ್ಠಿಯಂತೆ !**

ಪ್ರಜಾಪ್ರಭುತ್ವ ಎಂದರೆ ಸಂಗೀತ ಸಂಜೆಯಲ್ಲಿನ ವಾದ್ಯಗೋಷ್ಠಿಯಂತೆ. ಎಷ್ಟೇ ಇಂಪು ಎನಿಸಿದರೂ ಹಾಡುಗಾರನಧ್ವನಿ ಮಾತ್ರ ಶ್ರೋತೃಗಳಿಗೆ ಕೇಳಲು ಕಷ್ಟವಾಗುತ್ತದೆ. ಬರೀ ಮೃಂದಗದ ಸದ್ದು ತಲೆಚಿಟ್ಟು ಹಿಡಿಸುತ್ತದೆ. ಆದರೆ, ಎಲ್ಲಾ ಸಂಗೀತ ಪರಿಕರಗಳ ಸಕಾಲಿಕ ಹಾಗೂ ಮಾಧುರ್ಯದ ಮಿಶ್ರಣ ಕೇಳುಗರಲ್ಲಿ ಸದಭಿರುಚಿಯನ್ನು ಮೂಡಿಸುತ್ತದೆ. ಎಲ್ಲಾ ವಾದ್ಯಗಳಿಗೂ ಹಾಗೂ ಎಲ್ಲಾ ಕಲಾವಿದರಿಗೂ ವಿಶೇಷ ಅವಕಾಶವನ್ನು ಕಲ್ಪಿಸುತ್ತದೆ.

ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಕೊಡುಗೆಯೋ ಎಂಬಂತೆ ಭಾರತದ ಮೊದಲ ಪ್ರಜೆ ಇದೀಗ ಮಹಿಳೆ. ಅದರಲ್ಲೂ, ರಾಷ್ಟ್ರಪತಿ ಸ್ಥಾನ ಅಲಂಕರಿಸಿದ ಮೊದಲ ಆದಿವಾಸಿ ಮಹಿಳೆ. ಆಕೆ ರಕ್ಷಣಾ ಪಡೆಗಳ ಮಹಾದಂಡ ನಾಯಕಿಯೂ ಕೂಡಾ.

ಹೌದು ! ದ್ರೌಪದಿ ಮುರ್ಮು ಅವರು ಭಾರತದ ಹದಿನೈದನೇ ರಾಷ್ಟ್ರಪತಿಯಾಗಿದ್ದಾರೆ. ಆಕೆಯ ಜೀವನ ಎಂದೂ ಹೂವಿನ ಹಾಸಿಗೆಯಾಗಿರಲಿಲ್ಲ. ಆಕೆ ಕಷ್ಟಗಳನ್ನು ಕಂಡಿದ್ದಾರೆ. ಜೀವನವಿಡೀ ಸಂಕಷ್ಟಗಳನ್ನು ಎದುರಿಸಿದ್ದಾರೆ.

ಬನ್ನಿ, ರಾಷ್ಟ್ರದ ರಾಜಧಾನಿ ನವದೆಹಲಿಯ ರೈಸಿನಾ ಹಿಲ್ಸ್‌ನಲ್ಲಿ ರಾಷ್ಟ್ರಪತಿ ಭವನವನ್ನು ಪ್ರವೇಶಿಸಿದ ಮಹತ್ಸಾಧಕಿ, ತಾಳ್ಮೆಯ ಮಹಾ ತಾಯಿ ನಮ್ಮ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಜೀವನ ಚಿತ್ರಣವನ್ನು ನೋಡೋಣ.

**ಪ್ರಥಮ-ದ್ವಿತೀಯ !**

ಭಾರತದ ಈವರೆಗಿನ ಎಲ್ಲಾ ರಾಷ್ಟ್ರಪತಿಗಳಲ್ಲಿ ಅತ್ಯಂತ ಕಿರಿಯ ವಯಸ್ಸಿನವರು ಎಂಬ ಹೆಗ್ಗಳಿಕೆಗೆ ದ್ರೌಪದಿ ಮುರ್ಮು ಅವರು ಪಾತ್ರರಾಗಿದ್ದಾರೆ. ಭಾರತ ಸ್ವಾತಂತ್ರ್ಯಾ ನಂತರ ಜನಿಸಿದ ಮೊದಲನೆಯ ರಾಷ್ಟ್ರಪತಿ ಎಂಬ ದಾಖಲೆ ಕೂಡಾ ದ್ರೌಪದಿ ಮುರ್ಮು ಅವರದ್ದಾಗಿದೆ. ಭಾರತದ ಪ್ರಪ್ರಥಮ ಬುಡಕಟ್ಟು ಮಹಿಳಾ ರಾಷ್ಟ್ರಪತಿ ಎಂಬ ಕೀರ್ತಿ ಮತ್ತು ಗೌರವವೂ ದ್ರೌಪದಿ ಮುರ್ಮು ಅವರಿಗೇ ಸಲ್ಲುತ್ತದೆ.





Downloaded From:www.kpscvaani.com



ಭಾರತದ ಮೊದಲ ಮಹಿಳಾ ರಾಷ್ಟ್ರಪತಿ ಪ್ರತಿಭಾ ದೇವಿಸಿಂಗ್ ಪಾಟೀಲ್. ಭಾರತದ ಎರಡನೇ ಮಹಿಳಾ ರಾಷ್ಟ್ರಪತಿ ದ್ರೌಪದಿ ಮುರ್ಮು.

ರಾಷ್ಟ್ರಪತಿ ಹುದ್ದೆಗೆ ಸ್ಪರ್ಧಿಸಿದ ಮೊದಲ ಬುಡಕಟ್ಟು ನಾಯಕರು ಎಂಬ ಖ್ಯಾತಿಗೆ ಪಾತ್ರರಾದವರು ಪೂರ್ನೋ ಅಜಿಟೋಕ್ ಸಾಂಗ್ಮಾ. ಆದರೆ, 2012 ರಲ್ಲಿ ಅಂದಿನ ಆಡಳಿತ ಪಕ್ಷದ ಅಭ್ಯರ್ಥಿ ಪ್ರಣಬ್ ಮುಖರ್ಜಿ ಅವರ ವಿರುದ್ಧ ಪ್ರತಿಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿ ಸಾಂಗ್ಮಾ ಅವರು ಸೋಲು ಅನುಭವಿಸಿದರು.

ಹತ್ತು ವರ್ಷದ ನಂತರ, ರಾಷ್ಟ್ರಪತಿ ಹುದ್ದೆಗೆ ಸ್ಪರ್ಧಿಸಿದ ಎರಡನೇ ಬುಡಕಟ್ಟು ನಾಯಕರು ಎಂದು ಹೆಸರಾದ ದ್ರೌಪದಿ ಮುರ್ಮು ಅವರು 2022 ರಲ್ಲಿ ಆಡಳಿತ ಪಕ್ಷದ ಅಭ್ಯರ್ಥಿಯಾಗಿ ಪ್ರತಿಪಕ್ಷದ ಅಭ್ಯರ್ಥಿ ಯಶವಂತ್ ಸಿನ್ಹಾ ಅವರನ್ನು ಪರಾಭವಗೊಳಿಸಿ ಗೆಲುವು ಸಾಧಿಸಿದ್ದಾರೆ.

ನೆಲೆ–ಹಿನ್ನೆಲೆ !

ಭಾರತದ 15 ನೇ ರಾಷ್ಟ್ರಪತಿಯಾಗಿ ಆಯ್ಕೆಯಾಗಿರುವ ಒಡಿಶಾ ರಾಜ್ಯದ ಮಯೂರ್ ಭಂಜ್ ಜಿಲ್ಲೆಯ ಉಪರ್ಬೇಡಾ ಸಮೀಪದ ಬೈದಾ ಪೋಸಿ ಎಂಬ ಕಿರು ಗ್ರಾಮದಲ್ಲಿ ಸಂತಾಲಿ ಬುಡಕಟ್ಟು ಜನಾಂಗದ ಬಿರಾಂಚಿ ನಾರಾಯಣ್ ಟುಡು ಅವರ ಮಗಳಾಗಿ 1958 ರ ಜೂನ್ 20 ರಂದು ಜನಿಸಿದ ದ್ರೌಪದಿ ಅವರ ತಂದೆ ಮತ್ತು ಅಜ್ಜ ಇಬ್ಬರೂ ಪಂಚಾಯಿತಿ ರಾಜ್ ವ್ಯವಸ್ಥೆಯಲ್ಲಿ ಗ್ರಾಮ ಪ್ರಧಾನರಾಗಿದ್ದರು ಎಂಬುದು ಗಮನಾರ್ಹ.

ಅಭಿವೃದ್ಧಿಯೇ ಕಾಣದ ಅತ್ಯಂತ ಹಿಂದುಳಿದ ಪ್ರದೇಶದ ಹಿನ್ನೆಲೆಯಿಂದ ಬಂದಿದ್ದರೂ, ಓದಿನಲ್ಲಿ ಸದಾ ಮುಂದಿದ್ದ ದ್ರೌಪದಿ ಅವರು ಬಾಲ್ಯದಿಂದಲೂ ಪರಶಿವನ ಪರಮ ಭಕ್ತೆ. ದ್ರೌಪದಿ ಅವರು ತನ್ನ ಗ್ರಾಮ ಮಾತ್ರವಲ್ಲದೆ, ಅಕ್ಕ–ಪಕ್ಕ ಏಳು ಗ್ರಾಮಗಳಿಂದ ಕಾಲೇಜು ಮೆಟ್ಟಿಲೇರಿದ ಮೊದಲ ಮಹಿಳೆ. ಭುವನೇಶ್ವರದರ ಮಾದೇವಿ ವಿಶ್ವವಿದ್ಯಾಲಯದಿಂದ ಕಲಾ ಪದವಿ ಪಡೆಯುವವರೆಗೂ ದ್ರೌಪದಿ ಅವರು ಕಷ್ಟದ ಹಾದಿಯಲ್ಲೇ ಪಯಣಿಸ ಬೇಕಾಯಿತು.

ದ್ರೌಪದಿ ಮುರ್ಮು ಅವರು ರಾಜಕಾರಣವನ್ನು ಪ್ರವೇಶಿಸುವ ಮುನ್ನ, ರಾಯ್‌ರಂಗಪುರದ ಶ್ರೀ ಅರಬಿಂದೋ ಸಮಗ್ರ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯಲ್ಲಿ ಹಿಂದಿ, ಒಡಿಯಾ, ಗಣಿತ ಮತ್ತು ಭೂಗೋಳ ಪಠ್ಯವನ್ನು ಬೋಧಿಸುವ ಸಹಾಯಕ ಶಿಕ್ಷಕರಾಗಿ ಕಾರ್ಯ ನಿರ್ವಹಿಸಿದ್ದಾರೆ. ಅಲ್ಲದೆ,



**ಆತ್ಮಸಾಕ್ಷಿ ಮತ**

ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟವು 2019 ರಲ್ಲೇ ದ್ರೌಪದಿ ಮುರ್ಮು ಅವರನ್ನು ರಾಷ್ಟ್ರಪತಿ ಸ್ಥಾನಕ್ಕೆ ಅಭ್ಯರ್ಥಿಯಾಗಿ ಘೋಷಿಸಲು ಚಿಂತನೆ ನಡೆಸಿತ್ತು. ಆದರೆ, ಆ ಚಿಂತನೆ ಸಾಕಾರಗೊಳ್ಳಲು ಐದು ವರ್ಷಗಳೇ ಬೇಕಾಯಿತು.

ಇದೀಗ 2022 ರಲ್ಲಿ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟದ ಅಭ್ಯರ್ಥಿಯಾಗಿ ಘೋಷಣೆಯಾದ ಕೂಡಲೇ ದ್ರೌಪದಿ ಮುರ್ಮು ಅವರು ರಾಷ್ಟ್ರಪತಿಯಾಗಿ ಗೆದ್ದು ಬಿಟ್ಟಿದ್ದರು. ದೇಶಾದ್ಯಂತ ದ್ರೌಪದಿ ಅವರ ಪರ ಅಲೆ ಎದ್ದು ಬಿಟ್ಟಿತು. ಪ್ರತಿಪಕ್ಷಗಳ ಅಭ್ಯರ್ಥಿ ಇದ್ದರೂ, ವಿಪಕ್ಷಗಳಿಗೆ ಸೇರಿದ 17 ಸಂಸದರು ಹಾಗೂ 100 ಶಾಸಕರು ತಮ್ಮ ಅಭ್ಯರ್ಥಿಯ ಪರವಾಗಿ ಮತ ಚಲಾಯಿಸದೇ, ದ್ರೌಪದಿ ಮುರ್ಮು ಅವರ ಪರವಾಗಿ ಪಕ್ಷಾತೀತವಾಗಿ ಆತ್ಮಸಾಕ್ಷಿ ಮತವನ್ನು ಚಲಾಯಿಸಿದರು. ದ್ರೌಪದಿ ಮುರ್ಮು ಅವರು ಅಭೂತಪೂರ್ವ ಯಶಸ್ಸಿನೊಂದಿಗೆ ರಾಷ್ಟ್ರಪತಿಯಾಗಿ ಆಯ್ಕೆಯಾದರು. ಪ್ರತಿಪಕ್ಷದ ಅಭ್ಯರ್ಥಿ ಯಶವಂತ ಸಿನ್ಹಾ ಅವರೂ ಕೂಡಾ ದ್ರೌಪದಿ ಮುರ್ಮು ಅವರನ್ನು ತುಂಬು ಹೃದಯದಿಂದ ಅಭಿನಂದಿಸಿ ರಾಷ್ಟ್ರಕ್ಕೆ ತಮ್ಮ ಮೇರು ವ್ಯಕ್ತಿತ್ವವನ್ನು ಪರಿಚಯಿಸಿಕೊಂಡರು.



Downloaded From:www.kpscvaani.com

| ಕ್ರಮ ಸಂಖ್ಯೆ | ಭಾರತದ ರಾಷ್ಟ್ರಪತಿಗಳು | ಕಾರ್ಯನಿರ್ವಹಿಸಿದ ಅವಧಿ |
|---|---|---|
| 1. | ಡಾ ರಾಜೇಂದ್ರ ಪ್ರಸಾದ್ | ಜನವರಿ 26, 1950 ರಿಂದ ಮೇ 13, 1962 |
| 2. | ಡಾ ಸರ್ವಪಲ್ಲಿ ರಾಧಾಕೃಷ್ಣನ್ | ಮೇ 13, 1962 ರಿಂದ ಮೇ 13, 1967 |
| 3. | ಡಾ ಝಾಕೀರ್ ಹುಸೇನ್ | ಮೇ 13, 1967 ರಿಂದ ಮೇ 3, 1969 |
| 4. | ಡಾ ವರಾಹಗಿರಿ ವೆಂಕಟಗಿರಿ | ಮೇ 3, 1969 ರಿಂದ ಜುಲೈ 20, 1969 |
| | | ಆಗಸ್ಟ್ 24, 1969 ರಿಂದ ಆಗಸ್ಟ್ 24, 1974 |
| 5. | ಡಾ ಫಕ್ರುದ್ದೀನ್ ಅಲಿ ಅಹಮದ್ | ಆಗಸ್ಟ್ 24, 1974 ರಿಂದ ಫೆಬ್ರವರಿ 11, 1977 |
| | ಬಸಪ್ಪ ದಾನಪ್ಪ ಜತ್ತಿ (ಹಂಗಾಮಿ ರಾಷ್ಟ್ರಪತಿ) | ಫೆಬ್ರವರಿ 11, 1977 ರಿಂದ ಜುಲೈ 25, 1977 |
| 6. | ನೀಲಂ ಸಂಜೀವ ರೆಡ್ಡಿ | ಜುಲೈ 25, 1977 ರಿಂದ ಜುಲೈ 25, 1982 |
| 7. | ಗ್ಯಾನಿ ಜೇಲ್ ಸಿಂಗ್ | ಜುಲೈ 25, 1982 ರಿಂದ ಜುಲೈ 25, 1987 |
| 8. | ಆರ್. ವೆಂಕಟರಾಮನ್ | ಜುಲೈ 25, 1987 ರಿಂದ ಜುಲೈ 25, 1992 |
| 9. | ಡಾ ಶಂಕರ್ ದಯಾಳ್ ಶರ್ಮ | ಜುಲೈ 25, 1992 ರಿಂದ ಜುಲೈ 25, 1997 |
| 10. | ಕೆ. ಆರ್. ನಾರಾಯಣನ್ | ಜುಲೈ 25, 1997 ರಿಂದ ಜುಲೈ 25, 2002 |
| 11. | ಡಾ ಎ.ಪಿ.ಜೆ. ಅಬ್ದುಲ್ ಕಲಾಂ | ಜುಲೈ 25, 2002 ರಿಂದ ಜುಲೈ 25, 2007 |
| 12. | ಪ್ರತಿಭಾ ದೇವಿಸಿಂಗ್ ಪಾಟೀಲ್ | ಜುಲೈ 25, 2007 ರಿಂದ ಜುಲೈ 25, 2012 |
| 13. | ಪ್ರಣಬ್ ಮುಖರ್ಜಿ | ಜುಲೈ 25, 2012 ರಿಂದ ಜುಲೈ 25, 2017 |
| 14. | ರಾಮನಾಥ್ ಕೋವಿಂದ್ | ಜುಲೈ 25, 2017 ರಿಂದ ಜುಲೈ 25, 2022 |
| 15. | ದ್ರೌಪದಿ ಮುರ್ಮು | ಜುಲೈ 25, 2022 ರಿಂದ |

ಒಡಿಶಾ ಸರ್ಕಾರದ ನೀರಾವರಿ ಇಲಾಖೆಯಲ್ಲಿ ಕಿರಿಯ ಸಹಾಯಕರಾಗಿ ಸೇವೆ ಸಲ್ಲಿಸಿದ್ದಾರೆ. ನಂತರ, ರಾಯ್ ರಂಗಾಪುರದ ಪಂಚಾಯತ್ ಸದಸ್ಯೆಯಾಗಿ 1997 ರಲ್ಲಿ ರಾಜಕೀಯ ಪ್ರವೇಶ ಮಾಡಿದ ದ್ರೌಪದಿ ಅವರು ಗಮನಾರ್ಹ ಸಾಧನೆ ಮಾಡಿ ಭಾರತೀಯ ಜನತಾ ಪಕ್ಷದ ರಾಷ್ಟ್ರೀಯ ಉಪಾಧ್ಯಕ್ಷೆ ಸ್ಥಾನಕ್ಕೆ ಏರಿದರು.

**ಜೀವನವೆಲ್ಲಾ ಬೇವು-ಬೆಲ್ಲ !**

ದ್ರೌಪದಿ ಅವರು 2000 ನೇ ಇಸವಿಯಲ್ಲಿ ರಾಯ್ ರಂಗಾಪುರ ಕ್ಷೇತ್ರದಿಂದ ಒಡಿಶಾ ವಿಧಾನ ಸಭೆಯನ್ನು ಪ್ರವೇಶಿಸಿ, ಸತತ ನಾಲ್ಕು ವರ್ಷಗಳ ಕಾಲ ಆಕೆ ಮಾಡಿದ ಉತ್ತಮ ಕಾರ್ಯಕ್ಕೆ ಭಾರತೀಯ ಜನತಾ ಪಕ್ಷವು ಅತ್ಯುತ್ತಮ ಕಾರ್ಯಕರ್ತೆ ಎಂದು ಮನ್ನಣೆ ನೀಡಿತಲ್ಲದೆ, ಸದನವು 2007 ರಲ್ಲಿ ಆಕೆಯ ಸೇವೆಯನ್ನು ಗುರುತಿಸಿ ಅತ್ಯುತ್ತಮ ಶಾಸಕಿ ಎಂದು ಪರಿಗಣಿಸಿ ನೀಲಕಂಠ ಪ್ರಶಸ್ತಿಯನ್ನು ಪ್ರದಾನ ಮಾಡಿತು.

ಈ ಮಧ್ಯೆ ಒಡಿಶಾ ರಾಜ್ಯದಲ್ಲಿ ನವೀನ್ ಪಾಟ್ನಾಯಕ್ ನೇತೃತ್ವದ ಬಿಜು ಜನತಾ ದಳ ಮತ್ತು ಭಾರತೀಯ ಜನತಾ ಪಕ್ಷದ ಸಮ್ಮಿಶ್ರ ಸರ್ಕಾರದಲ್ಲಿ 2000 ನೇ ಇಸವಿಯ ಮಾರ್ಚ್ 6 ರಿಂದ ವರೆಗೆ 2002 ರ ಆಗಸ್ಟ್ 6 ವಾಣಿಜ್ಯ ಮತ್ತು ಸಾರಿಗೆ ಖಾತೆಯ ರಾಜ್ಯ ಸಚಿವರಾಗಿ ಹಾಗೂ 2002 ರ ಆಗಸ್ಟ್ 6 ರಿಂದ 2004 ರ ಮೇ 16 ರ ವರೆಗೆ ಮೀನುಗಾರಿಕಾ ಮತ್ತು ಪಶು ಸಂಪನ್ಮೂಲ ಅಭಿವೃದ್ಧಿ ಖಾತೆಯ ರಾಜ್ಯ ಸಚಿವರಾಗಿ ದ್ರೌಪದಿ ಅವರು ಸ್ವತಂತ್ರ ಪ್ರಭಾರದದಲ್ಲಿ ಕಾರ್ಯ ನಿರ್ವಹಿಸಿದ್ದಾರೆ.

ಅಲ್ಲದೆ, ದ್ರೌಪದಿ ಅವರು 2015 ರ ಮೇ 18 ರಿಂದ 2021 ರ ಜುಲೈ 12 ರ ವರೆಗೆ ಜಾರ್ಖಂಡ್ ರಾಜ್ಯದ ರಾಜ್ಯಪಾಲರಾಗಿ ಸೇವೆ ಸಲ್ಲಿಸಿದ್ದಾರೆ. ಜಾರ್ಖಂಡ್ ರಾಜ್ಯದ ಪ್ರಪ್ರಥಮ ಮಹಿಳಾ ರಾಜ್ಯಪಾಲರು ಹಾಗೂ ಪ್ರಪ್ರಥಮ ಆದಿವಾಸಿ ರಾಜ್ಯಪಾಲರು ಎಂಬ ಹೆಗ್ಗಳಿಕೆಯೂ ದ್ರೌಪದಿ ಅವರದ್ದಾಗಿದೆ.

2000 ನೇ ಇಸವಿ ಮತ್ತು 2004 ರಲ್ಲಿ ನಡೆದ ರಾಜ್ಯ ವಿಧಾನ ಸಭೆಯ



ಚುನಾವಣೆಗಳಲ್ಲಿ ಸ್ಪರ್ಧಿಸಿ ಸತತವಾಗಿ ಗೆಲುವು ಕಂಡ ದ್ರೌಪದಿ ಮುರ್ಮು ಅವರು 2009 ನೇ ಇಸವಿ ಮತ್ತು 2014 ರಲ್ಲಿ ನಡೆದ ರಾಜ್ಯ ವಿಧಾನ ಸಭೆಯ ಚುನಾವಣೆಗಳಲ್ಲಿ ಸ್ಪರ್ಧಿಸಿ ಸತತವಾಗಿ ಸೋಲನ್ನು ಅನುಭವಿಸಿದರು.

ದ್ರೌಪದಿ ಮುರ್ಮು ಅವರ ವೈಯುಕ್ತಿಕ ಬದುಕಿನಲ್ಲಿ 2009 ರಿಂದ 2015 ರವರೆಗೆ ಎಷ್ಟು ಕ್ರೂರವಾಗಿತ್ತೆಂದರೆ ಅವರ ಇಬ್ಬರು ಗಂಡು ಮಕ್ಕಳು, ಬ್ಯಾಂಕ್ ಉದ್ಯೋಗಿಯಾಗಿದ್ದ ಪತಿ ಶ್ಯಾಮ್ ಚರಣ್ ಮುರ್ಮು, ತಾಯಿ ಮತ್ತು ಸಹೋದರ ಎಲ್ಲರೂ ಸಾವನ್ನಪ್ಪಿ, ದುರ್ವಿಧಿ ದ್ರೌಪದಿ ಅವರನ್ನು ಅಕ್ಷರಷಃ ಶೋಕ ಸಾಗರಕ್ಕೆ ದೂಡಿತ್ತು. ಆದರೂ, ಧೃತಿಗೆಡೆದ ಆಕೆ ಪೂರ್ಣ ಪ್ರಮಾಣದಲ್ಲಿ ಆಧ್ಯಾತ್ಮ ಲೋಕಕ್ಕೆ ಜಾರಿ, ತಾನು ನಂಬಿದ ಪರಮೇಶ್ವರನನ್ನು ಪ್ರಾರ್ಥಿಸುತ್ತಾ, ತಮ್ಮನ್ನು ತಾವು ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡರು. ಸಮಸ್ಯೆಹೇಳಿ ಕೊಳ್ಳಲು ಬಂದ ಯಾರಿಗೇ ಆಗಲಿ, ದ್ರೌಪದಿ ಅವರ ಮನೆಯ ಬಾಗಿಲು ಸದಾ ತೆರೆದಿರುತ್ತಿತ್ತು ಎಂಬುದು ಅಚ್ಚರಿಯ ಸಂಗತಿ.

ಅಷ್ಟೇ ಅಲ್ಲ ! ದ್ರೌಪದಿ ಮುರ್ಮು ಅವರು ಬ್ಯಾಂಕ್ ಉದ್ಯೋಗಿಯಾಗಿರುವ ತಮ್ಮ ಏಕೈಕ ಪುತ್ರಿ ಇತಿಶ್ರೀ ಮುರ್ಮು ಅವರಲ್ಲಿಯೇ ತಮ್ಮೆಲ್ಲಾ ಕುಟುಂಬ ಸದಸ್ಯರನ್ನು ಕಂಡು ಜೀವನ ಸಾಗಿಸುತ್ತಿದ್ದಾರೆ.

ಕಷ್ಟಗಳ ಹಾದಿಯಲ್ಲೇ ದಿಟ್ಟವಾಗಿ ಮುನ್ನಡೆದು ಮೇರು ಸ್ಥಾನವನ್ನೇರಿರುವ ದ್ರೌಪದಿ ಮುರ್ಮು ಅವರು ರಾಷ್ಟ್ರಪತಿಯಾಗಿ ಕೇವಲ ಸಂತಾಲ್ ಸಮುದಾಯಕ್ಕೆ ಮಾತ್ರವಲ್ಲ, ಬುಡಕಟ್ಟು ಜನಾಂಗಕ್ಕೆ ಮಾತ್ರವಲ್ಲ, ಮಹಿಳೆಯರಿಗೆ ಮಾತ್ರವಲ್ಲ, ಪುರುಷರನ್ನೊಳಗೊಂಡಂತೆ ಇಡೀ ಸಮಾಜಕ್ಕೇ, ಇಡೀ ಭಾರತ ದೇಶಕ್ಕೇ, ಇಡೀ ವಿಶ್ವಕ್ಕೇ ಸ್ಫೂರ್ತಿಯ ಸೆಲೆಯಾಗಿ ಪ್ರೇರಣೆಯ ನೆಲೆಯಾಗಲಿದ್ದಾರೆ. ಅಲ್ಲವೇ ?



Downloaded From:www.kpscvaani.com




## ಸುಂದರ, ಸ್ವಚ್ಛ, ಸಮೃದ್ಧ

# ಬೆಂಗಳೂರು ನಗರ ನಿರ್ಮಾಣಕ್ಕೆ ಪಣ

**ಎಲ್ಲಾ ಕ್ಷೇತ್ರದಲ್ಲೂ ವೇಗವಾಗಿ ಬೆಳೆಯುತ್ತಿರುವ ರಾಜಧಾನಿ ಬೆಂಗಳೂರು ನಗರವನ್ನು ಮತ್ತಷ್ಟು ಸುಂದರ, ಸ್ವಚ್ಛ ಮತ್ತು ಸಮೃದ್ಧಗೊಳಿಸುವ ನಿಟ್ಟಿನಲ್ಲಿ ಎಲ್ಲಾ ಮೂಲಸೌಕರ್ಯಗಳನ್ನು ಒದಗಿಸಲು ಸರ್ಕಾರ ಪಣತೊಟ್ಟಿದೆ.**

ಬಿ.ಎಸ್.ಪಲ್ಲವಿ

**ಬೆಂ**ಗಳೂರು ನಗರ ಯಾವುದೇ ನಿಯಂತ್ರಣವಿಲ್ಲದೇ ಬೆಳೆಯುತ್ತಿದೆ. ಇಲ್ಲಿನ ಹವಾಗುಣ, ತಂತ್ರಜ್ಞಾನ, ಇಲ್ಲಿ ದೊರೆಯುವ ಅವಕಾಶಗಳು ಅನನ್ಯ. ಉದ್ಯೋಗ ಸೃಷ್ಟಿಯಲ್ಲಿ ಬೆಂಗಳೂರು ದೇಶದಲ್ಲೆ ನಂಬರ್ ಒನ್ ಸ್ಥಾನದಲ್ಲಿದೆ ಎಂದು ಇತ್ತೀಚೆಗೆ ರಾಂಡ್ ಸ್ಟಡ್ ಇಂಡಿಯಾ ಸಂಸ್ಥೆ ನಡೆಸಿದ ಸಮೀಕ್ಷಾ ವರದಿ ತಿಳಿಸಿದೆ. ಐಟಿ ಉದ್ಯೋಗಿಗಳಿಗೆ ಬೇಡಿಕೆ ಸೃಷ್ಟಿಯಾಗಿದ್ದು, ಹೊಸಬರು ಮತ್ತು ಅನುಭವಿಗಳಿಗೆ ಬೇಡಿಕೆ ವೃದ್ಧಿಸಿದೆ. ಬೆಂಗಳೂರು ನವೋದ್ಯಮವಷ್ಟೇ ಅಲ್ಲ ತಂತ್ರಜ್ಞಾನದ ರಾಜಧಾನಿಯೂ ಹೌದು.

ಜಗತ್ತಿನ ಅತ್ಯುನ್ನತ ದೈತ್ಯ ಐಟಿ–ಬಿಟಿ ಸಂಸ್ಥೆಗಳು, ಸಂಶೋಧನೆ, ನಾವಿನ್ಯತೆಗೆ ಹೆಸರಾದ ಇಸ್ರೋ, ಎಚ್.ಎ.ಎಲ್, ಎನ್.ಎ.ಎಲ್, ಬಿಇಎಲ್, ಬಿ.ಎಚ್.ಇ.ಎಲ್ ಸೇರಿದಂತೆ ಹಲವಾರು ರಕ್ಷಣಾ ವಲಯಕ್ಕೆ ಸಂಬಂಧಿಸಿದ ಸಂಸ್ಥೆಗಳು ಜಾಗತಿಕ ಮನ್ನಣೆ ಪಡೆದಿವೆ. ಭಾರತೀಯ ವಾಯುಪಡೆಯ ಯಲಹಂಕದ ವಾಯುನೆಲೆ, ಭಾರತೀಯ ವಿಜ್ಞಾನ ಮಂದಿರ ನಮ್ಮ ಹೆಮ್ಮೆ, ಹೆಸರಘಟ್ಟದ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ, ಕೃಷಿ, ಪಶು ಸಂಗೋಪನೆ, ಆರೋಗ್ಯ ವಲಯ ಹೀಗೆ ನಮ್ಮಲ್ಲಿರುವ ಸಂಸ್ಥೆಗಳ ಪಟ್ಟಿ ಬೆಳೆಯುತ್ತದೆ. ಹೀಗಾಗಿ ಇಡೀ ಜಗತ್ತು ಇಂದು ಬೆಂಗಳೂರಿನತ್ತ ತಿರುಗಿದೆ. ಇಲ್ಲಿ ಒಂದು ಸಣ್ಣ ಸಮಸ್ಯೆಯಾದರೂ ಕ್ಷಣಾರ್ಧದಲ್ಲಿ ಜಾಗತಿಕ ಸುದ್ದಿಯಾಗುತ್ತದೆ. ಹೀಗಾಗಿ ಈ ನಗರದ ಅಭಿವೃದ್ಧಿ ಎಲ್ಲಕ್ಕಿಂತ ಮುಖ್ಯ.


Downloaded From:www.kpscvaani.com



ಇಂತಹ ವಿಶೇಷ ನಗರದ ಹೃದಯಭಾಗದಲ್ಲಿ ಮೆಟ್ರೋ ರೈಲು, ರೈಲು, ಬಸ್ ನಿಲ್ದಾಣ, ಇಲ್ಲಿಂದ 35 ಕಿಲೋಮೀಟರ್ ದೂರದಲ್ಲಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವಿದೆ. ಏಷ್ಯಾದ ಯಾವುದೇ ನಗರದಲ್ಲೂ ಇಂತಹ ಸಮಗ್ರ ಸಾರಿಗೆ ಸಂಪರ್ಕ ವ್ಯವಸ್ಥೆ ಒಂದೇ ಕಡೆ ಸಿಗುವುದು ಅಪರೂಪ. ಇಷ್ಟಾದರೂ ಇಲ್ಲಿ ಸಂಚಾರಿ ಒತ್ತಡದ ಸಮಸ್ಯೆ ಸಂಪೂರ್ಣವಾಗಿ ಬಗೆಹರಿದಿಲ್ಲ. ಇದಕ್ಕಾಗಿ ಪ್ರಯತ್ನಗಳು ತೀವ್ರಗತಿಯಲ್ಲಿ ಸಾಗಿವೆ.

ಆಧುನಿಕ ಸಮಾಜದಲ್ಲಿ ನಮ್ಮ ಗ್ರಹಿಕೆ ಮತ್ತು ದೃಷ್ಟಿಕೋನದಲ್ಲಿ ಭಾರೀ ಬದಲಾವಣೆಗಳಾಗುತ್ತಿವೆ. ಕೇಂದ್ರದ ಪಿಎಂ ಗತಿಶಕ್ತಿ ಯೋಜನೆ ದೇಶದ ಸಾಗಣೆ ವ್ಯವಸ್ಥೆಯನ್ನು ಸಮಗ್ರವಾಗಿ ಒಗ್ಗೂಡಿಸುವ ಕೆಲಸ ಮಾಡುತ್ತಿದೆ. ಕೃಷಿ ನಂತರ ಅತಿ ಹೆಚ್ಚು ಮಂದಿ ಅಂದರೆ ದೇಶದ ಎರಡು ಕೋಟಿಗೂ ಹೆಚ್ಚು ಜನ ಸಾರಿಗೆ, ಸಾಗಣೆ ಕ್ಷೇತ್ರದಲ್ಲಿ ತೊಡಗಿಕೊಂಡಿದ್ದಾರೆ. ಇದೇ ದೃಷ್ಟಿಯಿಂದ ಪ್ರಧಾನಿ ನರೇಂದ್ರ ಮೋದಿ ಜೂನ್ 20 ರಂದು ಬೆಂಗಳೂರಿಗೆ ಭೇಟಿ ನೀಡಿದ್ದಾಗ ಬೆಂಗಳೂರು ಒಳಗೊಂಡಂತೆ ಹಲವು ರೈಲು ಹಾಗೂ ಮೂಲ ಸೌಕರ್ಯ ಯೋಜನೆಗಳಿಗೆ ಶಿಲಾನ್ಯಾಸ ನೆರವೇರಿಸಿದರು ಹಾಗೂ ಉದ್ಘಾಟಿಸಿದರು. ಈ ಕಾರ್ಯಕ್ರಮಗಳು ಬರುವ ದಿನಗಳಲ್ಲಿ ಬೆಂಗಳೂರಿನ ಚಹರೆಯನ್ನು ಸಾಕಷ್ಟು ಮಟ್ಟಿಗೆ ಬದಲಾಯಿಸಲಿದೆ. ಪ್ರಧಾನಿ ನರೇಂದ್ರ ಮೋದಿ ಉಪನಗರ ರೈಲು ಯೋಜನೆಗೆ ಶಂಕು ಸ್ಥಾಪನೆ ನೆರವೇರಿಸಿದ್ದು, ಭೂ ಸ್ವಾಧೀನ ಸೇರಿದಂತೆ 970.87 ಕೋಟಿ ರೂ ವೆಚ್ಚದಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳಲಾಗುತ್ತಿದೆ. ಬೆಂಗಳೂರಿನ ರೈಲು ನಿಲ್ದಾಣಗಳು ಅಂತಾರಾಷ್ಟ್ರೀಯ ಮಟ್ಟಕ್ಕೆ ರೂಪುಗೊಳ್ಳುತ್ತಿರುವುದು ಮತ್ತೊಂದು ವಿಶೇಷವಾಗಿದೆ.

ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ಮತ್ತು ಮಹಾನಗರ ವ್ಯಾಪ್ತಿಯಲ್ಲಿ ಉಪನಗರ ವರ್ತುಲ ರಸ್ತೆ ನಿರ್ಮಾಣಕ್ಕೆ ಸರ್ಕಾರ ಕ್ರಮ ಕೈಗೊಂಡಿದ್ದು, ಇದು ಒಟ್ಟು 204 ಕಿಲೋಮೀಟರ್ ಉದ್ದದ ರಸ್ತೆಯಾಗಿದೆ. ಡಾಬಸ್ ಪೇಟೆ, ದೊಡ್ಡಬಳ್ಳಾಪುರ, ದೇವನಹಳ್ಳಿ, ಸೂಲಿಬೆಲೆ, ಸರ್ಜಾಪುರ, ಅತ್ತಿಬೆಲೆ, ಆನೇಕಲ್, ತಟ್ಟೆಕೆರೆ, ಕನಕಪುರ, ರಾಮನಗರವನ್ನು ಈ ಉದ್ದೇಶಿತ ಮಾರ್ಗ ಸಂಪರ್ಕಿಸುತ್ತದೆ. ಪ್ರತ್ಯೇಕ ನಗರ ವರ್ತುಲ ರಸ್ತೆ ಒಟ್ಟು 163 ಕಿಲೋಮೀಟರ್ ಇದ್ದು, ಕನಕಪುರ, ಮಾಗಡಿ, ನೆಲಮಂಗಲ, ದೊಡ್ಡಬಳ್ಳಾಪುರ, ದೇವನಹಳ್ಳಿ, ಹೊಸಕೋಟೆ ಮತ್ತು ಆನೇಕಲ್ ಪಟ್ಟಣಗಳಿಗೆ ಬೈಪಾಸ್ ರಸ್ತೆಗಳ ಮೂಲಕ ಸಂಪರ್ಕ ಕಲ್ಪಿಸುತ್ತದೆ. ಈ ಯೋಜನೆ ಜಾರಿಯಾದರೆ ಬೆಂಗಳೂರು ಬೃಹತ್ ನಗರವಾಗಿ ರೂಪುಗೊಳ್ಳಲಿದ್ದು, ಜಾಗತಿಕವಾಗಿ ಬೆಂಗಳೂರಿಗೆ ಮತ್ತಷ್ಟು ಮೆರಗು ಬರಲಿದೆ.

ಬೆಂಗಳೂರು ನಗರದ ಸಂಚಾರಿ ದಟ್ಟಣೆ ತಗ್ಗಿಸುವಲ್ಲಿ ನಮ್ಮ ಮೆಟ್ರೋ ಮಹತ್ವದ ಪಾತ್ರ ವಹಿಸುತ್ತಿದೆ. 1.25 ಕೋಟಿ ಜನ ಸಂಖ್ಯೆಯ ಬೆಂಗಳೂರಿನಲ್ಲಿ 4.50 ಲಕ್ಷಕ್ಕೂ ಅಧಿಕ ಮಂದಿ ಮೆಟ್ರೋದಲ್ಲಿ ಪ್ರತಿನಿತ್ಯ ಪ್ರಯಾಣಿಸುತ್ತಿದ್ದು, ಇದರಿಂದ ರಸ್ತೆಗೆ ಇಳಿಯುವ ಲಕ್ಷಾಂತರ ವಾಹನಗಳ ಸಂಖ್ಯೆ ತಗ್ಗಿದೆ. ಮಾಲಿನ್ಯ ಮಟ್ಟವೂ ಕಡಿಮೆಯಾಗಿದೆ. ಬೆಂಗಳೂರು ಮೆಟ್ರೋದ ಎರಡನೇ ಹಂತದಲ್ಲಿ ನಾಲ್ಕು ವಿಸ್ತರಣೆ ಮತ್ತು ಎರಡು ಹೊಸ ಮಾರ್ಗಗಳಿವೆ. 30,695 ಕೋಟಿ ರೂ ಮೊತ್ತದ ಯೋಜನೆಯಡಿ ಶೇ 68.5 ರಷ್ಟು ಕಾಮಗಾರಿ ಆಗಲೇ ಪೂರ್ಣಗೊಂಡಿದೆ. ಎಲ್ಲಾ ಕೆಲಸವನ್ನು 2025 ರೊಳಗೆ ಮುಗಿಸಿ ನಗರದ ಸಂಚಾರ ವ್ಯವಸ್ಥೆಯಲ್ಲಿ ಗಮನಾರ್ಹ ಸುಧಾರಣೆ ತರಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರ ಕಾರ್ಯೋನ್ಮುಖವಾಗಿದೆ.

ಬೆಂಗಳೂರಿನಂತಹ ಬೃಹತ್ ನಗರಕ್ಕೆ ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಅತ್ಯಂತ ವ್ಯವಸ್ಥಿತವಾಗಿ ಕುಡಿಯುವ ನೀರು ಪೂರೈಕೆ ಮಾಡುತ್ತಿದೆ. ನೂರು ಕಿಲೋಮೀಟರ್ ದೂರದ ಕೆ.ಆರ್.ಎಸ್‌ನಿಂದ ನೀರು ಪೂರೈಕೆ ಮಾಡುತ್ತಿದ್ದು, ದೇಶದ ಬೇರೆ ಯಾವುದೇ ನಗರದಲ್ಲೂ ಇಂತಹ ಸುಸಜ್ಜಿತ ನೀರು ಸರಬರಾಜು ಸಂಸ್ಥೆ ಮತ್ತೊಂದಿಲ್ಲ. ಬಹುತೇಕ ನಗರಗಳಲ್ಲಿ ಗುರುತ್ವಾಕರ್ಷಣೆ ಶಕ್ತಿ ಮೂಲಕ ನೀರು ಪೂರೈಕೆ ಮಾಡಿದರೆ ಬೆಂಗಳೂರಿನಲ್ಲಿ ವಿದ್ಯುತ್ ಶಕ್ತಿ ಮೂಲಕ ನೀರನ್ನು ಮೇಲೆತ್ತಿ ಪೂರೈಸಲಾಗುತ್ತಿದೆ.

ಇನ್ನೊಂದು ವಿಶೇಷವೆಂದರೆ ಇಡೀ ದೇಶದಲ್ಲಿಯೇ ದಾಖಲೆ ಪ್ರಮಾಣದಲ್ಲಿ ತ್ಯಾಜ್ಯ ನೀರು ಸಂಸ್ಕರಿಸಿ, ಬೆಂಗಳೂರಿನ

### ಮುಖ್ಯಮಂತ್ರಿಗಳ ನಗರೋತ್ಥಾನ ಯೋಜನೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ 6 ಸಾವಿರ ಕೋಟಿ ರೂ ಅನುದಾನವನ್ನು ಮುಖ್ಯಮಂತ್ರಿಗಳ ನಗರೋತ್ಥಾನ ಯೋಜನೆಯಡಿ ಒದಗಿಸಲು ಸರ್ಕಾರವು ಉದ್ದೇಶಿಸಿದ್ದು, ವಿಸ್ತೃತ ಯೋಜನಾ ವರದಿ ತಯಾರಿಕೆಯು ಅಂತಿಮ ಹಂತದಲ್ಲಿದ್ದು, ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಟೆಂಡರ್ ಪ್ರಕ್ರಿಯೆಯನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.


Downloaded From:www.kpscvaani.com



ಪಾರ್ಕ್‌ಗಳು ಮತ್ತು ಆಸುಪಾಸಿನ ಜಿಲ್ಲೆಗಳ ಕೆರೆಗಳನ್ನು ತುಂಬಿಸಲಾಗುತ್ತಿದೆ. ಬಿ.ಡಬ್ಲ್ಯೂ.ಎಸ್.ಎಸ್.ಬಿ ಇದೀಗ ಪ್ರತಿವರ್ಷ 1308 ಎಂ.ಎಲ್.ಡಿ ನೀರನ್ನು ಸಂಸ್ಕರಿಸುತ್ತಿದೆ ಎಂದರೆ ಅಚ್ಚರಿಯಾಗುತ್ತದೆ. ಬೆಂಗಳೂರಿನ 10.55 ಲಕ್ಷ ಮನೆಗಳಿಗೆ 1450 ಎಂ.ಎಲ್.ಡಿ ಕಾವೇರಿ ನೀರು ಪೂರೈಸುತ್ತಿದ್ದು, ಸರಿ ಸುಮಾರು ಇಷ್ಟೇ ಪ್ರಮಾಣದ ತ್ಯಾಜ್ಯ ನೀರನ್ನು ಸಂಸ್ಕರಣೆ ಮಾಡಿ ಸದ್ಬಳಕೆ ಮಾಡಿಕೊಳ್ಳುವ ಮೂಲಕ ದಾಖಲೆ ನಿರ್ಮಿಸಿದೆ. ನೀರಿನ ಸದುಪಯೋಗಕ್ಕೆ ಬಿ.ಡಬ್ಲ್ಯೂ.ಎಸ್.ಎಸ್.ಬಿ ಇತರೆ ನಗರಗಳಿಗೆ ಮಾದರಿ. ಇಲ್ಲಿ ಮರುಬಳಕೆಯಾಗುತ್ತಿರುವ ನೀರಿನ ಪ್ರಮಾಣ 750 ರಿಂದ 800 ಎಂ.ಎಲ್.ಡಿಯಷ್ಟಿದೆ. ಬೆಂಗಳೂರಿನಲ್ಲಿ ಪ್ರತಿ ವರ್ಷ 1500 ಎಂ.ಎಲ್.ಡಿ ತ್ಯಾಜ್ಯ ನೀರು ಉತ್ಪತ್ತಿಯಾಗುತ್ತಿದ್ದು, ಆರು ಸಂಸ್ಕರಣಾ ಕೇಂದ್ರಗಳಲ್ಲಿ ಇದನ್ನು ಶುದ್ಧೀಕರಿಸಲಾಗುತ್ತಿದೆ. ಸಂಸ್ಕರಿಸಿದ ನೀರನ್ನು ವಿಧಾನಸೌಧ, ರಾಜಭವನ, ಕಬ್ಬನ್ ಪಾರ್ಕ್‌ಗಳಲ್ಲಿ ತೋಟಗಳಿಗೆ ಹಾಗೂ ಇತರೆ ಉದ್ದೇಶಗಳಿಗೆ ಮರು ಬಳಕೆ ಮಾಡಲಾಗುತ್ತಿದೆ.

ಸಂಸ್ಕರಣಾ ಕೇಂದ್ರಗಳಿಂದ ನೀರನ್ನು ಬೆಂಗಳೂರು ಗ್ರಾಮಾಂತರ ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಗಳ ಕೆರೆಗಳನ್ನು ತುಂಬಿಸಲಾಗುತ್ತಿದ್ದು, ಇದರಿಂದ ಕೆರೆಗಳ ಸುತ್ತಮುತ್ತ ಅಂತರ್ಜಲ ಕೂಡ ಹೆಚ್ಚಾಗುತ್ತಿದೆ. ಕೃಷಿ ಚಟುವಟಿಕೆ ಇದರಿಂದ ಹೆಚ್ಚಾಗಿರುವ ಜೊತೆಗೆ ವಿಶೇಷವಾಗಿ ಕೋಲಾರ ಜಿಲ್ಲೆ ಬರಪೀಡಿತ ಎನ್ನುವ ಹಣೆಪಟ್ಟಿಯಿಂದ ಹೊರ ಬರಲು ಈ ಬೆಳವಣಿಗೆ ಸಹಕಾರಿಯಾಗುತ್ತಿದೆ.

### ಗ್ರೀನ್ ಎಕ್ಸಪೋ

ಬೆಂಗಳೂರಿನ ಹೃದಯ ಭಾಗದಲ್ಲಿರುವ ಎನ್.ಜಿ.ಇ.ಎಫ್ ನ 105 ಎಕರೆ ಪ್ರದೇಶದಲ್ಲಿ ಸಾರ್ವಜನಿಕರಲ್ಲಿ ಸುಸ್ಥಿರ ಜೀವನ ಶೈಲಿಯ ಅರಿವನ್ನು ಸೃಷ್ಟಿ ಮಾಡುವ ಸಲುವಾಗಿ ಸಿಂಗಾಪುರ್ ಮಾದರಿಯಲ್ಲಿ ಗ್ರೀನ್ ಎಕ್ಸ್‌ಪೋ ಅನ್ನು ನಿರ್ಮಿಸಲು ಸರ್ಕಾರವು ಉದ್ದೇಶಿಸಿದೆ. ಈ ಗ್ರೀನ್ ಎಕ್ಸ್‌ಪೋ ಮೂಲಕ ಪರಿಸರ ಸ್ನೇಹಿ ತಂತ್ರಜ್ಞಾನ, ಪರಿಸರ ಸ್ನೇಹಿ ಸಾರಿಗೆ, ಹಸಿರು ಮೂಲಸೌಕರ್ಯ, ಹಸಿರು ನವೋದ್ಯಮ ಮುಂತಾದವುಗಳ ಪ್ರಾತ್ಯಕ್ಷಿಕೆಯನ್ನು ಸಾರ್ವಜನಿಕರಿಗೆ ನೀಡಲಾಗುವುದು.

ವಿಶೇಷ ಎಂದರೆ ಇದೀಗ ವಸತಿ ಸಮುಚ್ಚಯಗಳಲ್ಲೂ ಸಹ ಕನಿಷ್ಠ ಶೇ 10 ರಷ್ಟು ಶುದ್ಧೀಕರಿಸಿದ ನೀರನ್ನು ಕುಡಿಯುವ ಉದ್ದೇಶ ಹೊರತುಪಡಿಸಿ ಬೇರೆ ಕೆಲಸಗಳಿಗೆ ಬಳಸಲು ನಿಯಮ ರೂಪಿಸಲಾಗಿದೆ. ವಸತಿ ಸಮುಚ್ಚಯಗಳಲ್ಲಿ ತ್ಯಾಜ್ಯ ನೀರು ಸಂಸ್ಕರಣೆ ಮಾಡುವುದನ್ನು ಬಿ.ಡಬ್ಲ್ಯೂ.ಎಸ್.ಎಸ್.ಬಿ ಕಡ್ಡಾಯಗೊಳಿಸಿದೆ. ಬಿಬಿಎಂಪಿಗೆ ಸೇರ್ಪಡೆಯಾದ 110 ಗ್ರಾಮಗಳು ಒಳಗೊಂಡಂತೆ ಕಾವೇರಿ 5 ನೇ ಹಂತದ ಕುಡಿಯುವ ನೀರು ಯೋಜನೆಗೆ 5550 ಕೋಟಿ ರೂ ನಿಗದಿಮಾಡಲಾಗಿದ್ದು, ಈ ಯೋಜನೆ ಪೂರ್ಣಗೊಂಡರೆ ಪ್ರತಿದಿನ 775 ದಶಲಕ್ಷ ಲೀಟರ್ ಹೆಚ್ಚುವರಿ ನೀರು ದೊರೆಯಲಿದ್ದು, 2023 ರ ಮಾರ್ಚ್‌ಗೆ ಪೂರ್ಣಗೊಳ್ಳುವ ಈ ಯೋಜನೆಯಿಂದ ಮುಂದಿನ 2035 ರ ವರೆಗೆ ನಗರದಲ್ಲಿ ನೀರಿಗೆ ಸಮಸ್ಯೆ ಎದುರಾಗುವುದಿಲ್ಲ.

ಎತ್ತಿನ ಹೊಳೆ ಯೋಜನೆಯಿಂದ ಬೆಂಗಳೂರಿಗೆ 2.5 ಟಿಎಂಸಿ ನೀರು ದೊರೆಯಲಿದ್ದು, 1.7 ಟಿ.ಎಂ.ಸಿ ತಿಪ್ಪಗೊಂಡನಹಳ್ಳಿ ಮತ್ತು 0.8 ಟಿ.ಎಂ.ಸಿ ಹೆಸರಘಟ್ಟ ಜಲಾಶಯಕ್ಕೆ ಹರಿಸಲಾಗುತ್ತದೆ. ಬೆಂಗಳೂರಿಗೆ ತಿಪ್ಪಗೊಂಡನ ಹಳ್ಳಿಯಿಂದ ನೀರು ಪೂರೈಸಲು ಜಲಾಶಯದ ಶುದ್ಧೀಕರಣ ಘಟಕಗಳ ಪುನಶ್ಚೇತನ ಕಾಮಗಾರಿಯೂ ಪ್ರಗತಿಯಲ್ಲಿದೆ. 1937 ರಲ್ಲಿ ಸ್ಥಾಪನೆಯಾದ ತಿಪ್ಪಗೊಂಡನ ಹಳ್ಳಿ ಜಲಾಗಾರದಿಂದ ಇತ್ತೀಚಿನ ಕೆಲ ದಶಕಗಳಿಂದ ನೀರು ಪೂರೈಕೆಯನ್ನು ಸ್ಥಗಿತಗೊಳಿಸಲಾಗಿತ್ತು. ಇದೀಗ ಜಲಾಶಯ ಜೀವಕಳೆ ತುಂಬಿಕೊಳ್ಳುತ್ತಿದೆ. ಇದು ನಗರಕ್ಕೆ ಭವಿಷ್ಯದಲ್ಲಿ ನೀರು ಪೂರೈಕೆ ಆತಂಕ ಕಡಿಮೆಮಾಡಿದೆ.

ಬೆಂಗಳೂರಿನಲ್ಲಿ ಮೇಲ್ಸೇತುವೆ, ಮೂಲ ಸೌಕರ್ಯ ಅಭಿವೃದ್ಧಿ ಕಾಮಗಾರಿ ಪ್ರಗತಿಯಲ್ಲಿದೆ. ಪಶ್ಚಿಮ ಕಾರ್ಡ್ ರಸ್ತೆಯ ಶಿವನಗರ ಜಂಕ್ಷನ್ ಮೇಲ್ಸೇತುವೆ ಸಾರ್ವಜನಿಕ ಸೇವೆಗೆ ಲಭ್ಯವಾಗಿದೆ. 72 ನೇ ಅಡ್ಡ ರಸ್ತೆಯ ಗ್ರೇಡ್ ಸಪರೇಟರ್ ನಿರ್ಮಾಣ ಕಾಮಗಾರಿ ಶೇ 80 ರಷ್ಟು ಪೂರ್ಣಗೊಂಡಿದೆ. ಓಕಳಿಪುರಂ ಜಂಕ್ಷನ್‌ನ 8 ಪಥದ ಯೋಜನೆ, ಶಿವಾನಂದ ವೃತ್ತದ ಜಂಕ್ಷನ್‌ನ ಮೇಲ್ಸೇತುವೆ ಕ್ರಮವಾಗಿ ಇದೇ ಸೆಪ್ಟೆಂಬರ್ ಮತ್ತು ಆಗಸ್ಟ್‌ನಲ್ಲಿ ಸಾರ್ವಜನಿಕರ ಬಳಕೆಗೆ ದೊರೆಯಲಿದೆ. ವಿಮಾನ ನಿಲ್ದಾಣ ರಸ್ತೆಯ ಕುಂದಲಹಳ್ಳಿ ಕೆಳಸೇತುವೆ ಯಾವುದೇ ಸಂದರ್ಭದಲ್ಲಿ ಲೋಕಾರ್ಪಣೆಯಾಗಲಿದೆ. ಒಂದು ವರ್ಷದಲ್ಲಿ 45 ಕಿಲೋಮೀಟರ್ ಉದ್ದದ ವೈಟ್ ಟ್ಯಾಪಿಂಗ್ ಕಾಮಗಾರಿ ಮುಗಿದಿದ್ದು, ಬೆಂಗಳೂರು ಹೃದಯ ಭಾಗದ ಕೆಲ ರಸ್ತೆಗಳನ್ನು ತ್ವರಿತವಾಗಿ ಪೂರ್ಣಗೊಳಿಸಿರುವುದು ವಿಶೇಷವಾಗಿದೆ.

ಹೊರ ವರ್ತುಲ ರಸ್ತೆ, ಬಿನ್ನಿಮಿಲ್, ಗಾಂಧಿ ಬಜಾರ್ ರಸ್ತೆ, ಇಂದಿರಾನಗರದ 100 ಅಡಿ ರಸ್ತೆ ಇದೇ ಆಗಸ್ಟ್ ಕೊನೆಗೆ ಪೂರ್ಣಗೊಳ್ಳಲಿದೆ. ಮುಖ್ಯಮಂತ್ರಿಗಳ ನಗರೋತ್ಥಾನ ಯೋಜನೆಯಡಿ 40 ಕಿಲೋಮೀಟರ್ ಉದ್ದ ಮಾರ್ಗ, ದ್ವಿತೀಯ ಹಂತದ ರಾಜಕಾಲುವೆ ನಿರ್ಮಾಣ ಮತ್ತು ಮರು ನಿರ್ಮಾಣ ಕಾಮಗಾರಿ ಪೂರ್ಣಗೊಳಿಸಲಾಗಿದೆ. ಬಿಬಿಎಂಪಿಯಿಂದ



Downloaded From:www.kpscvaani.com



36 ಕೋಟಿ ರೂ ಅನುದಾನದಲ್ಲಿ 440 ಕಿಲೋಮೀಟರ್ ಉದ್ದದ ಪ್ರಥಮ ಮತ್ತು ದ್ವಿತೀಯ ಹಂತದ ಮಳೆ ನೀರು ಕಾಲುವೆಗಳ ಹೂಳೆತ್ತುವ ಕಾಮಗಾರಿ ಪೂರ್ಣಗೊಂಡಿದೆ. ಕೆ.ಆರ್. ಮಾರುಕಟ್ಟೆಯಿಂದ ಬೆಳ್ಳಂದೂರುವರೆಗೆ ರಾಜಕಾಲುವೆಗಳನ್ನು ಸೌಂದರ್ಯಗೊಳಿಸುವ ಕಾಮಗಾರಿಯೂ ಪ್ರಗತಿಯಲ್ಲಿದೆ.

ನಾವೀಗ ಅಮೃತ ಕಾಲದಲ್ಲಿದ್ದೇವೆ.

**"ನಮ್ಮ ಕ್ಲಿನಿಕ್"**

ಬಡಜನರಿಗೆ ಅವರ ವಾರ್ಡ್‌ಗಳಲ್ಲಿಯೇ ಆರೋಗ್ಯ ಸೇವಾ ಸೌಲಭ್ಯ ನೀಡುವ ಸಲುವಾಗಿ ಬೆಂಗಳೂರಿನ 243 ವಾರ್ಡ್‌ಗಳಲ್ಲಿ 'ನಮ್ಮ ಕ್ಲೀನಿಕ್' ಅನ್ನು ಕೆಲವು ದಿನಗಳಲ್ಲಿ ಪ್ರಾರಂಭಿಸಲು ಕ್ರಮಕೈಗೊಳ್ಳಲಾಗಿದೆ.

ಸ್ವಾತಂತ್ರ್ಯದ 75 ನೇ ವರ್ಷದ ಸಂಭ್ರಮಾಚರಣೆಗೆ ಸಜ್ಜಾಗುತ್ತಿದ್ದೇವೆ. ಇದೇ ಸಂದರ್ಭದಲ್ಲಿ ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ ಯೋಜನೆಯಡಿ ಬಿಬಿಎಂಪಿಗೆ 6,000 ಕೋಟಿ ರೂ ಅನುದಾನ ಒದಗಿಸಲಾಗುತ್ತಿದ್ದು, ವಿಸ್ತೃತ ಯೋಜನಾ ವರದಿ ಅಂತಿಮ ಹಂತದಲ್ಲಿದೆ.

ಬೆಂಗಳೂರಿಗೆ ಬಂದು ಹೋಗುವವರ ಸಂಖ್ಯೆ ಹೆಚ್ಚು. ಜಗತ್ತಿನ ಎಲ್ಲಾ ಭಾಗಗಳಿಂದಲೂ ಇಲ್ಲಿಗೆ ಬರುತ್ತಾರೆ. ಹೀಗಾಗಿಯೇ ಕೋವಿಡ್ ಸೋಂಕಿನ ಆತಂಕ ತೀವ್ರವಾಗಿತ್ತು. ಸೋಂಕು, ಜಾಡು ಪತ್ತೆ, ಪ್ರತ್ಯೇಕಿಸುವ, ಚಿಕಿತ್ಸೆ ಮತ್ತಿತರ ಕ್ರಮಗಳನ್ನು ಅತ್ಯಂತ ವ್ಯವಸ್ಥಿತವಾಗಿ ಕೈಗೊಳ್ಳಲಾಗಿ, ನಗರದ ಜನರು ಈ ಆತಂಕಕಾರಿ ಹಂತವನ್ನು ದಾಟಿ ಬರಲು ಸಾಧ್ಯವಾಯಿತು. ಅತ್ಯಾಧುನಿಕ ತಂತ್ರಜ್ಞಾನ ಹೊಂದಿದ ಕೋವಿಡ್ ವಾರ್ ರೂಂ ಸ್ಥಾಪನೆ, ಪಾಲಿಕೆಯ 8 ವಲಯಗಳಲ್ಲಿ ವಿಶೇಷ ಕೇಂದ್ರಗಳ ಸ್ಥಾಪನೆ, ಅಗತ್ಯ ಮಾನವ ಸಂಪನ್ಮೂಲ, ತಂತ್ರಜ್ಞಾನ, ವಿಶೇಷವಾಗಿ ಸೋಂಕಿತರಿಗೆ ಹಾಸಿಗೆಗಳ ವ್ಯವಸ್ಥೆ ಮಾಡಲಾಗಿತ್ತು. ಪ್ರಕರಣಗಳು ತೀವ್ರಗೊಂಡ ಸಂದರ್ಭದಲ್ಲಿ 3000 ಹಾಸಿಗೆಗಳ ಸಾಮರ್ಥ್ಯವುಳ್ಳ 60 ಕೋವಿಡ್ ಕೇರ್ ಕೇಂದ್ರಗಳ ಸ್ಥಾಪನೆ ಮತ್ತಿತರ ರಚನಾತ್ಮಕ ಕ್ರಮಗಳ ಮೂಲಕ ಸೋಂಕು ನಿಯಂತ್ರಣಕ್ಕೆ ವ್ಯಾಪಕ ಕ್ರಮಗಳನ್ನು ಕೈಗೊಳ್ಳಲಾಗಿತ್ತು.



ಈಗ ಬೆಂಗಳೂರು ನಗರ ಕೂಡ ಕೋವಿಡ್ ಸಂಕಷ್ಟದಿಂದ ಹೊರಬಂದಿದೆ. ಎಲ್ಲಾ ವಲಯಗಳು ಮತ್ತೆ ಚೇತರಿಸಿಕೊಂಡಿವೆ. ಇಂತಹ ಸಂದಿಗ್ಧ ಸ್ಥಿತಿಯಲ್ಲಿ ಮತ್ತೆ ಜೀವನವನ್ನು ರೂಪಿಸಿಕೊಳ್ಳುವ ಸವಾಲನ್ನು ಅವಕಾಶವನ್ನಾಗಿ ಪರಿವರ್ತಿಸಿಕೊಳ್ಳಬೇಕಿದೆ. ಹಾಗಾಗಿ ಆರ್ಥಿಕ ಚಟುವಟಿಕೆಗಳು ನಗರದಲ್ಲಿ ಮತ್ತೆ ಗರಿಗೆದರಿವೆ. ವ್ಯಾಪಾರ ವಹಿವಾಟು ಮಾಮೂಲಿ ಸ್ಥಿತಿಗೆ ಬಂದಿವೆ. ಬೆಂಗಳೂರು ಮತ್ತೆ ಹಳಿಗೆ ಮರಳಿದೆ.

ಬೆಂಗಳೂರಿನಲ್ಲಿ ಸೂರು ಹೊಂದುವುದು ಬಹುದೊಡ್ಡ ಸವಾಲು ಮತ್ತು ತ್ರಾಸದಾಯಕವಾದದ್ದು. ಇದು ಜೀವಮಾನದ ಸಾಧನೆ. ಅನ್ನ, ಆಹಾರದ ನಂತರ ಪ್ರತಿಯೊಬ್ಬರಿಗೂ ಮನೆ ಅಗತ್ಯವಾಗಿ ಬೇಕಾಗಿದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಇಂತಹ ಅಸಂಖ್ಯಾತ ಜನರ ಕನಸನ್ನು ನನಸು ಮಾಡಿದೆ. ಡಾ.ಶಿವರಾಮ ಕಾರಂತ ಬಡಾವಣೆಯಲ್ಲಿ 24 ಸಾವಿರ ನಿವೇಶನಗಳ ಹಂಚಿಕೆಗೆ ಕ್ರಮ ವಹಿಸಲಾಗಿದೆ. ಕೆಂಪೇಗೌಡ ಬಡಾವಣೆಯಲ್ಲಿ 8680 ನಿವೇಶನಗಳನ್ನು ಹಂಚಿಕೆ ಮಾಡಿದ್ದು, ವಸತಿ ಸಮುಚ್ಚಯ ಮತ್ತು ಮನೆಗಳ ನಿರ್ಮಾಣಕ್ಕೆ ಒತ್ತು ನೀಡಲಾಗಿದೆ. ಬಿಬಿಎಂಪಿಯ ಆರು ಲಕ್ಷಕ್ಕೂ ಹೆಚ್ಚಿನ ಬಿ.ಖಾತಾ ಸ್ವತ್ತಿಗೆ ಎ ಖಾತೆ ಮಾಡಿ ಕೊಡಲು ಸರ್ಕಾರ ಕಾನೂನು ಕ್ರಮಕ್ಕೆ ಮುಂದಾಗಿದ್ದು, ನಗರದ ಜನರ ಬಹುದಿನಗಳ ಕನಸು ನನಸಾಗುತ್ತಿದೆ. ಬೆಂಗಳೂರು ಕೆರೆಗಳ ಆಶ್ರಯದಲ್ಲಿ ಬೆಳೆದ ನಗರ. ಈ ಹೆಸರಿಗೆ ತಕ್ಕಂತೆ ಕೆರೆಗಳ ಅಭಿವೃದ್ಧಿ, ಉದ್ಯಾನನಗರಿ ಎಂಬ ಹೆಸರಿಗೆ ತಕ್ಕಂತೆ ಹಸಿರು ಹೊದಿಕೆ ಹೆಚ್ಚಿಸಿ ನಗರದ ಸೌಂದರ್ಯ ವೃದ್ಧಿಗೂ ಸರ್ಕಾರ ಆದ್ಯತೆ ಕೊಡುತ್ತಿದೆ. ಒಟ್ಟಾರೆ ಸುಂದರ, ಸ್ವಚ್ಛ, ಸಮೃದ್ಧ ಬೆಂಗಳೂರು ನಿರ್ಮಾಣಕ್ಕೆ ಸರ್ಕಾರ ಕಾರ್ಯೋನ್ಮುಖವಾಗಿದೆ.



Downloaded From:www.kpscvaani.com



# ನಾಡು-ನುಡಿ, ಸಂಸ್ಕೃತಿ-ಪರಂಪರೆ, ಪ್ರಕೃತಿ ರಕ್ಷಣೆಗೆ ದಿಟ್ಟ ಹೆಜ್ಜೆ

**ಭಾಷೆ-ಸಂಸ್ಕೃತಿಯನ್ನು ಉತ್ತೇಜಿಸುವ, ಅದನ್ನು ರಾಜ್ಯ ಭಾಷೆಯಾಗಿ ಬೆಳೆಸುವ ಮಹತ್ವ ಪೂರ್ಣ ಕಾರ್ಯವನ್ನು ಕರ್ನಾಟಕ ಸರ್ಕಾರ ಮಾಡುತ್ತಿದೆ. ಒಂದು ನಾಡಿನ ಆಡಳಿತ ಅದರ ಸಂಸ್ಕೃತಿ, ಭಾಷೆಯ ಬೆಳವಣಿಗೆಯನ್ನು ಅವಲಂಬಿಸುತ್ತದೆ ಎಂಬ ಮಾತಿಗೆ ಕಟಿ ಬದ್ಧವಾಗಿ ಸರ್ಕಾರ ಕನ್ನಡ ನಾಡಿನ ಸಂಸ್ಕೃತಿ, ಭಾಷೆಯ ಸಂರಕ್ಷಣೆಯ ಜತೆಗೇ ರಾಜ್ಯದಲ್ಲಿ ಸಮೃದ್ಧವಾದ ಪ್ರಾಕೃತಿಕ ಸಂಪನ್ಮೂಲವನ್ನು ರಕ್ಷಿಸಿ ಬೆಳೆಸುವ, ಅದನ್ನು ಜತನವಾಗಿ ಕಾಪಾಡುವ ಮಹೋನ್ನತ ಕಾರ್ಯದಲ್ಲಿ ತೊಡಗಿಸಿಕೊಂಡಿದೆ.**

ಎಂ. ಚೇತನ್



ಕರ್ನಾಟಕದ ಪರಂಪರೆಯನ್ನೊಳಗೊಂಡ ಕನ್ನಡ ಭಾಷೆಗೆ, ಸಂಸ್ಕೃತಿಗೆ ಶತಮಾನಗಳ ಸುದೀರ್ಘ ಇತಿಹಾಸವಿದೆ. ಹಾಗೆ ನೋಡಿದರೆ ಕನ್ನಡ ಭಾಷೆಯಲ್ಲಿನ ವೈವಿಧ್ಯತೆ, ಸೊಗಡು ಮತ್ತೊಂದು ಭಾಷೆಯಲ್ಲಿ ಸಿಗುವುದು ಅಪರೂಪ.

ಇದಕ್ಕೆ ನೇರ ನಿದರ್ಶನ ಎಂದರೆ ಕರ್ನಾಟಕದ ನಾಡ ಹಬ್ಬ ಎಂದೇ ಹೆಸರಾದ ಕನ್ನಡಿಗರ ಸಂಭ್ರಮದ ದಸರಾ ಹಬ್ಬವನ್ನು ಈ ಬಾರಿ ಅತ್ಯಂತ ವೈಶಿಷ್ಟ್ಯ ಪೂರ್ಣವಾಗಿ ಆಚರಿಸಲು ಸರ್ಕಾರ ಮುಂಚಿತವಾಗೇ ತಯಾರಿ ಆರಂಭಿಸಿರುವುದು. ಈ ಬಾರಿಯ ಮೈಸೂರು ದಸರಾವನ್ನು ಹಿಂದೆಂದಿಗಿಂತ ಅದ್ದೂರಿಯಾಗಿ ವರ್ಣರಂಜಿತವಾಗಿ ಮತ್ತು ಅಷ್ಟೇ ಅರ್ಥಪೂರ್ಣವಾಗಿ ಆಚರಿಸಲು ರಾಜ್ಯ ಸರ್ಕಾರ ಎಲ್ಲ ಸಿದ್ಧತೆಗಳನ್ನು ಮಾಡಿಕೊಂಡಿದೆ.



Downloaded From:www.kpscvaani.com

ನಾಡು–ನುಡಿಯ ವಿಚಾರ ಬಂದಾಗ ಸರ್ಕಾರ ಧಾರಾಳತನ ಮೆರೆದಿದೆ. ಕನ್ನಡಿಗರ ಸಾಕ್ಷೀ ಪ್ರಜ್ಞೆಯ ಸಂಕೇತವಾದ ಕನ್ನಡ ಸಾಹಿತ್ಯ ಪರಿಷತ್ತಿಗೆ ನೆರವು ನೀಡುವ ಮೂಲಕ ಅದನ್ನು ಸಶಕ್ತೀಕರಣಗೊಳಿಸುವ ವಿಚಾರದಲ್ಲಿ ಹೆಮ್ಮೆಯ ಕೆಲಸ ಮಾಡಿದೆ. ಇದು ಒಂದು ಸರ್ಕಾರ ನಾಡು ನುಡಿಗೆ ಸಲ್ಲಿಸುವ ಗೌರವ. ಅದೇ ರೀತಿ ಕನ್ನಡದ ಕೋಟ್ಯಂತರ ಮನಸ್ಸುಗಳ ಪ್ರತಿ ರೂಪವಾದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಈ ವರ್ಷ20 ಕೋಟಿ ರೂ. ನೆರವು ನೀಡಲು ನಿರ್ಧರಿಸಿದೆ.



ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಉತ್ತೇಜನ ನೀಡುವ ಮೂಲಕ ನಾಡಿನ ಭಾಷಾ ಮತ್ತು ಕಲಾ ಪರಂಪರೆಯನ್ನು ಎತ್ತಿ ಹಿಡಿಯುವ ಕೆಲಸ ಮಾಡಿದೆ. ಕರ್ನಾಟಕ ಕಲಾ ಗ್ರಾಮವನ್ನು ಪೂರ್ಣ ಪ್ರಮಾಣದಲ್ಲಿ ಸಜ್ಜುಗೊಳಿಸಿ ನಿರಂತರವಾಗಿ ಸಾಂಸ್ಕೃತಿಕ ಚಟುವಟಿಕೆಗಳು ನಡೆಯುವಂತೆ ಮಾಡುವ ದೃಷ್ಟಿಯಿಂದ ಅಭಿವೃದ್ಧಿಗೆ ಮುಂದಾಗಿದೆ. ಇದಕ್ಕಾಗಿ ಖಾಸಗಿ ಸಹಭಾಗಿತ್ವವನ್ನೂ ಪಡೆದಿದೆ.

ಕರಾವಳಿ ಭಾಗದ ಜಗತ್ಪ್ರಸಿದ್ಧ ಜಾನಪದ ಕಲೆ ಯಕ್ಷಗಾನಕ್ಕೆ ಹೊಸ ಆಯಾಮ ನೀಡುವ ದೃಷ್ಟಿಯಿಂದ ರಾಜ್ಯ ಮಟ್ಟದ ಬೃಹತ್ ಯಕ್ಷಗಾನ ಸಮ್ಮೇಳನ ನಡೆಸಲು ಮುಂದಾಗಿದೆ. ಚೆಂಬೆಳಕಿನ ಕವಿ ಎಂದೇ ಹೆಸರಾದ ಕವಿ ಚೆನ್ನವೀರ ಕಣವಿ, ಡಾ. ಸಿದ್ಧಲಿಂಗಯ್ಯ, ಜ್ಞಾನ ಪೀಠ ಪುರಸ್ಕೃತ ನಾಟಕಕಾರ, ಸಾಹಿತಿ ಡಾ. ಚಂದ್ರಶೇಖರ ಕಂಬಾರ, ಕನ್ನಡ ಸಾಹಿತ್ಯ ಲೋಕದಲ್ಲಿ ಚಂಪಾ ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ ಡಾ. ಚಂದ್ರಶೇಖರ ಪಾಟೀಲ, ಖ್ಯಾತ ಸಂಶೋಧಕರಾಗಿದ್ದ ಡಾ. ಎಂ.ಚಿದಾನಂದಮೂರ್ತಿ ಯವರಂತಹ ಹಿರಿಯ ಸಾಹಿತಿಗಳ ಅಮೂಲ್ಯ ಸಾಹಿತ್ಯವನ್ನು ಉಳಿಸಲು ವಿಶೇಷ ಯೋಜನೆ ರೂಪಿಸುವ ಕಾರ್ಯವನ್ನು ಸರ್ಕಾರ ಕೈಗೆತ್ತಿಕೊಂಡಿದೆ.

**ಹಸಿರು ಆಯವ್ಯಯ**

**ರಾಜ್ಯದಲ್ಲಿ ಅರಣ್ಯ ಜೀವಶಾಸ್ತ್ರ ವ್ಯವಸ್ಥೆಯ ಮೇಲೆ ಪ್ರಾಕೃತಿಕ ಮತ್ತು ಮಾನವ ನಿರ್ಮಿತ ಒತ್ತಡಗಳಿಂದ ಉಂಟದ ದುಷ್ಪರಿಣಾಮವನ್ನು ಸರಿದೂಗಿಸುವ ಉದ್ದೇಶಕ್ಕಾಗಿ ಇದೇ ಮೊದಲ ಬಾರಿಗೆ ಸರ್ಕಾರವು ಹಸಿರು ಆಯವ್ಯಯವನ್ನು ರೂಪಿಸಿ, 100 ಕೋಟಿ ರೂ ಅನುದಾನವನ್ನು ಹಂಚಿಕೆ ಮಾಡಿದೆ.**

ಚಿಕ್ಕಬಳ್ಳಾಪುರ ಜಿಲ್ಲೆಯ ಕೈವಾರದ ಯತಿವರೇಣ್ಯ ಹಾಗೂ ಸಮಾಜ ಸುಧಾರಕರಾದ ಶ್ರೀಯೋಗಿನಾರೇಯಣಾ ಯತೀಂದ್ರರು ಕೈವಾರ ತಾತಯ್ಯ ಎಂದೇ ಇಂದಿಗೂ ಜನಪ್ರಿಯರು. ಈ ಪ್ರದೇಶದಲ್ಲಿ ನೆಲೆಸಿ ಸಮಾಜ ಸುಧಾರಣೆ ಕೈಗೊಂಡಿದ್ದರು. ವೇದಾಂತ ಸಾರವಳಿ, ತತ್ವಗಳು, ಕೀರ್ತನೆಗಳ ಮೂಲಕ ಸಮಾಜಕ್ಕೆ ಮಾರ್ಗದರ್ಶನ ನೀಡಿದ ಮಹಾ ಪುರುಷರು. ಕನ್ನಡ ನೆಲದಲ್ಲಿ ಜನಿಸಿದ ಈ ಮಹಾ ಪುರುಷರ ಜಯಂತಿಯನ್ನು ಪ್ರತಿ ವರ್ಷ ಮಾರ್ಚ್ 27 ರಂದು ಆಚರಿಸುವ ನಿರ್ಧಾರ ಕೈಗೊಳ್ಳುವ ಮೂಲಕ ಸರ್ಕಾರ ಈ ನೆಲದ ಪರಂಪರೆಯನ್ನು ಗೌರವಿಸುವ ಕೈಂಕರ್ಯಕ್ಕೆ ಮುಂದಾಗಿದೆ.

ಹಾವೇರಿ ಜಿಲ್ಲೆಯಲ್ಲಿ ಸಾಹಿತಿ ಮಹದೇವ ಬಣಕಾರ ಅವರ ಗೌರವಾರ್ಥ ಎರಡು ಕೋಟಿ ರೂ. ವೆಚ್ಚದಲ್ಲಿ ಒಂದು ಸಾಂಸ್ಕೃತಿಕ ಭವನ ನಿರ್ಮಾಣ, ಮಂಗಳೂರು ವಿಶ್ವ ವಿದ್ಯಾ ನಿಲಯದಲ್ಲಿ ಅರೆ ಭಾಷೆ ಸಂಶೋಧನಾ ಕೇಂದ್ರ ಸ್ಥಾಪನೆಯಂತಹ ಮಹತ್ವದ ಕೆಲಸಗಳಿಗೆ ಸರ್ಕಾರ ದಿಟ್ಟ ಹೆಜ್ಜೆ ಇಟ್ಟು ಮುನ್ನಡೆದಿದೆ.



ಕನ್ನಡದ ಕಂಪು ನಾಡಿನೊಳಗಷ್ಟೇ ಅಲ್ಲ, ಗಡಿಯ ಆಚೆಗೂ ಪಸರಿಸಬೇಕು ಎಂಬ ಕಾಳಜಿಯಿಂದ ಕರ್ನಾಟಕದ ಗಡಿ ಭಾಗದಲ್ಲಿರುವ ನೆರೆಯ ಕಾಸರಗೋಡಿನಲ್ಲಿ ಗಡಿ ನಾಡ ಸಾಹಿತಿ ಎಂದೇ ಜನಪ್ರಿಯರಾಗಿದ್ದ ಕಯ್ಯಾರ ಕಿಞ್ಞಣ್ಣರೈ ಅವರ ಹೆಸರನ್ನು ಚಿರಸ್ಥಾಯಿಯಾಗಿ



Downloaded From:www.kpscvaani.com







**ಅಮೃತ ಕ್ರೀಡಾ ದತ್ತು ಯೋಜನೆ**

**2024 ರ ಒಲಂಪಿಕ್ಸ್ ಮತ್ತು ಪ್ಯಾರಾ ಒಲಂಪಿಕ್ಸ್‌ಗೆ ರಾಜ್ಯದಿಂದ ಕನಿಷ್ಠ 75 ಕ್ರೀಡಾಪಟುಗಳನ್ನು ಸಿದ್ಧಪಡಿಸಲು ಅಮೃತ ಕ್ರೀಡಾ ದತ್ತು ಯೋಜನೆಯಡಿ ತಲಾ 10 ಲಕ್ಷ ರೂ ಗಳವರೆಗೆ ಪ್ರತಿ ವರ್ಷ ಶ್ರೇಷ್ಠ ಮಟ್ಟದ ತರಬೇತಿ ಪಡೆಯಲು ವಿನಿಯೋಗಿಸಲಾಗುತ್ತಿದೆ.**

ಉಳಿಸುವ ನಿಟ್ಟಿನಲ್ಲಿ ಅವರ ಹೆಸರಲ್ಲಿ ಮತ್ತು ಅಕ್ಕಲ ಕೋಟೆಯಲ್ಲಿ ಜಯದೇವಿ ತಾಯಿಲಿಗಾಡೆ ಯವರ ಹೆಸರಿನಲ್ಲಿ ಮತ್ತು ನೆರೆಯ ಗೋವಾ ರಾಜ್ಯದಲ್ಲಿ ಕನ್ನಡ ಭವನಗಳನ್ನು ನಿರ್ಮಿಸಲು ಸರ್ಕಾರ ಅಗತ್ಯ ಕ್ರಮಗಳನ್ನು ಕೈಗೊಂಡಿದೆ. ಕನ್ನಡ ಮತ್ತು ಕರ್ನಾಟಕಕ್ಕಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟ ಈ ಗಣ್ಯ ಕನ್ನಡಿಗರ ಕುರಿತಾದ ಸಮಗ್ರ ಪರಿಚಯವನ್ನು ನೆರೆಯ ರಾಜ್ಯಗಳಿಗೆ ಮಾಡುವ ಉದ್ದೇಶ ಇದರ ಹಿಂದಿದೆ.

**ಪ್ರವಾಸೋದ್ಯಮ ಅಭಿವೃದ್ಧಿ:**

ಕರ್ನಾಟಕ ಭಾಷೆ, ಸಂಸ್ಕೃತಿಯ ಸಂಪತ್ತಿನ ಜತೆಗೇ ಇಲ್ಲಿನ ಪ್ರವಾಸೋದ್ಯಮದ್ದೇ ಒಂದು ವಿಶೇಷ. ಇತಿಹಾಸದ ಗತ ವೈಭವದ ಕಥೆಗಳನ್ನು ಸಾರುವ ಮೂಲಕ ಕಲೆ– ಸಂಸ್ಕೃತಿಯ ಪರಿಚಯವನ್ನು ಮಾಡುವ ಅನೇಕ ಪ್ರವಾಸಿ ಸ್ಥಳಗಳು ರಾಜ್ಯದಲ್ಲಿವೆ. ಈ ಪ್ರವಾಸಿ ತಾಣಗಳು ಬರೀ ದೇಶಿಯರನ್ನಷ್ಟೇ ಅಲ್ಲ, ವಿದೇಶಿ ಪ್ರಜೆಗಳನ್ನೂ ಆಕರ್ಷಿಸಿವೆ. ಇಲ್ಲಿನ ಗತ ಇತಿಹಾಸ, ಶಿಲ್ಪ ಕಲೆಗಳನ್ನೊಳಗೊಂಡ ವೈಶಿಷ್ಟ್ಯ ಪೂರ್ಣ ವಿವರಗಳು ಆಧುನಿಕ ತಂತ್ರಜ್ಞಾನದ ಯುಗದಲ್ಲೂ ವಿದೇಶಿಯರನ್ನು ಆಕರ್ಷಿಸಿವೆ. ಪ್ರವಾಸೋದ್ಯಮವನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಮತ್ತು ಆಕರ್ಷಕವಾಗಿಸಲು ದೃಢ ಸಂಕಲ್ಪ ಕೈಗೊಂಡಿರುವ ಸರ್ಕಾರ ಅದಕ್ಕಾಗಿ ನಿರ್ದಿಷ್ಟ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ಮುಂದಾಗಿದೆ. ಪ್ರವಾಸಿ ತಾಣಗಳಿಗೆ ಇನ್ನಷ್ಟು ಸೌಲಭ್ಯಗಳನ್ನು ನೀಡಿ ಅಭಿವೃದ್ಧಿ ಪಡಿಸುವುದು ಸರ್ಕಾರದ ಯೋಜನೆ.

**ಪ್ರವಾಸಿ ವೃತ್ತ ರಚನೆ:**

ಕರ್ನಾಟಕದ ಇತಿಹಾಸದಲ್ಲಿ ವಿಜಯನಗರದ ಅರಸರು, ಬಾದಾಮಿಯ ಚಾಲುಕ್ಯರು, ದ್ವಾರ ಸಮುದ್ರದ ಹೊಯ್ಸಳರು, ಮೈಸೂರಿನ ಯದು ವಂಶದ ಅರಸರೂ ಸೇರಿದಂತೆ ಅನೇಕ ರಾಜರುಗಳ ಆಳ್ವಿಕೆಯ ಕುರುಹುಗಳ ಉಲ್ಲೇಖಗಳಿವೆ. ಒಂದೊಂದು ಪ್ರವಾಸಿ ತಾಣಗಳೂ ಅಲ್ಲಿ ಆಳ್ವಿಕೆ ನಡೆಸಿದ ರಾಜರುಗಳ ಸಾಮ್ರಾಜ್ಯದ ವೈಭವೋಪೇತ ಕತೆಗಳಿಗೆ ಸಾಕ್ಷಿಯಾಗಿ ನಿಂತಿವೆ. ಇವು ಮತ್ತೊಂದು ರೀತಿಯಲ್ಲಿ ಕರ್ನಾಟಕದ ಸಾಂಸ್ಕೃತಿಕ ಪರಂಪರೆಯ ಪ್ರತೀಕವೂ ಆಗಿವೆ. ಈ ಪ್ರವಾಸಿ ತಾಣಗಳು ಅಭಿವೃದ್ಧಿಗೊಂಡರೆ ಇನ್ನಷ್ಟು ಆಕರ್ಷಕವಷ್ಟೇ ಅಲ್ಲ ಜನೋಪಯೋಗಿ ಎಂಬುದನ್ನು ಮನಗಂಡಿರುವ ಸರ್ಕಾರ ಹಂಪಿ, ಬಾದಾಮಿ, ಐಹೊಳೆ, ಪಟ್ಟದ ಕಲ್ಲು, ವಿಜಯಪುರ ಒಳಗೊಂಡಂತೆ ಪ್ರವಾಸಿ ವೃತ್ತವನ್ನು ಮತ್ತು ಮೈಸೂರು, ಶ್ರೀರಂಗಪಟ್ಟಣ, ಹಾಸನ, ಬೇಲೂರು, ಹಳೇಬೀಡು ಪ್ರವಾಸಿ ವೃತ್ತವನ್ನು ರಚಿಸಿ ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿ ಪಡಿಸುವ ಯೋಜನೆಯನ್ನು ಕೈಗೆತ್ತಿಕೊಂಡಿದೆ.

**ಸ್ಮಾರಕಗಳ ಸಂರಕ್ಷಣೆ:**

ಹಳೇ ಬೀಡು, ಬೇಲೂರು, ಸೋಮನಾಥಪುರ ಒಳಗೊಂಡಂತೆ ಇರುವ ಹೊಯ್ಸಳರ ಕಾಲದ ಸ್ಮಾರಕಗಳನ್ನು ಯುನೆಸ್ಕೊ ವಿಶ್ವ ಪರಂಪರೆ ತಾಣಗಳ ಪಟ್ಟಿಗೆ ಈ ವರ್ಷ ಸೇರಿಸಲು ಸರ್ಕಾರ ಸಂಕಲ್ಪ ಮಾಡಿದೆ. ಈ ಪ್ರವಾಸಿ ತಾಣಗಳು ವಿಶ್ವ ಪರಂಪರೆ ಪಟ್ಟಿಗೆ ಒಮ್ಮೆ ಸೇರ್ಪಡೆಗೊಂಡರೆ ಎಲ್ಲ ರೀತಿಯಿಂದಲೂ ಸಂರಕ್ಷಣೆಗೆ ನೆರವಾಗಲಿದೆ.

**ಜೋಗ, ನಂದಿ ಬೆಟ್ಟ, ಯಾಣಕ್ಕೆ ರೋಪ್ ವೇ:**

ಶಿವಮೊಗ್ಗ ಜಿಲ್ಲೆಯ ಜೋಗ



Downloaded From:www.kpscvaani.com

ಜಲಪಾತಕ್ಕೆ ಪ್ರವಾಸೋದ್ಯಮ ಪಟ್ಟಿಯಲ್ಲಿ ವಿಶಿಷ್ಟ ಸ್ಥಾನವಿದೆ. ಜೋಗ ಜಲಪಾತದ ಸಿರಿ ಕವಿಗಳ ಕಾವ್ಯ ರಚನೆಗೂ ಸ್ಫೂರ್ತಿ ನೀಡಿರುವುದು ವಿಶೇಷಗಳಲ್ಲಿ ಒಂದು. ಇತ್ತೀಚಿನ ದಶಕಗಳಲ್ಲಿ ಜೋಗ ಒಂದು ಪ್ರಮುಖ ಆಕರ್ಷಕ ಪ್ರವಾಸಿ ತಾಣವಾಗಿಯೂ ಪ್ರವಾಸಿಗರನ್ನು ತನ್ನತ್ತ ಸೆಳೆಯುತ್ತಿದೆ. ವಿವಿಧ ಕೋನಗಳಿಂದ ಜೋಗದ ಜಲಪಾತದ ಸಿರಿಯನ್ನು ಆಸ್ವಾದಿಸುವುದೇ ಒಂದು ಆನಂದ. ಈ ಕಾರಣಕ್ಕಾಗೇ ಪ್ರವಾಸಿಗರ ಆಕರ್ಷಣೆಗೆ ಕಾರಣವಾಗಿದೆ. ಜೋಗದಲ್ಲಿ ಪ್ರವಾಸಿಗರ ಅನುಕೂಲಕ್ಕಾಗಿ ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಹೋಟೆಲ್ ನಿರ್ಮಾಣಕ್ಕೆ ನಿರ್ಧರಿಸಿರುವ ಸರ್ಕಾರ, ಜಲಪಾತದ ಸೊಬಗು ಸವಿಯಲು ಅನುಕೂಲವಾಗುವಂತೆ ರೋಪ್ ವೇ ನಿರ್ಮಾಣಕ್ಕೂ ಯೋಜನೆ ರೂಪಿಸಿ ಕಾರ್ಯ ಪ್ರವೃತ್ತವಾಗಿದೆ. ಇದಕ್ಕಾಗಿ ಈ ವರ್ಷದ ಮುಂಗಡ ಪತ್ರದಲ್ಲಿ 116 ಕೋಟಿ ರೂ. ಅನುದಾನವನ್ನು ಮೀಸಲಿರಿಸಲಾಗಿದೆ.

ರಾಜಧಾನಿ ಬೆಂಗಳೂರಿಗೆ ಸಮೀಪದಲ್ಲೇ ಇರುವ ನಂದಿ ಬೆಟ್ಟ ಪ್ರವಾಸಿಗರನ್ನು ಸದಾ ಕೈ ಬೀಸಿ ಕರೆಯುತ್ತದೆ. ಇಲ್ಲೊಂದು ಸಾರ್ವಜನಿಕ ಹಾಗೂ ಖಾಸಗಿ ಸಹಭಾಗಿತ್ವದಲ್ಲಿ 93 ಕೋಟಿ ರೂ. ವೆಚ್ಚದಲ್ಲಿ ರೋಪ್ ವೇ ನಿರ್ಮಿಸಲು ನಿರ್ಧರಿಸಲಾಗಿದೆಯಷ್ಟೇ ಅಲ್ಲದೆ, ಅದಕ್ಕೆ ಪೂರಕವಾಗಿ ಆಡಳಿತ ಮತ್ತು ಕಾನೂನಾತ್ಮಕ ಕ್ರಮಗಳನ್ನೂ ಸರ್ಕಾರ ಕೈಗೆತ್ತಿಕೊಂಡಿದೆ. ಇದಷ್ಟೇ ಅಲ್ಲ, ಉತ್ತರ ಕನ್ನಡ ಜಿಲ್ಲೆಯ ಪ್ರಸಿದ್ಧ ಪ್ರವಾಸಿ ತಾಣ ಯಾಣದಲ್ಲೂ ಇಂಥದೇ ಒಂದು ರೋಪ್ ವೇ ಅಳವಡಿಕೆ ಯೋಜನೆ ರೂಪುಗೊಳ್ಳುತ್ತಿದೆ.

**ಅಂಜನಾದ್ರಿ ಅಭಿವೃದ್ಧಿಗೆ 100 ಕೋಟಿ ರೂ:**

ಕೊಪ್ಪಳ ಜಿಲ್ಲೆಯ ಅಂಜನಾದ್ರಿ ಬೆಟ್ಟ ಪುರಾಣದಲ್ಲಿ ಬರುವ ಆಂಜನೇಯ ಸ್ವಾಮಿಯ ಜನ್ಮ ಸ್ಥಳವೆಂದು ಖ್ಯಾತಿ ಪಡೆದಿದೆ. ಇದರ ಸಮಗ್ರ ಅಭಿವೃದ್ಧಿಗೆ ನೀಲ ನಕ್ಷೆ ರೂಪಿಸಲಾಗಿದೆಯಷ್ಟೇ ಅಲ್ಲ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಮೂಲಕ ಪ್ರವಾಸಿಗರಿಗೆ ನೆರವಾಗಲು ನಿರ್ಧರಿಸಲಾಗಿದೆ. ಇಲ್ಲೂ ಕೂಡಾ ರೋಪ್ ವೇ ನಿರ್ಮಿಸಲು ಸರ್ಕಾರ ನಿರ್ಧರಿಸಿದೆ. ಇದಕ್ಕಾಗಿ 100 ಕೋಟಿ ರೂ ವೆಚ್ಚ ಮಾಡಲು ತೀರ್ಮಾನ ಕೈಗೊಂಡಿದೆ. ಮೈಸೂರಿನ ಇತಿಹಾಸ ಪ್ರಸಿದ್ಧ ಚಾಮುಂಡಿ ಬೆಟ್ಟ ಹಾಗೂ ಚಿಕ್ಕಮಗಳೂರಿನ ಮುಳ್ಳಯ್ಯನಗಿರಿ, ದತ್ತ ಪೀಠದ ಅಭಿವೃದ್ಧಿಗೂ ಯೋಜನೆಗಳನ್ನು ಸರ್ಕಾರ ರೂಪಿಸಿದೆ.

ಕರಾವಳಿ ವ್ಯಾಪ್ತಿಯ ಜಿಲ್ಲೆಗಳಲ್ಲಿ ಕಡಲ ತೀರದ ಪ್ರವಾಸೋದ್ಯಮದ ಅಭಿವೃದ್ಧಿಗೆ ಯೋಜನೆ ರೂಪಿಸಿರುವ ಸರ್ಕಾರ ಆ ಮೂಲಕ ಕರಾವಳಿ ಪ್ರದೇಶವನ್ನೂ ಪ್ರವಾಸೋದ್ಯಮ ಆಕರ್ಷಣೆಯ ಕೇಂದ್ರವನ್ನಾಗಿಸಲು ತೀರ್ಮಾನಿಸಿದೆ. ಈ ವಿಚಾರಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ಅನುಮತಿಯೂ ಅಗತ್ಯವಾಗಿರುವುದರಿಂದ ಸಿಆರ್‌ಝಡ್ ಮಾನದಂಡಗಳನ್ನು ಸಡಿಲಗೊಳಿಸುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿದೆ. ಕಲ್ಬುರ್ಗಿ ಹಾಗೂ ಬೀದರ್ ಕೋಟೆಗಳನ್ನು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ಸಹಯೋಗದೊಂದಿಗೆ ಅಭಿವೃದ್ಧಿಪಡಿಸಿ ಪ್ರವಾಸಿಗರನ್ನು ಸೆಳೆಯಲು ಕಾರ್ಯ ಪ್ರವೃತ್ತವಾಗಿದೆ.

**ನಿಸರ್ಗದ ಸಂರಕ್ಷಣೆ:**

ಕರ್ನಾಟಕ ಹೇರಳ ಪ್ರಕೃತಿ ಸಂಪತ್ತು, ನಯನ ಮನೋಹರ ನಿಸರ್ಗದ ತಾಣ. ಇಲ್ಲಿನ ನಿಸರ್ಗ ಸಂಪತ್ತು ದಟ್ಟ ಕಾಡುಗಳು ಪ್ರಸಿದ್ಧಿ ಪಡೆದಿದೆ. ಆದರೆ ನಾಗರಿಕತೆ ಬೆಳೆದಂತೆ ಜನರ ಅವಶ್ಯಕತೆಗೆ ಅನುಗುಣವಾಗಿ ನಿಸರ್ಗದ ಮೇಲೂ ಒತ್ತಡ ಹೆಚ್ಚಾಗುತ್ತಿದೆ. ಇಂತಹ ಕ್ಲಿಷ್ಟಕರ ಸನ್ನಿವೇಶದಲ್ಲಿ ನಿಸರ್ಗ ಸಂಪತ್ತಿನ ರಕ್ಷಣೆ ಸರ್ಕಾರಕ್ಕೆ ದೊಡ್ಡ ಸವಾಲೂ ಹೌದು. ಹೆಚ್ಚುತ್ತಿರುವ ಜನ ಸಂಖ್ಯೆಯ ಪರಿಣಾಮವಾಗಿ ನಿಸರ್ಗದ ಮೇಲೂ ಪರಿಣಾಮಗಳಾಗುತ್ತಿವೆ. ಮಾನವ ನಿರ್ಮಿತ ಒತ್ತಡದಿಂದಾಗಿ ಪ್ರಕೃತಿ ಮಲೀನಗೊಳ್ಳುತ್ತಿದೆ. ಅದರ ದುಷ್ಪರಿಣಾಮ ವಾತಾವರಣದ ಮೇಲಾಗುತ್ತಿದೆ.

ಇಂತಹ ಪರಿಸ್ಥಿತಿಯ ನಡುವೆಯೂ ರಾಜ್ಯ ಸರ್ಕಾರ ನಿಸರ್ಗ ಸಂಪತ್ತಿನ ರಕ್ಷಣೆಯ ಮೂಲಕ ಪ್ರಾಕೃತಿಕ ಸಮತೋಲನ ಕಾಪಾಡಲು ದಿಟ್ಟ ಕ್ರಮಗಳನ್ನು ಕೈಗೊಂಡಿದೆ. ಇದಕ್ಕಾಗೇ ಹಸಿರು ಅಯವ್ಯಯವನ್ನು ರೂಪಿಸಿ 100 ಕೋಟಿ ರೂ. ಅನುದಾನವನ್ನು ಮೀಸಲಿರಿಸಿ ಆ ಮೂಲಕ ಪ್ರಕೃತಿಯ ಮೇಲೆ ದುಷ್ಪರಿಣಾಮಗಳಾಗದಂತೆ ಕ್ರಮ ಕೈಗೊಳ್ಳುತ್ತಿದೆ.

ಮೊದಲೇ ಹೇಳಿದಂತೆ ಮಾನವ ನಿರ್ಮಿತ ಸಮಸ್ಯೆಯಿಂದ ಕರಾವಳಿ ಭಾಗದ ಜಲಮೂಲಗಳು ಮಲೀನಗೊಳ್ಳುತ್ತಿವೆ. ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆಯ ಸಮಸ್ಯೆಯನ್ನು ಸವಾಲಾಗಿ ಸ್ವೀಕರಿಸಿರುವ ಸರ್ಕಾರ ವಿಶ್ವ ಬ್ಯಾಂಕ್ ನೆರವಿನೊಂದಿಗೆ ವಿನೂತನವಾದ ಬ್ಲೂ- ಪ್ಲಾಸ್ಟಿಕ್ ನಿರ್ವಹಣೆ ಯೋಜನೆಯನ್ನು ಮುಂದಿನ ನಾಲ್ಕು ವರ್ಷಗಳ ಅವಧಿಗೆ ಒಟ್ಟು 840 ಕೋಟಿ ರೂ. ವೆಚ್ಚದಲ್ಲಿ ಜಾರಿಗೆ ತರಲು ಮುಂದಾಗಿದೆ.

ಕರ್ನಾಟಕ ಕನ್ನಡ ನಾಡು ಶ್ರೀಗಂಧದ ಬೀಡು ಎಂದೂ ಖ್ಯಾತಿ ಪಡೆದಿದೆ. ಈ ಕೀರ್ತಿಯನ್ನು ಚಿರಸ್ಥಾಯಿಯಾಗಿ ಉಳಿಸಲು ಖಾಸಗಿ ಭೂಮಿಗಳಲ್ಲಿ ಶ್ರೀಗಂಧದ ಮರಗಳನ್ನು ಬೆಳೆಸಲು ಉತ್ತೇಜನ ನೀಡುವ ಯೋಜನೆಯನ್ನು ಸರ್ಕಾರ ರೂಪಿಸಿದೆ. ಇದಕ್ಕಾಗಿ ಪ್ರತ್ಯೇಕ ನೀತಿಯನ್ನು ರೂಪಿಸಲಾಗಿದೆ.

ಪರಿಸರದ ಸಂರಕ್ಷಣೆ ಸಂಪೂರ್ಣವಾಗಿ ಕಾರ್ಯಗತವಾಗುವಂತೆ ಮಾಡುವ ದೃಷ್ಟಿಯಿಂದ ಇದಕ್ಕಾಗೇ ಜಾರಿಯಲ್ಲಿರುವ ಅಧಿನಿಯಮಗಳ ಉದ್ದೇಶಗಳನ್ನು ಈಡೇರಿಸಲು ಮತ್ತು ಅದರ ಅನುಷ್ಠಾನವನ್ನು ಬಲಪಡಿಸಲು ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯ ಆಡಳಿತ ವಿಧಾನಗಳಲ್ಲಿ ಪರಿಣಾಮಕಾರಿ ಬದಲಾವಣೆ ತರುವ ಮೂಲಕ ಸುಧಾರಣೆಗೆ ಮುಂದಾಗಿದೆ. ಈ ಮೂಲಕ ಭವಿಷ್ಯದ ದಿನಗಳಲ್ಲಿ ಪರಿಸರ ನಶಿಸದಂತೆ ಸಂರಕ್ಷಿಸುವುದು ಸರ್ಕಾರದ ಯೋಜನೆ.

ಸಂಸ್ಕೃತಿ, ಪರಂಪರೆ ನೈಸರ್ಗಿಕ ಸಂಪನ್ಮೂಲಗಳ ರಕ್ಷಣೆ ಉದ್ದೇಶಕ್ಕಾಗಿಯೇ ಸರ್ಕಾರ ಪ್ರಸಕ್ತ ಸಾಲಿನಲ್ಲಿ ಒಟ್ಟಾರೆಯಾಗಿ 3,012 ಕೋಟಿ ರೂ. ಮೊತ್ತವನ್ನು ವೆಚ್ಚ ಮಾಡುತ್ತಿದೆ. ನಾಡಿನ ಇತಿಹಾಸ, ಪರಂಪರೆ, ಭಾಷೆ, ಸಂಸ್ಕೃತಿ, ನಿಸರ್ಗ, ಪರಿಸರ ಸಂರಕ್ಷಣೆಯ ನೈಜ ಹೊಣೆಗಾರಿಕೆಯನ್ನು, ಜವಾಬ್ದಾರಿಯನ್ನು ಸರ್ಕಾರ ಈ ಮೂಲಕ ಪ್ರದರ್ಶಿಸಿದೆ. ಇಚ್ಛಾ ಶಕ್ತಿ ಎಂಬುದು ಇದ್ದರೆ ಒಂದು ಜನಪರ ಸರ್ಕಾರ ನಾಡಿನ ಒಳಿತಿಗಾಗಿ, ಅಭ್ಯುದಯಕ್ಕಾಗಿ ಏನೆಲ್ಲಾ ಕೆಲಸ ಮಾಡಬಹುದು ಎಂಬುದಕ್ಕೆ ಇದೂ ಪ್ರತ್ಯಕ್ಷ ನಿದರ್ಶನ.


Downloaded From:www.kpscvaani.com



## ಸುಗಮ ಜೀವನಕ್ಕೆ ಸೋಪಾನವಾದ

# ಸರ್ಕಾರದ ಆಡಳಿತ ಸುಧಾರಣಾ ಕ್ರಮಗಳು

**ಸರ್ಕಾರವು ಆಡಳಿತ ಸುಧಾರಣೆ ಮತ್ತು ಸಾರ್ವಜನಿಕ ಸೇವೆಯಲ್ಲಿ ಹಮ್ಮಿಕೊಂಡ ಹಲವಾರು ಉಪಕ್ರಮಗಳು ಜನರ ಸುಗಮ ಜೀವನಕ್ಕೆ ಸೋಪಾನವಾಗಿದೆ.**

ಗೋರೂರು ಪಂಕಜ

ಆಡಳಿತ ಸುಧಾರಣೆ ಮತ್ತು ಸಾರ್ವಜನಿಕ ಸೇವೆ ಸರ್ಕಾರದ ಮೂಲ ಗುರಿ. ಈ ನಿಟ್ಟಿನಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸರ್ಕಾರ ತನ್ನದೇ ಆದ ಹೆಗ್ಗುರುತುಗಳನ್ನು ಮೂಡಿಸುತ್ತಿದೆ. ಕಳೆದೊಂದು ವರ್ಷದಲ್ಲಿ ಹಲವು ಸುಧಾರಣಾ ಕ್ರಮಗಳನ್ನು ಜಾರಿಗೊಳಿಸಿದ್ದು, ಸರ್ಕಾರಿ ಸೇವೆಗಳನ್ನು ನಾಗರಿಕರ ಮನೆ ಬಾಗಿಲಿಗೆ ತಲುಪಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಿದೆ. ಆಡಳಿತ ಸುಧಾರಣೆ ಮತ್ತು ಸಾರ್ವಜನಿಕ ಸೇವೆಯಿಂದ ಸುಗಮ ಜೀವನಕ್ಕೆ ಅನುವು ಮಾಡಿಕೊಡುವುದು ಸರ್ಕಾರದ ಗುರಿಯಾಗಿದೆ.

ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಬೆಂಗಳೂರಿನಲ್ಲಿ ಜುಲೈ 11 ಮತ್ತು 12 ರಂದು ಉತ್ತಮ ಆಡಳಿತ ಕುರಿತು ಕೇಂದ್ರದಡಿ ಎ.ಆರ್.ಪಿ.ಜಿ. ಮತ್ತು ರಾಜ್ಯ ಸರ್ಕಾರದ ಸಹಯೋಗದಲ್ಲಿ ಉತ್ತಮ ಆಡಳಿತ ಕುರಿತು ಎರಡು ದಿನಗಳ ಪ್ರಾದೇಶಿಕ ಸಮ್ಮೇಳನ ಆಯೋಜಿಸಲಾಗಿತ್ತು. ಕೇಂದ್ರ ಸಿಬ್ಬಂದಿ, ಸಾರ್ವಜನಿಕ ಕುಂದುಕೊರತೆಗಳು, ಪಿಂಚಣಿ, ಬಾಹ್ಯಾಕಾಶ ಖಾತೆಯ ರಾಜ್ಯ ಸಚಿವ, ಡಾ. ಜಿತೇಂದ್ರ ಸಿಂಗ್ ಮತ್ತಿತರ ಗಣ್ಯರು ಆಡಳಿತ ಸುಧಾರಣೆ ಕುರಿತ ನಾನಾ ಮಗ್ಗುಲುಗಳ ಬಗ್ಗೆ ಬೆಳಕು ಚೆಲ್ಲಿದರು.

"ಉತ್ತಮ ಆಡಳಿತಕ್ಕಾಗಿ ನಾಗರಿಕರು, ವಾಣಿಜ್ಯೋದ್ಯಮಿಗಳು" ಸರ್ಕಾರವನ್ನು ಸನಿಹಕ್ಕೆ ತರುವ ವಿಷಯ ಕುರಿತ ಎರಡು ದಿನಗಳ ಪ್ರಾದೇಶಿಕ ಸಮ್ಮೇಳನದಲ್ಲಿ ಆಡಳಿತಾತ್ಮಕ ಸುಧಾರಣೆ, ಖಾಸಗಿ ವಲಯ



Downloaded From:www.kpscvaani.com

### ಇ-ಪರಿಹಾರ

**ವನ್ಯ ಪ್ರಾಣಿಗಳ ಹಾವಳಿಯಿಂದ ಉಂಟಾದ ಬೆಳೆಹಾನಿಗಳಿಗೆ ಪರಿಹಾರ ನೀಡುವ ಸಲುವಾಗಿ ಅಭಿವೃದ್ಧಿ ಪಡಿಸಲಾಗಿರುವ 'ಇ-ಪರಿಹಾರ' ತಂತ್ರಾಂಶದ ಮೂಲಕ ಮಾರ್ಚ್ ಮಾಹೆಯ ಅಂತ್ಯದವರೆಗೆ 2741.70 ಲಕ್ಷ ರೂಗಳನ್ನು ಫಲಾನುಭವಿಗಳ ಖಾತೆಗೆ ಪಾವತಿಸಲಾಗಿದೆ.**

ಮತ್ತು ಉತ್ತಮ ಆಡಳಿತ, ಉತ್ತಮ ರೂಢಿಗಳ ಪುನರಾವರ್ತನೆ, ರಾಜ್ಯಗಳಲ್ಲಿ ಆಡಳಿತಾತ್ಮಕ ಸುಧಾರಣೆ, ಹೆಗ್ಗುರುತಿನ ಆಡಳಿತ ಮತ್ತು ನವೋದ್ಯಮ ಮತ್ತು ಆಡಳಿತದಲ್ಲಿ ಪ್ರಯೋಗಗಳ ಬಗ್ಗೆ ಚರ್ಚಿಸಲಾಗಿದೆ. ಆದರೆ ರಾಜ್ಯದಲ್ಲಿ ಜನಸಾಮಾನ್ಯರ ಮನೆ ಬಾಗಿಲಿಗೆ ಸೌಲಭ್ಯಗಳನ್ನು ತಲುಪಿಸುವ, ಆಡಳಿತ ಯಂತ್ರವನ್ನೇ ಹಳ್ಳಿಗಳಿಗೆ ತರುವ ವಿನೂತನ ಪ್ರಯತ್ನ, ಉತ್ತಮ ಆಡಳಿತ, ಸೇವೆ ವಿಷಯದಲ್ಲಿ ಕೇಂದ್ರ ಸರ್ಕಾರಕ್ಕಿಂತ ರಾಜ್ಯ ಒಂದು ಹೆಜ್ಜೆ ಮುಂದೆ ಇದೆ. ಜಿಲ್ಲಾಧಿಕಾರಿಗಳ ನಡೆ ಹಳ್ಳಿಗಳ ಕಡೆ ಕಾರ್ಯಕ್ರಮವನ್ನು ಪ್ರತಿ ತಿಂಗಳ 3ನೇ ಶನಿವಾರದಂದು ಆಯೋಜಿಸಲಾಗುತ್ತಿದೆ. ಸ್ಥಳದಲ್ಲಿಯೇ ಪರಿಹಾರ ಒದಗಿಸುವುದು ಈ ಕಾರ್ಯಕ್ರಮದ ಉದ್ದೇಶ. ತೀರಾ ಹಿಂದುಳಿದ ಹಳ್ಳಿಗಳಲ್ಲಿ ಜಿಲ್ಲಾಧಿಕಾರಿಗಳು ವಾಸ್ತವ್ಯ ಹೂಡಿ ಸಮಸ್ಯೆ ಬಗೆಹರಿಸಲು ಒತ್ತು ನೀಡುತ್ತಿದ್ದಾರೆ. ಕಂದಾಯಸೇವೆ, ಪಿಂಚಣಿ ಸೌಲಭ್ಯವನ್ನು ಮನೆ ಬಾಗಿಲಿಗೆ ತಲುಪಿಸಲಾಗುತ್ತಿದೆ. ಹಿರಿಯನಾಗರಿಕರ ರಕ್ಷಣೆ, ಶೋಷಿತ ಸಮುದಾಯದ ಹಿತರಕ್ಷಣೆ ಹೀಗೆ ಸರ್ವರ ಶ್ರೇಯೋಭಿವೃದ್ಧಿ ಸರ್ಕಾರದ ಆದ್ಯತೆಯಾಗಿದೆ.

ಆಡಳಿತದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವುದು ಸಹ ಮುಖ್ಯವಾಗಿದೆ. ಸಂವಿಧಾನದ ಏಳನೇ ಪರಿಚ್ಛೇದದಡಿ ಕಾನೂನು ಮತ್ತು ಸುವ್ಯವಸ್ಥೆ ರಾಜ್ಯದ ವಿಷಯ. ಕಾನೂನು ಪರಿಪಾಲನೆಯಲ್ಲಿ ಈಗಿನ ಕಾಲಘಟ್ಟದಲ್ಲಿ ಸೈಬರ್ ಅಪರಾಧ ಬೆದರಿಕೆಗಳನ್ನು ಎದುರಿಸುವುದು ಇಂದಿನ ತುರ್ತು ಅಗತ್ಯ. ಆಡಳಿತದ ಎಲ್ಲಾ ಹಂತಗಳಲ್ಲಿ ತಂತ್ರಜ್ಞಾನ ಹಾಸುಹೊಕ್ಕಾಗಿದೆ. ಕಳೆದ ಎರಡು ಮೂರು ದಶಕಗಳಲ್ಲಿ ಆಗಿರುವ ತಂತ್ರಜ್ಞಾನದ ಬದಲಾವಣೆ ಎರಡು ಶತಮಾನಗಳಿಂದ ಆಗಿರಲಿಲ್ಲ. ತಂತ್ರಜ್ಞಾನದ ಜೊತೆಗೆ ತಾಂತ್ರಿಕವಾದ ಬೆದರಿಕೆಗಳು ಕೂಡ ಅಷ್ಟೇ ಪ್ರಮುಖವಾದುದು. ಇಡೀ ದೇಶದಲ್ಲಿ ಮೊದಲ ಬಾರಿಗೆ ಐಟಿ ಕಾಯ್ದೆ ಜಾರಿಗೆ ತಂದಿದ್ದು ರಾಜ್ಯದಲ್ಲಿ. ಇಂತಹ ಐಟಿ ರಾಜಧಾನಿ ಕರ್ನಾಟಕದಲ್ಲಿ ಸೈಬರ್ ಬೆದರಿಕೆಗಳನ್ನು ಎದುರಿಸಿ ಸೂಕ್ತ ರಕ್ಷಣಾಕ್ರಮಗಳನ್ನು ಅಳವಡಿಸಿಕೊಂಡು ಆಡಳಿತ ವ್ಯವಸ್ಥೆಯನ್ನು ಸುಗಮವಾಗಿ ಮುನ್ನಡೆಸುತ್ತಿರುವುದು ಸರ್ಕಾರದ ಸಾಧನೆಗಳಲ್ಲಿ ಒಂದಾಗಿದೆ.

ರಾಜ್ಯದಲ್ಲಿ ಆಡಳಿತ ಸುಧಾರಣೆ ಕುರಿತ ಎರಡನೇ ವರದಿಯನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ನಿರಂತರವಾಗಿ ಸುಧಾರಣೆ ಮಾಡಲಾಗುತ್ತಿದೆ. ಇದರನ್ವಯ ನಾಗರಿಕರಿಗೆ ಜಾತಿ, ಆದಾಯ, ಎಸ್.ಸಿ ಮತ್ತು ಎಸ್.ಟಿ, ಒಬಿಸಿ, ವಾಸಸ್ಥಳ ಮತ್ತಿತರ ಪ್ರಮಾಣಪತ್ರಗಳ ಅರ್ಜಿ ನಮೂನೆಗಳನ್ನು ಬದಲಾವಣೆ ಮಾಡಿ ತಂತ್ರಾಂಶದಲ್ಲಿ ಸುಧಾರಣೆ ತರಲಾಗಿದೆ. ಐದು ಸೇವೆಗಳನ್ನು ಸಂಯೋಜನೆ ಮಾಡಿ ಆ್ಯಪ್‌ನಲ್ಲಿ ಅಳವಡಿಸಲಾಗಿದ್ದು, ಉಳಿದ ಸೇವೆಗಳ ಅರ್ಜಿ ನಮೂನೆಯಲ್ಲಿ ಬದಲಾವಣೆ ತರುವ ಕಾರ್ಯ ಪ್ರಗತಿಯಲ್ಲಿದೆ. ನಾಡ ಕಚೇರಿ ತಂತ್ರಾಂಶವನ್ನು ದತ್ತಾಂಶದೊಂದಿಗೆ




ಸಂಯೋಜಿಸಲಾಗುತ್ತಿದೆ. ಜೊತೆಗೆ ಅಟಲ್ ಜೀ ಜನಸ್ನೇಹಿ ಕೇಂದ್ರಗಳಲ್ಲಿ ಎಲ್ಲಾ ಆನ್‌ಲೈನ್ ಸೇವೆಗಳನ್ನು ವಿತರಿಸಲು ಸಿದ್ಧತೆಗಳು ನಡೆಯುತ್ತಿವೆ. ಇದರಿಂದ ತಮ್ಮ ಗ್ರಾಮಗಳಲ್ಲಿ, ಅದರಲ್ಲೂ ತಾವಿರುವಲ್ಲಿಯೇ ಸೇವೆಗಳು ದೊರೆಯಲಿವೆ.

ಮಹಾನಗರಪಾಲಿಕೆಗಳು, ನಗರಸಭೆಗಳು ಮತ್ತು ಪುರಸಭೆಗಳಂತಹ ಅತಿ ದೊಡ್ಡನಗರ ಪ್ರದೇಶಗಳಲ್ಲಿ ವಾಸಸ್ಥಳ ಪ್ರಮಾಣಪತ್ರವನ್ನು ವಿತರಿಸುವ ಅಧಿಕಾರವನ್ನು ನಗರಾಭಿವೃದ್ಧಿ ಇಲಾಖೆಗೆ ನೀಡಲು ಆಡಳಿತಾತ್ಮಕ ಅನುಮೋದನೆಗಾಗಿ ಪ್ರಸ್ತಾವನೆ ಸಿದ್ಧಪಡಿಸಲಾಗುತ್ತಿದೆ. ಸುಧಾರಣೆಗಳಿಂದಲೇ ಬದಲಾವಣೆ ಸಾಧ್ಯ ಎಂಬ ಗಟ್ಟಿ ನಿಲುವಿನಿಂದ ಸರ್ಕಾರ ಕಾರ್ಯನಿರ್ವಹಿಸುತ್ತಿದೆ.






Downloaded From:www.kpscvaani.com




ಸಮಾಜಿಕ ಭದ್ರತೆ ಮತ್ತು ಪಿಂಚಣಿ, ಹಿರಿಯ ನಾಗರಿಕರ ಹಿತರಕ್ಷಣೆ ಸರ್ಕಾರದ ಆದ್ಯತಾವಲಯ. ಸಂಧ್ಯಾಕಾಲದ ಹಿರಿಯರು ಆರೋಗ್ಯ ಸಮಸ್ಯೆಗಳಿಗೆ ಪರಿಹಾರ ಪಡೆಯುವ, ಎಲ್ಲಾ ಸರ್ಕಾರಿ ಸೌಲಭ್ಯಗಳನ್ನು ಪಡೆಯುವತನಕ ಹತ್ತು ಹಲವು ಸಮಸ್ಯೆಗಳನ್ನು ಬಗೆಹರಿಸಲಾಗುತ್ತಿದೆ. ಸೇವಾವಲಯದಲ್ಲಿ ಹಿರಿಯ ನಾಗರಿಕರಿಗೆ ಪ್ರಧಾನ ಆದ್ಯತೆ ಕೊಡುತ್ತಿದ್ದು, ಹಿರಿಯರನ್ನು ಸರ್ಕಾರ ಗೌರವದಿಂದ ನಡೆಸಿಕೊಳ್ಳುತ್ತಿದೆ. ಸಂವಿಧಾನದ ನಿರ್ದೇಶಕ ತತ್ವಗಳಡಿ ತಿಳಿಸಿರುವಂತೆ ಅಪಾಯದ ಅಂಚಿನಲ್ಲಿರುವ ಹಾಗೂ ಆರ್ಥಿಕ ಅಭದ್ರತೆಯಲ್ಲಿರುವವರನ್ನು ರಕ್ಷಿಸುವುದು ಸರ್ಕಾರದ ಕರ್ತವ್ಯವಾಗಿದ್ದು, ಇದನ್ನು ಸಾಕಾರಗೊಳಿಸಲು ಪಿಂಚಣಿ ಯೋಜನೆ ಜಾರಿಗೆ ತರಲಾಗಿದೆ. ಕೇಂದ್ರದ ಇಂದಿರಾಗಾಂಧಿ ವೃದ್ಧಾಪ್ಯ ಪಿಂಚಣಿ ಮತ್ತು ರಾಜ್ಯದಿಂದ ಸಂಧ್ಯಾಸುರಕ್ಷಾ ಯೋಜನೆ ಜಾರಿಗೊಳಿಸಲಾಗಿದೆ. ಹಿರಿಯನಾಗರಿಕರಿಗೆ ನೀಡುತ್ತಿದ್ದ ಪಿಂಚಣಿ ಮೊತ್ತವನ್ನು 1000 ರಿಂದ 1200 ರೂಗೆ ಏರಿಕೆ ಮಾಡಲಾಗಿದೆ.

ಖಜಾನೆ 2 ಅಡಿ ರಾಜ್ಯದ ಸುಮಾರು 40 ಲಕ್ಷ ಮಂದಿ ವೃದ್ಧಾಪ್ಯ ವೇತನ ಪಡೆಯುತ್ತಿದ್ದಾರೆ. ಹಿರಿಯ ನಾಗರಿಕರ ಕೋಶದ ಮಾಹಿತಿ ಹಾಗೂ 2011 ರ ಜನಗಣತಿಯ ಅಂದಾಜಿನಂತೆ ಒಟ್ಟು ಜನಸಂಖ್ಯೆಯಲ್ಲಿ ಶೇ 9.60 ರಷ್ಟು ಹಿರಿಯ ನಾಗರಿಕರಿದ್ದಾರೆ. ರಾಜ್ಯದಲ್ಲಿ ಪಾಲನೆ, ಪೋಷಣೆ, ಸಂರಕ್ಷಣೆ ಮತ್ತು ಹಿರಿಯ ನಾಗರಿಕರ ರಕ್ಷಣಾಕಾಯ್ದೆ ಜಾರಿ ಮಾಡಲಾಗಿದೆ. ಹಿರಿಯರ ಹಕ್ಕುಗಳನ್ನು ರಕ್ಷಿಸುವ, ಕಿರುಕುಳ ತಡೆಗಟ್ಟುವ ಜತೆಗೆ ಅವರಿಗೆ ಸೂಕ್ತ ಸೌಲಭ್ಯಗಳನ್ನು ಸಹ ಕಲ್ಪಿಸಲಾಗುತ್ತಿದೆ. ಇವರನ್ನು ಮಕ್ಕಳು ನೋಡಿಕೊಳ್ಳದಿದ್ದರೆ ಸರ್ಕಾರವೇ ಪಾಲಿಸಿ, ಪೋಷಿಸುತ್ತದೆ. ಆಗಿಂದಾಗ್ಗೆ ಹಿರಿಯರ ಹಿತರಕ್ಷಣೆಗೆ ಹಲವಾರು ಸುಧಾರಣೆಗಳು ಮತ್ತು ಕಾನೂನು ತಿದ್ದುಪಡಿಗಳನ್ನು ಸಹ ಸರ್ಕಾರ ತರುತ್ತಿದೆ.

ರಾಜ್ಯದಲ್ಲಿ ಒಟ್ಟು 74.22 ಲಕ್ಷ ಫಲಾನುಭವಿಗಳು ವಿವಿಧ ಯೋಜನೆಗಳಡಿ ಮಾಸಿಕ ಪಿಂಚಣಿ ಸೌಲಭ್ಯ ಪಡೆಯುತ್ತಿದ್ದಾರೆ. ಅವಿವಾಹಿತ, ವಿಚ್ಛೇದಿತ ಮಹಿಳೆಯರು ಮತ್ತು ಲಿಂಗತ್ವ ಅಲ್ಪಸಂಖ್ಯಾತರ ಮಾಸಿಕ ಪಿಂಚಣಿಯನ್ನು 600 ರೂಗಳಿಂದ 800 ರೂಗಳಿಗೆ ಏರಿಕೆ ಮಾಡಲಾಗಿದೆ. ಶೇ 75 ಕ್ಕಿಂತ ಹೆಚ್ಚಿನ ಮನೋವೈಕಲ್ಯತೆ ಹೊಂದಿರುವವರಿಗೆ ಮಾಸಿಕ ಪಿಂಚಣಿ ಮೊತ್ತವನ್ನು 1400 ರಿಂದ 2000 ರೂಗೆ ಏರಿಸಲಾಗಿದ್ದು, ಇದರಿಂದ 63,311 ಫಲಾನುಭವಿಗಳಿಗೆ ಸೌಲಭ್ಯ ದೊರೆಯುತ್ತಿದೆ. ಮನಸ್ವಿನಿ ಮತ್ತು ಮೈತ್ರಿ ಯೋಜನೆಯಡಿ 600 ರೂ ನಿಂದ 800 ರೂಗೆ ಪಿಂಚಣಿ ಮೊತ್ತ ಏರಿಸಲಾಗಿದೆ. "ಮನೆ ಬಾಗಿಲಿಗೆ ಪಿಂಚಣಿ" ಜನಪ್ರಿಯ ಯೋಜನೆಯಡಿ 49,632 ಫಲಾನುಭವಿಗಳಿಗೆ ಮೊಬೈಲ್ ಆ್ಯಪ್ ಆಧರಿಸಿ ಪಿಂಚಣಿ ನೀಡುತ್ತಿರುವುದು ಇಡೀ ದೇಶದಲ್ಲಿಯೇ ವಿನೂತನ ಕ್ರಮ ಎಂದೇ ಹೇಳಬೇಕಾಗುತ್ತದೆ. ಈ ವರ್ಷದ ಮೇ 15 ರಂದು 72 ಗಂಟೆಗಳಲ್ಲಿ ಮನೆ ಬಾಗಿಲಿಗೆ ಪಿಂಚಣಿ ನೀಡುವ ಪರಿಷ್ಕೃತ ಕಾರ್ಯಕ್ರಮ ಜಾರಿ ಮಾಡಲಾಗಿದೆ. 7,102 ಮಂದಿ ಪಿಂಚಣಿಗಾಗಿ ಕೋರಿಕೆ ಸಲ್ಲಿಸಿದ್ದು, 6,572 ಫಲಾನುಭವಿಗಳಿಗೆ ಪಿಂಚಣಿ ಮಂಜೂರಾತಿಗೆ ಶಿಫಾರಸ್ಸು ಮಾಡಲಾಗಿದೆ. 5,159 ಪ್ರಕರಣಗಳಲ್ಲಿ ಮಂಜೂರಾತಿ ಆದೇಶ ನೀಡಲಾಗಿದೆ. ನವೋದಯ ಮೊಬೈಲ್ ಆ್ಯಪ್ ಮೂಲಕ ಫಲಾನುಭವಿಗಳ ಸಮಗ್ರ ಪರಿಶೀಲನೆ ನಂತರ ಮೃತಪಟ್ಟ, ವಲಸೆ ಹೋದ, ಅನರ್ಹ 3.66 ಲಕ್ಷ ಫಲಾನುಭವಿಗಳನ್ನು ಗುರುತಿಸಿ ಪಿಂಚಣಿ ಸ್ಥಗಿತಗೊಳಿಸಿದ್ದು, ಇದರಿಂದ ಬೊಕ್ಕಸಕ್ಕೆ 439 ಕೋಟಿರೂ ಉಳಿತಾಯವಾಗಿದೆ.

ಕೋವಿಡ್ – 19 ನಿಂದ ಮೃತಪಟ್ಟ ಬಡ ಕುಟುಂಬದ 53,538 ಮಂದಿಗೆ ನೇರ ಸೌಲಭ್ಯ ವರ್ಗಾವಣೆ ಮೂಲಕ ತಲಾ 50 ಸಾವಿರ ರೂ. ಮತ್ತು ಆರೋಗ್ಯ





Downloaded From:www.kpscvaani.com



ಇಲಾಖೆ ದತ್ತಾಂಶದಲ್ಲಿನ ಮಾಹಿತಿಯಂತೆ 14,398 ಬಿಪಿಎಲ್ ಕುಟುಂಬದವರಿಗೆ ಹೆಚ್ಚುವರಿಯಾಗಿ 1 ಲಕ್ಷರೂ ಪರಿಹಾರವನ್ನು ಜಿಲ್ಲಾಧಿಕಾರಿಗಳ ಮೂಲಕ ವಿತರಿಸಿದ್ದು, ಕೋವಿಡ್ ಪರಿಹಾರಕ್ಕಾಗಿ ಒಟ್ಟು 412 ಕೋಟಿ ರೂ ವೆಚ್ಚ ಮಾಡಲಾಗಿದೆ.

ಈ ವರ್ಷ ವಿವಿಧ ಮಠಗಳು ಮತ್ತು ಸಂಸ್ಥೆಗಳಿಗೆ ಈ ವರ್ಷ 20 ಕೋಟಿ ರೂ ಅನುದಾನ ನಿಗದಿಯಾಗಿದ್ದು, ವಿವಿಧ 48 ಮಠಗಳು ಮತ್ತು ಸಂಸ್ಥೆಗಳಿಗೆ ಈವರೆಗೆ 5 ಕೋಟಿ ರೂ ಬಿಡುಗಡೆ ಮಾಡಲಾಗಿದೆ. ಮುಜರಾಯಿ ಇಲಾಖೆಯ ನೌಕರರಿಗೆ 6ನೇ ವೇತನ ಆಯೋಗದ ವೇತನಶ್ರೇಣಿ ಹಾಗೂ ದೇವಾಲಯದ ನೌಕರರಿಗೆ ಆರೋಗ್ಯ ವಿಮಾ ಯೋಜನೆ ಜಾರಿ ಮಾಡಲಾಗಿದೆ. ದೇವಾಲಯಗಳಲ್ಲಿ ಡಿಜಿಟಲ್ ತಂತ್ರಜ್ಞಾನವನ್ನು ಯಶಸ್ವಿಯಾಗಿ ಅಳವಡಿಸಲಾಗುತ್ತಿದೆ.

ಕಾಶಿಯಾತ್ರೆ ಕೈಗೊಳ್ಳುವ ಯಾತ್ರಾರ್ಥಿಗಳಿಗೆ ಈ ವರ್ಷದಿಂದ 5 ಸಾವಿರ ರೂ ಸಹಾಯಧನ ನೀಡುವ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಇತ್ತೀಚೆಗಷ್ಟೇ ಚಾಲನೆ ನೀಡಿದ್ದು, 30 ಸಾವಿರ ಯಾತ್ರಾರ್ಥಿಗಳು ಸೌಲಭ್ಯ ಪಡೆಯಲಿದ್ದಾರೆ. ಇದರ ಜೊತೆಗೆ ಪುಣ್ಯಕ್ಷೇತ್ರಗಳ ಪ್ರವಾಸಕ್ಕೆ ತೆರಳುವವರಿಗೆ ರಿಯಾಯಿತಿ ದರದ ಪ್ಯಾಕೇಜ್ ನೀಡಲು ಮುಜರಾಯಿ ಇಲಾಖೆ ಕಾರ್ಯೋನ್ಮುಖವಾಗಿದೆ. ರೈಲ್ವೆಯಿಂದ "ಭಾರತ್ ಗೌರವ್" ಯೋಜನೆಯಡಿ ಪ್ರಸಿದ್ಧ ಯಾತ್ರಾಸ್ಥಳಗಳಿಗೆ ಪ್ರವಾಸ ಏರ್ಪಡಿಸಲು ನಿರ್ಧರಿಸಿದ್ದು, ಇದಕ್ಕಾಗಿ ಮಾರ್ಗಸೂಚಿ ಹೊರಡಿಸಲಾಗುತ್ತಿದೆ. ಯುಗಾದಿ ಸಂದರ್ಭದಲ್ಲಿ "ರಾಜ್ಯ ಧಾರ್ಮಿಕ ದಿನಾಚರಣೆ" ಆಚರಿಸಲು 24.03.2022 ರಂದು ಸುತ್ತೋಲೆ ಹೊರಡಿಸಿದ್ದು, ದೀಪಾವಳಿ/ ಬಲಿಪಾಡ್ಯಮಿ ದಿನದಂದು ಎಲ್ಲಾ ದೇವಾಲಯಗಳಲ್ಲಿ ಗೋಪೂಜೆ ನೆರವೇರಿಸಲು ತೀರ್ಮಾನಿಸಲಾಗಿದೆ. ಆಂಧ್ರಪ್ರದೇಶದ ತಿರುಮಲದಲ್ಲಿ ಕರ್ನಾಟಕ ರಾಜ್ಯ ಛತ್ರಕ್ಕೆ ಸೇರಿದ ಜಾಗದಲ್ಲಿ ಟಿ.ಟಿ.ಡಿಯಿಂದ ವಸತಿಗೃಹ, ಕಲ್ಯಾಣಮಂಟಪ ಇತ್ಯಾದಿ ಮೂಲಸೌಕರ್ಯವನ್ನು 200 ಕೋಟಿ ರೂ ವೆಚ್ಚದಲ್ಲಿ ಕೈಗೊಳ್ಳಲಾಗುತ್ತಿದ್ದು, ಟಿಟಿಡಿಗೆ 100 ಕೋಟಿ ರೂ ಬಿಡುಗಡೆ ಮಾಡಲಾಗಿದೆ. ಮಹಾರಾಷ್ಟ್ರದ ಪಂಡರಾಪುರ, ಗುಡ್ಡಾಪುರ ಮತ್ತಿತರ ಕಡೆಗಳಲ್ಲಿ ರಾಜ್ಯದ ಯಾತ್ರಾರ್ಥಿಗಳಿಗೆ ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ ಸರ್ಕಾರ ಕಾರ್ಯೋನ್ಮುಖವಾಗಿದೆ.

ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆಯಲ್ಲಿ ಎಲ್ಲಾ ವಲಯಗಳನ್ನು ಗಣಕೀಕರಣ ಮಾಡಲಾಗಿದೆ. ಇಲಾಖೆಯ ಸೇವೆಗಳನ್ನು ಆನ್‌ಲೈನ್ ವ್ಯವಸ್ಥೆಗೆ ಒಳಪಡಿಸಲಾಗಿದೆ. ಇಲಾಖೆ ತನ್ನದೇ ಆದ ದತ್ತಾಂಶ ಕೇಂದ್ರ ಹೊಂದಿದ್ದು, ಮಾಹಿತಿ ತಂತ್ರಜ್ಞಾನ ಮತ್ತು ಇ ಆಡಳಿತಕ್ಕೆ ವಿಶೇಷ ಒತ್ತು ನೀಡಿದೆ.

### "ಕಂದಾಯ ದಾಖಲೆ – ಮನೆಬಾಗಿಲಿಗೆ"

ಇದು ಕಂದಾಯ ಇಲಾಖೆಯ ಮಹತ್ವದ ಕಾರ್ಯಕ್ರಮ. 11 ಇ, ತತ್ಕಾಲ್ಪೋಡಿ, ಹದ್ದುಬಸ್ತು, ಇತ್ಯಾದಿ ಎಲ್ಲಾ ಅರ್ಜಿಗಳನ್ನು ಗಣಕೀಕೃತ ಮೋಜಣಿ ವ್ಯವಸ್ಥೆಗೆ ತರಲಾಗಿದೆ. ಮೊಬೈಲ್ ಆ್ಯಪ್ ಮೂಲಕ ಪೋಡಿ ಮತ್ತು ಅಳತೆ ಕಾರ್ಯವನ್ನು ಖುದ್ದಾಗಿ ಮಾಡಿಕೊಳ್ಳುವ "ಸ್ವಾವಲಂಬಿ"ಯೋಜನೆಯನ್ನು 30–04–2022 ರಂದು ಜಾರಿ ಮಾಡಲಾಗಿದೆ. ಆನ್‌ಲೈನ್ ವ್ಯವಸ್ಥೆ ಜಾರಿಗೊಳಿಸಿದ ನಂತರ ಈವರೆಗೆ 10786 ಜನ ಸ್ವಯಂ ಪ್ರೇರಿತವಾಗಿ ಲಾಗಿನ್ ಆಗಿ ಪೋಡಿ ಕೆಲಸ ಮಾಡಿಕೊಂಡಿದ್ದಾರೆ. ರಾಜ್ಯದ 33 ಸಾವಿರ ಗ್ರಾಮಗಳ ಆಕಾರಬಂದ್‌ಗಳನ್ನು ಗಣಕೀಕರಣ ಗೊಳಿಸಲಾಗಿದೆ. ಗಣಕೀಕೃತ ಆಕಾರಬಂದ್ ಅನ್ನು ಇದೀಗ ಭೂಮಿ ತಂತ್ರಾಂಶದೊಂದಿಗೆ ಹೊಂದಾಣಿಕೆ ಮಾಡಿದ್ದು, ಇನ್ನು ಮುಂದೆ ಸಾರ್ವಜನಿಕರು ಆಕಾರಬಂದ್‌ಗಳನ್ನು ಇಲಾಖೆಯ ವೆಬ್‌ಸೈಟ್ ಮತ್ತು ಸೇವಾಸಿಂಧು ವೆಬ್‌ಸೈಟ್‌ನಲ್ಲಿ ಅರ್ಜಿ ಸಲ್ಲಿಸಿ ಪಡೆಯಲು ಸರ್ಕಾರ ಅವಕಾಶ ಮಾಡಿಕೊಟ್ಟಿದೆ. ಪಹಣಿ, ಅಟ್ಲಾಸ್, ಆದಾಯ ಮತ್ತು ಜಾತಿ ಪ್ರಮಾಣಪತ್ರಗಳನ್ನು ಮುದ್ರಿಸಿ ಇವುಗಳನ್ನು ಒಂದು ಪ್ಲಾಸ್ಟಿಕ್ ಚೀಲದಲ್ಲಿರಿಸಿ ರೈತರ ಮನೆ ಬಾಗಿಲಿಗೆ ತಲುಪಿಸಲಾಗುತ್ತಿದೆ. 1,05,21,187 ಪಹಣಿ, 21,80,120 ಅಟ್ಲಾಸ್, 75,53,976 ಜಾತಿ ಪ್ರಮಾಣಪತ್ರ, 45,83,424 ಆದಾಯ ಪ್ರಮಾಣಪತ್ರಗಳನ್ನು ರೈತರ ಮನೆಗಳಿಗೆ ತಲುಪಿಸಿರುವುದು ಯೋಜನೆಯ ಯಶಸ್ಸಿಗೆ ಕಾರಣವಾಗಿದೆ. ■





Downloaded From:www.kpscvaani.com



# ಸ್ವಾತಂತ್ರ್ಯೋತ್ಸವವೀಗ ಅಮೃತಂಗಮಯ...

**"ಹರ್ ಘರ್ ತಿರಂಗಾ" ಎಂಬ ಘೋಷವಾಕ್ಯದೊಂದಿಗೆ ಈ ವರ್ಷ ಭಾರತೀಯರೆಲ್ಲರಿಗೂ ತಮ್ಮ ತಮ್ಮ ಮನೆಗಳ ಮೇಲೆ ಧ್ವಜದ ನೀತಿ ಸಂಹಿತೆಯನ್ನು ಪಾಲಿಸಿ ಧ್ವಜಾರೋಹಣವನ್ನು ನೆರವೇರಿಸಲು ಅವಕಾಶವನ್ನು ಕಲ್ಪಿಸಿಕೊಟ್ಟಿರುವ ಕಾರಣಕ್ಕೆ ನಾವೆಲ್ಲರೂ ಹೆಮ್ಮೆಯಿಂದ ಸಂಭ್ರಮಿಸಿಕೊಳ್ಳಬೇಕು.**

ವೆಂಕಟೇಶ ಕೆ. ಜನಾದ್ರಿ

ಎಪ್ಪತ್ತೈದು ವರ್ಷದ ಹಿಂದೆ ಈ ದೇಶದ ಸ್ವಾತಂತ್ರ್ಯದ ಹಕ್ಕಿ ಪಂಜರದಿಂದ ಮುಕ್ತವಾಗಿ ಬಯಲಿಗೆ ಬಂದು ತನ್ನ ಗರಿಬಿಚ್ಚಿ ಸ್ವಚ್ಛಂದವಾಗಿ ಮುಗಿಲಗಲ ಹಾರಾಡುತ್ತ ಸಂಭ್ರಮಿಸುತ್ತ ಇಂದಿಗೂ ಬೀಗುತ್ತಲಿದೆ. ಭಾರತಾಂಬೆಗೆ ಹೆಮ್ಮೆಯಿಂದ ತಲೆ ಎತ್ತಿ ನಡೆಯುತ, ಸ್ವರವೆತ್ತಿ ನುಡಿಯುತ ವಿಶ್ವವೇ ತನ್ನತ್ತ ಗಮನಿಸುವಂತೆ ಮಾಡಿದ ಮತ್ತು ಮಾಡುತ್ತಿರುವ ಈ ಅಮೃತ ಮಹೋತ್ಸವದ ವರ್ಷಾಚರಣೆಯ ಸಂತಸವು ಇಡೀ ಭಾರತೀಯರ ಖುಷಿಯನ್ನು ಇಮ್ಮಡಿಗೊಳಿಸಿದೆ. 2022ರ ಆಗಸ್ಟ್ 15 ಸೋಮವಾರ ನಮಗೆಲ್ಲ ಸಾಮಾನ್ಯ ದಿನವಲ್ಲ. ಈ ಸಂಭ್ರಮಾಚರಣೆಯನ್ನು ಸರ್ಕಾರವು, ಸರ್ಕಾರ ಮಟ್ಟದ ಕಾರ್ಯಕ್ರಮವನ್ನಾಗಿಸಿ ಸೀಮಿತಗೊಳಿಸದೇ **"ಹರ್ ಘರ್ ತಿರಂಗಾ"** ಎಂಬ ಘೋಷ ವಾಕ್ಯದೊಂದಿಗೆ ದಿನಾಂಕ 13.08.2022 ರಿಂದ 15.08.2022ರ ವರೆಗೂ ಭಾರತದಾದ್ಯಂತ ಆಸಕ್ತರೆಲ್ಲ ತಮ್ಮ ತಮ್ಮ ಮನೆಯ ಮೇಲೆಯೂ ಭಾರತದ ಹೆಮ್ಮೆಯ ತಿರಂಗಾ ಧ್ವಜಾರೋಹಣವನ್ನು ಶಿಸ್ತುಬದ್ಧವಾಗಿ ನೆರವೇರಿಸಿ ತಮ್ಮ ಮನದಾಳದ ಆತ್ಮನಿರ್ಭರತೆಯಿಂದ ಧ್ವಜದತ್ತ ತಲೆ ಎತ್ತಿ ನಡೆದು, ಧ್ವಜ ಸ್ಥಂಭಕ್ಕೆ ತಲೆ ಬಾಗಿ ನಮಿಸುವ ವಿಧೇಯತೆಯನ್ನು ವಿನಯವಂತಿಕೆಯಿಂದ ಮನದುಂಬಿ ಮೆರೆಯುವ ಅಮೃತಾವಕಾಶವನ್ನು ಕಲ್ಪಿಸಿಕೊಟ್ಟಿದ್ದು ನಮ್ಮೆಲ್ಲರ ಮನದೊಳಗಿನ ಮನಸಾಕ್ಷಿಯೆಂಬ ಪಕ್ಷಿಯನ್ನು ಹಾರಲು ಬಿಟ್ಟು ಆಗಸದೆತ್ತರಕ್ಕೆ ನಮ್ಮ ಸಾಧ್ಯತೆಗಳನ್ನು ಹಿಗ್ಗಿಸಿಕೊಳ್ಳಬೇಕಿದೆ.

ಹೌದು, ಖಂಡಿತ ಈ ವರ್ಷದ ಸ್ವಾತಂತ್ರ್ಯೋತ್ಸವ ದಿನಾಚರಣೆಯ ಸೋಮವಾರ ಸಾಮಾನ್ಯ ಸೋಮವಾರ ಅಲ್ಲ. ಎಪ್ಪತ್ತೈದು ವರ್ಷಗಳ ಹಿಂದೆ ಬ್ರಿಟೀಷ್ ಸಂಕೋಲೆಗಳು ಬಿಗಿಯಾಗಿ ಬಂಧಗಳಿಂದ ಬಂಧಿಸಿದ್ದ ನಮ್ಮನ್ನು ನಮ್ಮ ಸಹನೆಯ ಹೋರಾಟದಿಂದ ಭಯಭೀತವಾಗಿ ರಾತ್ರೋರಾತ್ರಿ ಕಳಚಿಕೊಂಡು ತಮ್ಮ ನೆಲೆಗೆ ಹೋಗುವಾಗ ನಮ್ಮನ್ನು ನಮ್ಮ ನಾಡಿನ ಬಯಲಲ್ಲಿ ಬಯಲಾಳಗಲಕ್ಕೂ ಗರಿಬಿಚ್ಚಿ ಹಾರಾಡಲು ಅಣಿಗೊಳಿಸಿದ ಕ್ಷಣವದು. 1947ರ ಆಗಸ್ಟ್ 14ರ ಮಧ್ಯರಾತ್ರಿ ಭಾರತದ ವೈಸರಾಯ್ ಆಗಿದ್ದ ಬ್ರಿಟಿಷ್ ಅಧಿಕಾರಿ ಲಾರ್ಡ್ ಮೌಂಟ್ ಬ್ಯಾಟನ್ ಭಾರತದ ಜ್ಯೋತಿಯ ಬೆಳಗನ್ನು ಭಾರತೀಯರಿಗೆ ಹಸ್ತಾಂತರಿಸಿದರು. ಭಾರತ ಮಾತೆಯ



Downloaded From:www.kpscvaani.com

ಮೊಗದಲ್ಲೊಂದು ಹಸನ್ಮುಖಿಯ ಭಾವಬೆಳಗು. ಜವಾಹರಲಾಲ್ ನೆಹರು ಮೊದಲ ಪ್ರಧಾನಿಯಾಗಿ ಧ್ವಜಾರೋಹಣ ನೆರವೇರಿಸುವಾಗ "ಭಾಗ್ಯದೊಡನೆ ಒಪ್ಪಂದ" ಎಂಬ ವಿಶೇಷಣದಿಂದ ಮಾತನಾಡುತ್ತಾರೆ. ಅವರ ಮಾತಿನಂತೆ ಅಂದಿನಿಂದ ಭಾರತೀಯರ ಭಾಗ್ಯವಿದಾತನಿಗೆ ಭಾಗ್ಯದ ಬಾಗಿಲು ಮುಕ್ತವಾಗಿ ತೆರೆದಂತೆ ಮುಂದಿನ ದಿನಗಳೆಲ್ಲ ಭಾಗ್ಯಗಳ ಸುರಿಮಳೆಯೇ ಸರಿ. ಅದಕ್ಕೆ ಭಾಗ್ಯದೊಡನೆ ಒಪ್ಪಂದ ಎಂಬುದು ಅರ್ಥಪೂರ್ಣವೇ ಸರಿ.

ಭಾರತದ ಬುದ್ಧನಿಗೆ ಜಗತ್ತು ಮಲಗಿದ್ದಾಗ ಮಧ್ಯರಾತ್ರಿಯೇ ಜ್ಞಾನೋದಯವಾದಂತೆ ದಿನಾಂಕ 14.08.1947ರ ಮಧ್ಯರಾತ್ರಿಯ ಗಂಟೆ ಹೊಡೆಯುತ್ತಿದ್ದಂತೆ ಭಾರತವು ಚಲನಶೀಲ ಮತ್ತು ಸ್ವಾತಂತ್ರ್ಯಕ್ಕೆ ಎಚ್ಚರಗೊಳ್ಳುತ್ತದೆ. ಇತಿಹಾಸದಲ್ಲಿ ಅಪರೂಪವಾಗಿ ಬರುವ ಇಂಥ ಘಟನೆಗಳ ಈ ಘಳಿಗೆಯಲ್ಲಿ ನಮ್ಮ ನಾಡು ಹಳತಿನಿಂದ ಹೊಸತಿಗೆ ನೆಮ್ಮದಿಯ ನಾಳೆಗಳನ್ನು ಕಾಣುವ ಹಂಬಲ ಹೊತ್ತು ಕತ್ತಲೆಯಿಂದ ಬೆಳಕಿನತ್ತ ಹೆಜ್ಜೆ ಇಡುವ ಕ್ಷಣವದು. ಶತಮಾನಗಳ ಸಂಕೋಲೆಗಳಿಂದ ಬಿಡಿಸಿಕೊಂಡು ತನ್ನ ಹಳೆಯ ಯುಗ ಮುಗಿಸಿ ಬಹುಕಾಲ ಅದುಮಿಟ್ಟ ದೇಶವೊಂದರ ಸರ್ವಮನಗಳ ಚೇತನವು ತನ್ನ ಅಭಿವ್ಯಕ್ತಿಯನ್ನು ಕಂಡುಕೊಳ್ಳಲಾರಂಭಿಸಿದ ನಡುರಾತ್ರಿಯದು. ನಾವಂದು ನಮ್ಮ ದುರಾದೃಷ್ಟದ ಕತ್ತಲೆಯ ಕಾಲವನ್ನು ಮುಗಿಸಿ ಕೆಲವೇ ಕ್ಷಣಗಳಲ್ಲಿ ಬರುವ ಬೆಳಗನ್ನು ಸಂಭ್ರಮದಿಂದ ಸ್ವಾಗತಿಸಿಕೊಳ್ಳಲು ಸನ್ನದ್ಧರಾಗಿದ್ದೇವೆಂಬ ದಿಟ್ಟಭಾವದಲ್ಲಿ ಪಡೆದುಕೊಂಡ ಸ್ವಾತಂತ್ರ್ಯದ ದೀವಿಗೆಯದು.

ಭಾರತ ಮಾತೆಗೀಗ 75ರ ಅಮೃತ ಮಹೋತ್ಸವ. ಆ ಅಮ್ಮನನ್ನು ನಾವುಗಳು ಹೇಗೆ ನೋಡಿಕೊಳ್ಳಬೇಕೆಂಬುದನ್ನು ವಿವೇಚಿಸಿಕೊಳ್ಳಬೇಕಾದ ನಾವು ಮತ್ತು ನಮ್ಮ ಮುಂದಿನ ನಡೆಯು ಬಹಳ ಎಚ್ಚರಿಕೆಯಿಂದ ಕೂಡಿರಬೇಕಾಗಿದೆ. ಏಕೆಂದರೆ ಈ ಸ್ವಾತಂತ್ರ್ಯದ ಬೆಳಗು ನಮಗೆ ಸುಲಭವಾಗಿ ದೊರೆಯಲಿಲ್ಲ. ನಾಡಿನಾದ್ಯಂತ ಅದೆಷ್ಟು ಜೀವಗಳು ಬಲಿಯಾಗಿವೆ. ಬಹುದೊಡ್ಡ ಹೋರಾಟದ ಸಂಗ್ರಾಮದಲ್ಲಿ ನಮ್ಮೆಲ್ಲರ ಅಮ್ಮ ಭಾರತಮ್ಮ ಅದೆಷ್ಟು ನೊಂದು ಸಂಕಟವನ್ನು ಅನುಭವಿಸಿದ್ದಾಳೆಂಬುದು ಅನುಭವಿಸಿದ್ದ ಅಂದಿನ ಅವಳ ಮಡಿಲ ಮಕ್ಕಳಿಗೆ ಮಾತ್ರ ಅರಿವಿನಲ್ಲಿರಲು ಸಾಧ್ಯ.

ಗಾಂಧೀಜಿ ಭಾರತದ ಸ್ವಾತಂತ್ರ ಸಂಗ್ರಾಮದ ನೇತೃತ್ವ ವಹಿಸಿದ್ದರಾದರೂ ಸ್ವಾತಂತ್ರ ದೊರೆತ ಅಂದಿನ ಬೆಳಗಿನ ಧ್ವಜಾರೋಹಣದ ಸಂಭ್ರಮದಲ್ಲಿ ಭಾಗಿಯಾಗದೇ ಸಾವಿರಾರು ಕಿ.ಮೀ. ದೂರದ ನೌಕಾಲಿಯಲ್ಲಿ ಹಿಂದೂ ಮುಸ್ಲಿಂ ಮಧ್ಯ ಕೋಮು ಗಲಭೆಯನ್ನು ತಡೆಯುವ ಪಣತೊಟ್ಟು ಉಪವಾಸ ಇದ್ದು ಸಂಕಟ ಪಡುತ್ತಿದ್ದರು. ಈ ಬಗೆಯ ಹತ್ತು ಹಲವು ಕಡೆ ಅಸಮಧಾನ, ಅಸಮಾನತೆ ಕೋಮು ಗಲಭೆ, ಅಸಹಕಾರ, ಅರಾಜಕತೆ, ದುರಾಡಳಿತ, ರಾಜಸತ್ತೆಯ ಒತ್ತಡಗಳು, ಪಟ್ಟಭದ್ರರ ಅಧಿಕಾರದ ದಾಹ, ನೊಂದ ಜನರನ್ನು ಮತ್ತಷ್ಟು ತುಳಿಯುವ ಕುತಂತ್ರಿಗಳಿಂದ ನಿಜಾರ್ಥದಲ್ಲಿ ಸ್ವಾತಂತ್ರ್ಯೋತ್ಸವದ ಅಂದಿನ ಸಂಭ್ರಮ ಕೆಲ ತಲ್ಲಣಿಗರ ಮನದಲ್ಲಿರಲಿಲ್ಲ. ಅದಕ್ಕಾಗಿ ಗಾಂಧೀಜಿ ಭಾರತ ಮಾತೆಗೆ ಹೊರಗಿನವರ ಬಂಧನದಿಂದ ಮುಕ್ತಿಗೊಳಿಸುವ ಬಗೆ ಯೋಚಿಸಿದ್ದರೆ, ಡಾ. ಬಾಬಾ ಸಾಹೇಬ ಅಂಬೇಡ್ಕರರು ಭಾರತ ಮಾತೆಯನ್ನು ಒಳಗಿನವರ ಕಪಿ ಮುಷ್ಟಿಯಿಂದ ಮುಕ್ತಗೊಳಿಸಿ ಸರ್ವರಿಗೂ ಸಮಾನಾವಕಾಶವನ್ನು ಕಲ್ಪಿಸುವ ಸರ್ವೋದಯದ ಕನಸನ್ನು ಹೊತ್ತು ಪ್ರಯತ್ನಿಸುತ್ತಿದ್ದರು. ಇವರೆಲ್ಲರ ಪ್ರಯತ್ನದ ಫಲಿತ ಇಂದಿನ ಸ್ವತಂತ್ರ ಭಾರತ.

**ಮುಂದಿನ 25 ವರ್ಷ ಕಾಲವನ್ನು ಏನು ಅಮೃತ ವರ್ಷವೆಂದು ಪ್ರಧಾನಮಂತ್ರಿ ಅವರು ಹೇಳಿರುವಂತೆ....ಅದಕ್ಕೆ ಶುಭ ಆರಂಭವನ್ನು, ಶಕ್ತಿಯುತ ಆರಂಭವನ್ನು ಮಾಡುವ ಸಲುವಾಗಿ ದೇಶಭಕ್ತಿ ಪ್ರದರ್ಶನ ಮಾಡಲು ಆಗಸ್ಟ್ 13 ರಿಂದ 15 ರ ವರೆಗೆ ಪ್ರತಿಯೊಬ್ಬರು ಸಹ ತಮ್ಮ ಮನೆಯ ಮೇಲೆ ಧ್ವಜವನ್ನು ಏರಿಸೋಣ. ಆ ಮೂಲಕ ಎಲ್ಲರೂ ಸೇರಿ ರಾಷ್ಟ್ರ ಭಕ್ತಿಯನ್ನು ಮೆರೆಯೋಣ.**

-ಬಸವರಾಜ ಎಸ್ ಬೊಮ್ಮಾಯಿ
ಮುಖ್ಯಮಂತ್ರಿಗಳು

ಬ್ರಿಟಿಷರು ನಮಗೆ ಸ್ವಾತಂತ್ರ ಕೊಡುವಾಗಲೂ ತಮ್ಮ ಒಡೆದು ಆಳುವ ನೀತಿಯನ್ನು ಬಿಟ್ಟಿರಲಿಲ್ಲ. ಅಂದಿನ ಇಲ್ಲಿಯ ರಾಜಶಾಹಿಗಳಿಗೆ ಮೂರು ಬಗೆಯ ಅವಕಾಶವನ್ನು ಕೊಟ್ಟಿದ್ದರು. ಅವೆಂದರೆ ಭಾರತ ಒಕ್ಕೂಟದ ಆಡಳಿತ ವ್ಯಾಪ್ತಿಗೆ ಒಳಪಡಬಹುದು, ವಿಭಜನೆಯಾಗುತ್ತಿರುವ ಪಾಕಿಸ್ತಾನಕ್ಕೆ ತೆರಳಬಹುದು, ಸ್ವಾತಂತ್ರ ರಾಜರೆಂದು ತಮ್ಮ ಪ್ರದೇಶವನ್ನು ರಾಜಸತ್ತೆಯ ಆಡಳಿತದ ಮೂಲಕ ಆಡಳಿತ ನಡೆಸುತ್ತ ಮುಂದುವರೆಯಬಹುದೆಂಬುದಾಗಿತ್ತು. ಈ ಮೂರು ಬಗೆಯ ಕುತಂತ್ರದ ಫಲಿತವಾಗಿ ಎಲ್ಲೆಡೆ ಸ್ವಾತಂತ್ರ್ಯದ ಧ್ವಜ ಹಾರುತ್ತಿದ್ದರೂ ಕೆಲ ಪ್ರಾಂತಗಳು ರಾಜಸತ್ತೆಯ ಬಂಧದಲ್ಲಿ ನರಳುತ್ತಿರುವ ಭಾರತಾಂಬೆಯ ಕರುಳ ಸಂಕಟವನ್ನರಿತ ಸರ್ದಾರ ವಲ್ಲಭಬಾಯ್ ಪಟೇಲರು ಏಕೀಕರಣದ ಹೊಣೆಗಾರಿಕೆಯನ್ನು ಹೊತ್ತು ದೇಶ ವಿಭಜನೆಯಿಂದ ಬೇರ್ಪಟ್ಟರೂ ಛಿದ್ರಛಿದ್ರವಾಗಿ ಏಕತೆಯಲ್ಲಿ ಭಿನ್ನತೆಯಾಗುಳಿದಿದ್ದ ಭಾರತಾಂಬೆಯ





Downloaded From:www.kpscvaani.com



ಮಡಿಲ ಮಕ್ಕಳನ್ನು ಅವಳ ಮಡಿಲಲ್ಲಿ ಪವಡಿಸಿ ನಲಿಯುವಂತೆ ಇಡೀ ಭಾರತವನ್ನು ಏಕತೆಯ ತೊಟ್ಟಿಲಿನಂತೆ ಮಾಡಿ ಜಾತಿ–ಧರ್ಮ–ಪ್ರಾಂತ್ಯ–ಸಂಸ್ಕೃತಿಗಿಂತ ಬಹುದೊಡ್ಡ ಮನಸ್ಸುಗಳಿಂದ ಇಲ್ಲಿಯವರು ಒಂದಾಗಿ ಬಾಳಬೇಕೆಂಬುದನ್ನು ಕಲಿಸಿಕೊಟ್ಟು ಸಾಧಿಸಿ ತೋರಿಸಿದರು. ಹೀಗೆ ನಮಗೊಂದು ದೇಶ, ಆ ದೇಶಕ್ಕೊಂದು ಧ್ವಜ, ಆ ಧ್ವಜವನ್ನು ಸಂಭ್ರಮದಿಂದ ಆರೋಹಣ ಮಾಡಿ ಅದರಡಿಯಲ್ಲಿ ನಾವೆಲ್ಲ ಒಂದೆಂಬ ಭಾವದಲ್ಲಿ ಇಡೀ ದೇಶಿಗರ ಮನಸ್ಸನ್ನು ಕಟ್ಟಿಕೊಳ್ಳಬೇಕಾದ ದಿನವೇ ಸ್ವಾತಂತ್ರ್ಯೋತ್ಸವದ ದಿನ.

"ಹರ್ ಘರ್ ತಿರಂಗಾ" ಎಂಬ ಘೋಷವಾಕ್ಯದೊಂದಿಗೆ ಈ ವರ್ಷ ಭಾರತೀಯರೆಲ್ಲರಿಗೂ ತಮ್ಮ ತಮ್ಮ ಮನೆಗಳ ಮೇಲೆ ಧ್ವಜದ ನೀತಿ ಸಂಹಿತೆಯನ್ನು ಪಾಲಿಸಿ ಧ್ವಜಾರೋಹಣವನ್ನು ನೆರವೇರಿಸಲು ಅವಕಾಶವನ್ನು ಕಲ್ಪಿಸಿಕೊಟ್ಟಿರುವ ಕಾರಣಕ್ಕೆ ನಾವೆಲ್ಲರೂ ಹೆಮ್ಮೆಯಿಂದ ಸಂಭ್ರಮಿಸಿಕೊಳ್ಳಬೇಕು. ಭಾರತದಾದ್ಯಂತ ಹಾರಾಡುತ್ತಿರುವ ಇಂದಿನ ತಿರಂಗ ಧ್ವಜಕ್ಕೆ ತನ್ನದೇ ಆದ ವಿಶೇಷತೆ ಇದೆ. ಕೇಸರಿ, ಬಿಳಿ, ಹಸಿರು ಪಟ್ಟಿಗಳ ಮಧ್ಯದಲ್ಲಿ ಅಶೋಕ ಚಕ್ರವಿದೆ. ಕೇಸರಿ ಬಣ್ಣವು ಎಲ್ಲಕ್ಕಿಂತ ಮೇಲಿನ ಪಟ್ಟಿಯ ಬಣ್ಣವಾಗಿದ್ದು ಸ್ವಾತಂತ್ರ್ಯ ಹೋರಾಟದಲ್ಲಿ ಜೀವ ತೆತ್ತವರ, ಹುತಾತ್ಮರ, ದೇಶಾಭಿಮಾನ ಮತ್ತು ತ್ಯಾಗವನ್ನು ಸಾಂಕೇತಿಸುತ್ತದೆ. ಬಿಳಿಯ ಬಣ್ಣ ಸತ್ಯ, ಪಾವಿತ್ರತೆಗಳ ಪ್ರತೀಕವಾಗಿ, ಸತ್ಯವೇ ನಮ್ಮ ತಾಯಿ ತಂದೆಯಾಗಿ, ನಮ್ಮ ದೇವರಾಗಿ ನಮ್ಮೆಲ್ಲರ ಅಂತರಂಗ ಬಹಿರಂಗ ಸದಾ ಶುಭ್ರವಾಗಿ ಶಾಂತಿಯ ನೆಲೆವೀಡಾಗಿರಲೆಂಬ ಆಶಯವಿಲ್ಲಿದೆ. ಕೊನೆಯ ಪಟ್ಟಿಯಲ್ಲಿರುವ ಹಸಿರು ಬಣ್ಣ ಚೇತನ ಮತ್ತು ಅಭ್ಯುದಯಗಳ ಪ್ರತೀಕವಾಗಿದೆ. ಪ್ರಕೃತಿಯ ಫಲವತ್ತಾದ ಮಣ್ಣಿನಿಂದ ಇಡೀ ನಾಡೆಲ್ಲ ಹಸಿರು ಮಯವಾಗಿ ಈ ನಾಡಿಗರೆಲ್ಲರೂ ಹಸಿವಿನಿಂದ ಮುಕ್ತವಾಗಿರಲೆಂಬುದಾಶಯವಾಗಿದೆ. ಹಸಿರು ನಿಷ್ಠೆ ಮತ್ತು ಶ್ರದ್ಧೆಯನ್ನು ಸಂಕೇತಿಸುತ್ತದೆ.

ಮಧ್ಯದ ಬಿಳಿಯ ಬಣ್ಣದಲ್ಲಿರುವ ನೀಲಿ ಬಣ್ಣದ ಅಶೋಕ ಚಕ್ರವು ಕೇಸರಿ ಮತ್ತು ಹಸಿರು ಬಣ್ಣಗಳನ್ನು ಸ್ಪರ್ಶಿಸುತ್ತ ಸಾಗರ ಮತ್ತು ಆಗಸದ ನೀಲಿ ಬಣ್ಣದಲ್ಲಿ 24 ಹಲ್ಲುಗಳಿರುವ ಚಲನೆಯ ಚಕ್ರದ ಮಾದರಿಯಲ್ಲಿದೆ. ದಿನದ 24 ಗಂಟೆಗಳು ನಮ್ಮವರು ಚಲನಶೀಲತೆಯಿಂದ ಕೂಡಿರಲಿ ಮತ್ತು ಸದಾ ಜಾಗೃತ ಮನಸ್ಥಿತಿಯಿಂದಿರಲೆಂಬುದರ ಪ್ರತೀಕವಾಗಿದೆ. ಸಾಮ್ರಾಟ ಅಶೋಕನ ಪ್ರಕಾರ ಈ ಚಕ್ರ ಹಿಂಸೆಯಿಂದ ಅಹಿಂಸೆಯ ಕಡೆಗೆ ತಿರುಗುತ್ತಿರಬೇಕು. ಆದರೆ ಇಂದಿನ ವಾಸ್ತವ ಭಾರತದ ಕೆಲವು ತಲ್ಲಣಗಳನ್ನು ಕಂಡ ಕೆಲವರ ಪಾಲಿಗದು ಅಹಿಂಸೆಯಿಂದ ಹಿಂಸೆಯತ್ತ ಚಲಿಸುತ್ತಿದೆ ಎಂದೆನಿಸಬಹುದಾದರೂ ಭಾರತದಲ್ಲಿರುವ ಸಕಲ ಜೀವಿಗಳ ಪಾಲಿಗೆ ಇದೊಂದು ಪ್ರಗತಿಯ ತೇರಿನ ಚಕ್ರವಾಗಬೇಕಿದೆ. ಕೇವಲ ಸತ್ಯ ಅಹಿಂಸೆಯ ಅಸ್ತ್ರಗಳನ್ನಷ್ಟೇ ಹಿಡಿದುಕೊಂಡಿದ್ದೇವೆಂದರೆ ಆ ಬಗೆಯ ಸಹನೆ ನಮ್ಮವರ ದೌರ್ಬಲ್ಯವಲ್ಲ. ಈ ಬಗೆಯ ಅಸ್ತ್ರಗಳಿಂದಲೇ ಸೂರ್ಯಮುಳುಗದ ಸಾಮ್ರಾಜ್ಯಿಗರನ್ನು ಅವರ ದೇಶಕ್ಕೆ ಓಡಿಸಿದ್ದೇವೆಂಬ ಹೆಮ್ಮೆಯ ಸಂದೇಶವದು.

ಈ ತಿರಂಗ ಧ್ವಜಾರೋಹಣದೊಂದಿಗೆ ರಾಷ್ಟ್ರ ಗೀತೆ ಜನ ಗಣ ಮನ ಅಧಿನಾಯಕ ಜಯಹೇ... ಎಂಬ ರವೀಂದ್ರನಾಥ ಟ್ಯಾಗೋರ್ ಅವರ ಗೀತೆಯನ್ನು ನಾವೆಲ್ಲರೂ ಹೆಮ್ಮೆಯಿಂದ ನುಡಿಯುತ್ತೇವೆ. ಈ ಗೀತೆಯ ಸಾರದಂತೆ ಈ ನಾಡಿನ ಸರ್ವಜನರ ಮನದಾಳದಲ್ಲಿ ನೆಲೆಸಿರುವ ಓ ದೇವನೆ, ನಮ್ಮ ಭಾಗ್ಯದ ಬಾಗಿಲನ್ನು ತೆರೆದು ನಮ್ಮನ್ನು ಆಶೀರ್ವದಿಸುವ ಜಗತ್ ನಿಯಾಮಕನೆ, ಜಗತ್ತನ್ನು ಪಾಲಿಸುವವನೆ, ನಿನ್ನ ನಾಮ ಕೇಳುತ್ತಲೇ ಪಂಜಾಬದಿಂದ ಹಿಂದೂ ಮಹಾಸಾಗರದವರೆಗೆ ಉತ್ಸಾಹದ ಉಲ್ಲಾಸದ ತರಂಗಗಳೇಳುತ್ತವೆ. ಸರ್ವರೂ ನಿನ್ನ ಪವಿತ್ರ ನಾಮದಿಂದಲೇ ಎಚ್ಚರವಾಗುತ್ತಾರೆ, ಪಾವನರಾಗುತ್ತಾರೆ. ನಿನ್ನ ಅನಂತವಾದ ಅನುಗ್ರಹ ಪಡೆಯುವ ಅಭಿಲಾಷೆ ಹೊಂದುತ್ತಾರೆ. ಎಲ್ಲರೂ ನಿನ್ನ ಜಯಗಾನವನ್ನು ಹಾಡಲು ಆರಂಭಿಸುವರು. ನಿನಗೆ ಸದಾಸರ್ವದಾ ವಿಜಯವಾಗಲಿ ಎಂಬ ಭಾವವಿಲ್ಲಿದೆ. ಈ ಭಾವಗಳಿಗೆ ಬೇಕಾಗಿರುವುದು ಸಕಲರ ಮನದೊಳಗೆ ಇವನಾರವ ಎಂಬ ಭಾವವಳಿದು ಇವ ನಮ್ಮವನೆಂಬ ಭಾವ ಮಾತ್ರವೇ ಉಳಿಯಬೇಕಿದೆ. ಆಗಲೇ ಈ ನಾಡಿನ ತುಂಬೆಲ್ಲ ನೆಮ್ಮದಿಯ ನಾಳೆಗಳನ್ನು ಕಂಡುಕೊಳ್ಳಲು ಸಕಲರಿಗೂ ಸಾಧ್ಯವಾಗಬಹುದು. ಆಗ ನಮ್ಮೀ ನಾಡಿನ ಸ್ವಾತಂತ್ರ್ಯ ಮತ್ತು ರಾಷ್ಟ್ರ ಧ್ವಜಗಳ ಸಂದೇಶ ವಿಶ್ವಕ್ಕೆ ಪಸರಿಸಬಹುದು. ಅನುಭವವಿರುವಲ್ಲಿ ಅಮೃತತ್ವವಿರುತ್ತದೆ ಎಂಬಂತೆ ಎಪ್ಪತ್ತೈದು ವರ್ಷಗಳ ಸ್ವಾತಂತ್ರ್ಯೋತ್ಸವ ಅಮೃತ ಮಹೋತ್ಸವದ ಹಬ್ಬದ ಹಿಗ್ಗಿನ ಭಾವದಲ್ಲಿ ಈ ನಾಡನ್ನು ಸದಾ ಅಮೃತಮಯವಾಗಿರಿಸೋಣ. ■



Downloaded From:www.kpscvaani.com

# ಬ್ರಿಟಿಷ್ ಅಧಿಕಾರಿಗಳ ದೌರ್ಜನ್ಯದ ವಿರುದ್ಧ ಬಂಡಾಯ ಎದ್ದ ರೈತರು

ಎನ್. ಜಗನ್ನಾಥ ಪ್ರಕಾಶ್




**ಬೇ**ಸಾಯಗಾರರೇ ಭಾರತದ ಬುನಾದಿಯ ಮೂಲ. ನಮ್ಮ ದೇಶದ ಆರ್ಥಿಕತೆಗೆ ರೈತರೇ ಅಡಿಪಾಯ. ಈ ಸಂಗತಿ ಭಾರತವನ್ನು ಕೈವಶ ಮಾಡಿಕೊಂಡ ಬ್ರಿಟಿಷರಿಗೆ ತಿಳಿಯಲು ಹೆಚ್ಚು ಸಮಯ ಬೇಕಾಗಲಿಲ್ಲ.

ಭಾರತದ ಆಡಳಿತವನ್ನು ತಮ್ಮ ಕಪಿಮುಷ್ಠಿಯಲ್ಲಿ ಇಟ್ಟುಕೊಳ್ಳಬೇಕೆಂಬ ಹಠಕ್ಕೆ ಬಿದ್ದಿದ್ದ ಬ್ರಿಟಿಷರು ದೇಶಿಯ ಸಂಸ್ಥಾನಗಳನ್ನು ಮೊದಲು ಹತೋಟಿಗೆ ತಂದುಕೊಂಡು, ನಂತರ ತೆರಿಗೆಗಳನ್ನು ಎಲ್ಲರ ಮೇಲೂ ಹೇರಲು ಶುರುವಿಟ್ಟುಕೊಂಡರು. ದೇಶದ ಆರ್ಥಿಕತೆಗೆ ಬಹುಮುಖ್ಯ ಕೊಡುಗೆ ಕೊಡುತ್ತಿದ್ದ ರೈತರತ್ತ ಅವರ ವಕ್ರದೃಷ್ಟಿ ಹರಿಯಿತು.

ಕರ್ನಾಟಕದ ಮಲೆನಾಡು ಪ್ರದೇಶ ಸಂಪದ್ಭರಿತವಾದ ಪ್ರಾಂತ್ಯ. ಪಶ್ಚಿಮ ಘಟ್ಟಗಳಲ್ಲಿ ಹುದುಗಿದ್ದ ಕೊಡಗು ದಕ್ಷಿಣ–ಉತ್ತರ ಕನ್ನಡ ಪ್ರದೇಶಗಳ ಮೇಲೆ ಕಣ್ಣು ಹಾಯಿಸಿದ ಬಿಳಿಯರು ರೈತರಿಂದ ಹೆಚ್ಚು ಕಂದಾಯ ಪೀಕಲು ಆರಂಭಿಸಿದರು.

ದಕ್ಷಿಣ ಕನ್ನಡದ ಪುತ್ತೂರು ಸುಳ್ಯಗಳಲ್ಲಿ ಬಹುಕಾಲದಿಂದ ಕೃಷಿಕರು ರಾಜರಿಗೆ ತಾವು ಬೆಳೆದ ಫಸಲು. ಸಿದ್ಧಮಾಡಿದ ವಸ್ತುಗಳ ಕಂದಾಯ ಕಟ್ಟುವ ಪರಿಪಾಠವನ್ನು ಇಟ್ಟುಕೊಂಡಿದ್ದರು. ಆದರೆ ಬ್ರಿಟಿಷರು ರೈತರೆಲ್ಲರೂ ನಗದು ರೂಪದಲ್ಲೇ ಕಂದಾಯ ಕಟ್ಟಬೇಕೆಂಬ ಕಟ್ಟಪ್ಪಣೆ ಮಾಡಿಬಿಟ್ಟರು. ಇದರಿಂದ ರೈತಾಪಿ ಜನರಿಗೆ ಕಷ್ಟದ ಪರಿಸ್ಥಿತಿ ಎದುರಾಯಿತು. ಅವರಲ್ಲಿ ತಾವು ಬೆಳೆದ ಉತ್ಪನ್ನಗಳು ಮಾತ್ರವೇ ಇದ್ದವು. ಹಣ ಬೇಕಾದರೆ ಸಿರಿವಂತರ ಬಳಿ ಜಮೀನ್ದಾರರ ಬಳಿ ಕೈಚಾಚಬೇಕಿತ್ತು. ಪರಿಸ್ಥಿತಿಯ ದುರ್ಲಾಭ ಪಡೆದ ಹಣವಂತರು. ಜಮೀನುದಾರರು, ಹೆಚ್ಚಿನ ಬಡ್ಡಿ ಕೇಳಲು, ಉತ್ಪನ್ನಗಳಿಗೆ ಕಡಿಮೆ ಬೆಲೆ ನಿಗದಿ ಮಾಡುವುದಕ್ಕೆ ಮೊದಲಿಟ್ಟರು. ಇದರಿಂದ ರೈತರಿಗೆ ಎಲ್ಲಿಲ್ಲದ ಸಂಕಷ್ಟ ಎದುರಾಗಿ ತೊಂದರೆಗೆ ಒಳಗಾದರು.

ಸಿರಿವಂತರು ಅಧಿಕಾರಿಗಳ ಅಟ್ಟಹಾಸ ಹೆಚ್ಚಾದಂತೆ ರೈತಾಪಿ ಜನರು ವಿವಿಧ ರೂಪದ ಶೋಷಣೆಗೆ ಸಿಕ್ಕಿಬಿದ್ದು ಬದುಕು ಸಾಗಿಸುವುದಕ್ಕೆ ಕಷ್ಟ ಪಡಬೇಕಾದ ಪರಿಸ್ಥಿತಿ ಉಂಟಾಯಿತು. ತಮ್ಮ ದುಸ್ಥಿತಿಗೆ ಕಾರಣವಾಗಿದ್ದ ಬ್ರಿಟಿಷ್ ಆಡಳಿತ ಯಂತ್ರದ ವಿರುದ್ಧ ದನಿ ಎತ್ತಲು ನಿರ್ಧರಿಸಿದ ರೈತರು ಸುಳ್ಯ–ಪುತ್ತೂರಿನ ತಮ್ಮ ಹಿತಚಿಂತಕ ಮುಖಂಡರನ್ನು ಸಂಪರ್ಕಿಸಿದರು.

ಸುಳ್ಯ ಭಾಗದ ರೈತರು ಕೆದಂಬಾಡಿ ರಾಮಯ್ಯ ಗೌಡರಲ್ಲಿ ಅಹವಾಲು ಹೇಳಿಕೊಂಡು ಇದರ ವಿರುದ್ಧ ಹೋರಾಡಲು ತಾವು ಸಿದ್ಧವೆಂಬ ಸಂದೇಶ ಕೊಟ್ಟದ್ದೇ ಸಶಸ್ತ್ರರಾಗಿರುವ ಬ್ರಿಟಿಷರನ್ನು ಎದುರಿಸಲು ಗಿರಿಕಂದರ ನಾಡಿನ ಜನರು ದೇಸಿ ತಂತ್ರಗಳನ್ನು ಕಟ್ಟುಮಸ್ತಾಗಿದ್ದ ರೈತರಿಗೆ ತಿಳಿಸಿಕೊಡುವ ಕೆಲಸ ಶುರು ಮಾಡಿದರು.

1837ರ ಆರಂಭದಲ್ಲಿ ಈ ಎಲ್ಲಾ ಘಟನೆಗಳಿಗೆ ಕೊಡಗು ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಕೆಲವು ಭಾಗಗಳು ಸಾಕ್ಷಿಯಾಗಿದ್ದವು. ಆಡಳಿತವನ್ನು ವಿರೋಧಿಸಿದವರಿಗೆ ಅಧಿಕಾರಿಗಳ ಕಿರುಕುಳವೂ ಹೆಚ್ಚಾಗುತ್ತಾ ಹೋಯಿತು. ರೈತರು ಇದರಿಂದ ರೊಚ್ಚಿಗೆದ್ದರು. ಬ್ರಿಟಿಷರನ್ನು ಎದುರಿಸಲು ಸೂಕ್ತ ದೇಸಿ ಯುದ್ಧ ತಂತ್ರಗಳನ್ನು ತಿಳಿದುಕೊಳ್ಳುವಲ್ಲಿ ಉತ್ಸಾಹ ತೋರಿದರು. ಗುಪ್ತವಾಗಿ ಹಸಿರು ಗುಡ್ಡಗಳ ತಪ್ಪಲಲ್ಲಿ ತರಬೇತಿಯು ವ್ಯವಸ್ಥಿತವಾಗಿ ನಡೆಯುತ್ತಲೇ ಇತ್ತು. ರೈತರು ಸೇನೆಯ ರೀತಿ ರಿವಾಜುಗಳನ್ನು ಕಲಿತರು.

1837ರ ಮಾರ್ಚ್ 3ರ ವೇಳೆಗೆ ಬ್ರಿಟಿಷ್ ಅಧಿಕಾರಿಗಳ ದೌರ್ಜನ್ಯ ಮಿತಿಮೀರಿದಾಗ ರೈತರು ಬಂಡಾಯ ಏಳಲು ನಿರ್ಧರಿಸಿದರು. ಇಂತಹ ರೈತ ಸೈನಿಕರ ಸಂಖ್ಯೆ 1500 ರಿಂದ 2000 ಅನ್ನು ಮೀರಿತ್ತು. ಸುಳ್ಯ ಸಮೀಪದ ಮದುವೆಗದ್ದೆಯಲ್ಲಿ ಒಟ್ಟಾಗಿ ಸೇರಿದ ರೈತ ಸೈನಿಕರು ವಿವಿಧ ತಂಡಗಳಾಗಿ ಬ್ರಿಟಿಷ್ ಆಡಳಿತದ ಕೇಂದ್ರ ಸ್ಥಾನವಾಗಿದ್ದ ಮಂಗಳೂರು ಕಡೆ ಹೊರಟರು.

ಸರ್ಕಾರಿ ಕಚೇರಿಗಳನ್ನು ಖಜಾನೆಗಳನ್ನು ವಶಪಡಿಸಿಕೊಳ್ಳಲು ಕಾರ್ಯಕ್ರಮ ರೂಪಿಸಲಾಗಿತ್ತು. ಅದರಂತೆ ಬೆಳ್ಳಾರೆಯಲ್ಲಿ ಸರ್ಕಾರಿ ಖಜಾನೆಯನ್ನು ಕದಂಬಾಡಿ ರಾಮಯ್ಯ ಗೌಡರ ನೇತೃತ್ವದ ರೈತ ಸೈನಿಕರು ಸ್ವಾಧೀನಪಡಿಸಿಕೊಂಡರು. ಹೋಗು ಹೋಗುತ್ತಾ ಈ ಕೆಲಸ ಹೋರಾಟದಲ್ಲಿ ರೈತ ಸೈನಿಕರು ಮೇಲುಗೈ ಸಾಧಿಸುತ್ತಲೇ ಸಾಗಿದರು.

ಸುಳ್ಯದಿಂದ ಹೊರಟ ರೈತರ ದಂಡು ಹಾದಿಯಲ್ಲಿ ಸಿಕ್ಕ ಊರುಗಳಲ್ಲಿ ಸರ್ಕಾರಿ ಕಚೇರಿಗಳನ್ನು ಸ್ವಾಧೀನ ಮಾಡಿಕೊಳ್ಳುತ್ತಾ ಸಾಗಿ, ಕೊನೆಗೆ ರೈತರ ದಂಡು ಮಂಗಳೂರಿನ ಬ್ರಿಟಿಷ್ ಕಚೇರಿಯನ್ನು ಸುತ್ತುವರೆದು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡಿತು. ಅಲ್ಲಿದ್ದ ಬ್ರಿಟಿಷ್ ಅಧಿಕಾರಿಗಳನ್ನು ಕೂಡು ಹಾಕಿದ ರೈತರು ಅಶಕ್ತರು ಮತ್ತು ಹೆಂಗಸರನ್ನು ಬಿಟ್ಟುಬಿಟ್ಟರು.


ಅವರು ಒಂದಲ್ಲ ಎರಡು ವಾರ ಮಂಗಳೂರು ಬ್ರಿಟಿಷ್ ಆಡಳಿತವನ್ನು ರೈತ ಸೈನಿಕರು ತಮ್ಮ ಸುಪರ್ದಿಗೆ ತೆಗೆದುಕೊಂಡರು. ಇದರಿಂದ ಹಿನ್ನಡೆ ಅನುಭವಿಸಿದ ಬ್ರಿಟಿಷರು ಹೆಚ್ಚಿನ ಸೈನ್ಯವನ್ನು ಮಂಗಳೂರಿಗೆ ಕರೆಯಿಸಿಕೊಂಡು ರೈತ ಸೈನಿಕರನ್ನು ಹೊರಹಾಕಿ ಮತ್ತೆ ಆಡಳಿತ ಕಚೇರಿಗಳಲ್ಲಿ ತಮ್ಮ ಅಧಿಕಾರ ಸ್ಥಾಪಿಸಿದರು.

ಭಾರತದ ಮೊದಲ ಸ್ವಾತಂತ್ರ್ಯ ಹೋರಾಟಕ್ಕೆ ಮೊದಲೇ ಬ್ರಿಟಿಷರ ವಿರುದ್ಧ ಸೆಣೆಸಿ ಅವರ ವಿರುದ್ಧ ವಿಜಯ ಸಾಧಿಸಿದ್ದು ಉಲ್ಲೇಖಾರ್ಹ. ಇದು ಅಮರ ಸುಳ್ಯದ ಕ್ರಾಂತಿಯೆಂದು ಚರಿತ್ರೆಯಲ್ಲಿ ಚಿರಸ್ಥಾಯಿಯಾಗಿದೆ. ■



Downloaded From:www.kpscvaani.com

# ಪದಬಂಧ-33




ವಿದ್ಯಾ ವಿ. ಹಾಲಭಾವಿ

## ಎಡದಿಂದ ಬಲಕ್ಕೆ

1. ರೈತರಿಗೆ ಡೀಸಲ್ ಖರೀದಿಗಾಗಿ ಸಹಾಯ ಧನ ನೀಡುವ ಯೋಜನೆ (4)
4. ಕ್ರೈಸ್ತರು ಧರಿಸುವ ಒಂದು ಧಾರ್ಮಿಕ ಲಾಂಛನ (3)
6. ಮುಂದೆ ಬರಲಿರುವ ಕಾಲ (3)
8. ರುಚಿಯುಳ್ಳ ರಸಸ್ವಾದನ ಶಕ್ತಿ! (4)
11. ತಂಬಾಕು ಕೊಯ್ಯಲು ಬಳಸುವ ಕಿರುಗತ್ತಿ (2)
12. ಈತ ಬಲು ಜಿಪುಣ (2)
13. ಮನದೊಳಗಿರುವ ಕಾಮ (3)
14. ಹೆಜ್ಜೆ ಹಾಕುವಾಗ ಕಿಣಿಕಿಣಿ ಶಬ್ದ ಮಾಡುವ ಕಿರುಗಂಟೆ (2)
15. ಪರಾಜಯದಲ್ಲೇ ಗೆಲುವು ಅಡಗಿದೆಯಲ್ಲಾ! (2)
16. ದಾರ ಹಿಡಿದ ಸೈನ್ಯದ ಮುಖ್ಯಸ್ಥ ತಿರುಗಿದ್ದಾನಲ್ಲಾ! (4)
18. ದಯೆಗೊಂದು ಪರ್ಯಾಯ ಪದ (3)
20. ಈತ ಕಬ್ಬಿಣದ ಕೆಲಸಗಾರ (3)
21. ಮನಸ್ಸಿನ ತೇರು! (4)

## ಮೇಲಿಂದ ಕೆಳಕ್ಕೆ

2. ತಂದೆ ತಾಯಿ ಇರುವ ಊರು (3)
3. ಭಕ್ತನು ಮುಕ್ತಿಗಾಗಿ ತೋರಿದ ಶ್ರದ್ಧೆಯಿಲ್ಲಿ ತಿರುವು ಮುರುವಾಗಿದೆ (2)
4. ಗುರುವಿಗೆ ತಕ್ಕ ವಿದ್ಯಾರ್ಥಿ! (2)
5. ಮನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಕಾರ್ಯಕ್ರಮವಿದು (3)
7. ಇದು ರಾಜ್ಯದ 31ನೇ ಜಿಲ್ಲೆಯಾಗಿ ಉದಯವಾಗಿದೆ (6)
9. ಬೇರೆಯ ಅಭಿಪ್ರಾಯ (5)
10. ಕಾಫಿನಾಡು ಎಂದೇ ಹೆಸರಾಗಿರುವ ಜಿಲ್ಲೆ (6)
11. ಬಾಡಿಗೆ ಕೊಡುವವನು (5)
15. ಜನರ ಹತ್ತಿರವಿರುವ ತಂದೆ (3)
17. ದಾರದೊಳಗಿರುವ ಒಡೆಯ (3)
18. ಕಠೋರವಾಗಿರುವ ಕೈ! (2)
19. ಮರದ ಪೀಠವಿಲ್ಲಿ ಉಲ್ಟಾ ಆಗಿದೆಯಲ್ಲಾ! (2)

**ಉತ್ತರ**

**ಎಡದಿಂದ ಬಲಕ್ಕೆ**

1. ರೈತಶಕ್ತಿ 4. ಶಿಲುಬೆ 6. ಭವಿಷ್ಯ 8. ಅಭಿರುಚಿ 11. ಬಾಕು 12. ಲೋಭಿ 13. ಮದನ 14. ಗೆಜ್ಜೆ 15. ಜಯ 16. ರದಾರಸ 18. ಕರುಣೆ 20. ಕಮ್ಮಾರ 21. ಮನೋರಥ

**ಮೇಲಿಂದ ಕೆಳಕ್ಕೆ**

2. ತವರು 3. ಕ್ತಿಭ 4. ಶಿಷ್ಯ 5. ಬೆಳಕು 7. ವಿಜಯನಗರ 9. ಭಿನ್ನಾಭಿಪ್ರಾಯ 10. ಚಿಕ್ಕಮಗಳೂರು 11. ಬಾಡಿಗೆದಾರ 15. ಜನಕ 17. ದಾತಾರ 18. ಕರ 19. ಣೆಮ

**–: ಸೂಚನೆ :–**

ಲೇಖನಗಳನ್ನು ಬರೆಯುವ ಆಸಕ್ತರು ವಾರ್ತಾ ಜನಪದಕ್ಕೆ ಲೇಖನಗಳನ್ನು ಕಳುಹಿಸಬಹುದು. ಸರ್ಕಾರದ ಯೋಜನೆಗಳು, ಅಭಿವೃದ್ಧಿಗಳು, ಪ್ರಗತಿಪರ ರೈತರ ಯಶೋಗಾಥೆ, ಜನಜಾಗೃತಿ ಮೂಡಿಸುವ ವಿಚಾರಗಳು, ಕರ್ನಾಟಕದ ಪ್ರೇಕ್ಷಣೀಯ ಸ್ಥಳಗಳು, ಕರ್ನಾಟಕದ ಇತಿಹಾಸ ಸಾರುವ ಗತ ವೈಭವಗಳು, ವಿವಿಧ ವಲಯದಲ್ಲಿ ಸಾಧನೆ ಮಾಡಿರುವ ರಾಜ್ಯದ ಸಾಧಕರ ಪರಿಚಯ ಇಂತಹ ವಿಷಯಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು.

ನುಡಿ ತಂತ್ರಾಂಶದಲ್ಲಿ ಟೈಪ್ ಮಾಡಿದ ಕನಿಷ್ಠ 500 ಪದಗಳಿಂದ 750 ಪದಗಳಿಗೆ ಮೀರದಂತೆ ಲೇಖನವನ್ನು ಪೂರಕವಾದ ಛಾಯಾಚಿತ್ರದೊಂದಿಗೆ ನಮ್ಮ ಇ–ಮೇಲ್ ವಿಳಾಸ janapada2008@gmail.comಗೆ ಕಳುಹಿಸಬಹುದು. ಲೇಖನಗಳ ಆಯ್ಕೆ ತೀರ್ಮಾನ ಅಂತಿಮವಾಗಿ ಸಂಪಾದಕ ಮಂಡಳಿಯದಾಗಿರುತ್ತದೆ. ಲೇಖನದ ಜೊತೆಗೆ ತಮ್ಮ ಹೆಸರು ವಿಳಾಸ ಮತ್ತು ದೂರವಾಣಿಯನ್ನು ನಮೂದಿಸತಕ್ಕದ್ದು.

Published by : Dr P S Harsha, IPS, Commissioner, Department of Information & Public Relation, 17, Varthasoudha, Bhagwan Mahaveer Road, Bangalore - 560 001
Printed at :M/s Lavanya Mudrana, #19, Vidyapeeta Circle, Banashankari 1st Stage, Bangalore-560050

Downloaded From:www.kpscvaani.com



ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ರಾಜ್ಯ ಸಭೆಗೆ ನಾಮನಿರ್ದೇಶನಗೊಂಡ ಶ್ರೀಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆ ಅವರಿಗೆ ಶುಭಾಶಯ ಕೋರಿ ಅಭಿನಂದನೆ ಸಲ್ಲಿಸಿದ ಸಂದರ್ಭ.



ರಾಜ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರ ರಾಷ್ಟ್ರೀಯ ಸಮ್ಮೇಳನದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಪಾಲ್ಗೊಂಡಿದ್ದರು. ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಸಚಿವರಾದ ನರೇಂದ್ರ ಸಿಂಗ್ ತೊಮರ್, ಕೇಂದ್ರ ಆರೋಗ್ಯ ಮತ್ತು ರಸಗೊಬ್ಬರ ಹಾಗೂ ರಾಸಾಯನಿಕ ಖಾತೆ ಸಚಿವರಾದ ಮನ್ ಸುಖ್ ಮಾಂಡವೀಯ, ಕೇಂದ್ರ ಕೃಷಿ ಖಾತೆ ರಾಜ್ಯ ಸಚಿವರಾದ ಶೋಭಾ ಕರಂದ್ಲಾಜೆ ಹಾಗೂ ಕೈಲಾಶ್ ಚೌಧರಿ, ರಾಜ್ಯ ಸರ್ಕಾರದ ಕೃಷಿ ಸಚಿವರಾದ ಬಿ.ಸಿ.ಪಾಟೀಲ್, ತೋಟಗಾರಿಕೆ ಸಚಿವರಾದ ಮುನಿರತ್ನ ಅವರು ಉಪಸ್ಥಿತರಿದ್ದಾರೆ.

Downloaded From:www.kpscvaani.com

"VARTHA JANAPADA" Monthly - August 2022
"ವಾರ್ತಾ ಜನಪದ" ಮಾಸಿಕ – ಆಗಸ್ಟ್ 2022



RNI No. KAR/KAN/2017/75029

Regd No.KA/BGGPO/2583/2021-23 Licensed to post without prepayment Licence No. PMG/BG/ WPP-365/2021-23
Published on 27th, Dt. 29th & 30th Posted at (Every month), Bangalore PSO, Mysore Road, Bangalore - 26




Downloaded From:www.kpscvaani.com